


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 11 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 117 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




# ವಿಶ್ವಾಸಮತ ಗೆದ್ದ ಮೋದಿ

**ನವದೆಹಲಿ, ಆ.10– ಮಣಿಪುರ ಹಿಂಸಾಚಾರದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಪ್ರತಿಪಕ್ಷಗಳು ಲೋಕಸಭೆಯಲ್ಲಿ ಮಂಡಿಸಿದ್ದ ಅವಿಶ್ವಾಸ ನಿರ್ಣಯಕ್ಕೆ ಗುರುವಾರ ಸೋಲಾಗಿದೆ.**

ಜುಲೈ 26 ರಂದು ಮೋದಿ ಸರ್ಕಾರದ ವಿರುದ್ಧ ಪ್ರತಿಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಿದ್ದವು. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಅದನ್ನು ಅಂಗೀಕರಿಸಿ, ಚರ್ಚೆಗೆ ಅವಕಾಶ ನೀಡಿದ್ದರು. ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಿದ ಪ್ರಧಾನಿ ಮೋದಿ, ಪ್ರತಿಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಈ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಪ್ರತಿಪಕ್ಷಗಳ ಸದಸ್ಯರು ಮಣಿಪುರ, ಮಣಿಪುರ ಎಂದು ಘೋಷಣೆ ಕೂಗುತ್ತಾ ಕಲಾಪದಿಂದ ಹೊರನಡೆದರು.

ಪ್ರಧಾನಿ ಮೋದಿ ಅವರ ಸುದೀರ್ಘ ಭಾಷಣದ ನಂತರ, ಪ್ರತಿಪಕ್ಷಗಳ ಸಭಾತ್ಯಾಗದ ನಡುವೆ ಅವಿಶ್ವಾಸ ನಿರ್ಣಯವನ್ನು ಮತಕ್ಕೆ ಹಾಕಲಾಯಿತು. ಬಳಿಕ ಧ್ವನಿಮತದ ಮೂಲಕ ಅವಿಶ್ವಾಸ ನಿರ್ಣಯವನ್ನು ತಿರಸ್ಕರಿಸಲಾಯಿತು. ಇದರೊಂದಿಗೆ ಪ್ರತಿಪಕ್ಷಗಳ ಮೈತ್ರಿಕೂಟ INDIAಗೆ ಸೋಲುಂಟಾಗಿದೆ.

ಭಾಷಣದ ಕೊನೆಯಲ್ಲಿ ಮಣಿಪುರ ವಿಚಾರವನ್ನು ಪ್ರಸ್ತಾಪಿಸಿದ ಪ್ರಧಾನಿ ಮೋದಿ, ಮಣಿಪುರ ಘಟನೆ ಬಗ್ಗೆ ಸದನದಲ್ಲಿ ಅಮಿತ್ ಶಾ ಅವರು ಮಾಹಿತಿ ನೀಡಿದ್ದಾರೆ. ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸಲು ಕೇಂದ್ರ, ಮಣಿಪುರ ಸರ್ಕಾರದಿಂದ ಯತ್ನ ನಡೆಯುತ್ತಿದೆ. ಮಣಿಪುರ ರಾಜ್ಯದಲ್ಲಿ ಖಂಡಿತಾ ಶಾಂತಿ ನೆಲೆಸಲಿದೆ ಎಂದು ಹೇಳಿದರು. ಇಡೀ ದೇಶ ನಿಮ್ಮ ಜೊತೆಗಿದೆ, ನಾವೆಲ್ಲರೂ ಒಟ್ಟಾಗಿ ಹೋರಾಡೋಣ. ಮಣಿಪುರ ರಾಜ್ಯ ಅಭಿವೃದ್ಧಿಯಾಗಲಿದೆ, ಶಾಂತಿ ಸುವ್ಯವಸ್ಥೆ ನೆಲೆಸಲಿದೆ ಎಂದು ಪ್ರಧಾನಿ ಭರವಸೆ ನೀಡಿದರು.

**ಪ್ರತಿಪಕ್ಷಗಳಿಂದ ಸಭಾತ್ಯಾಗ:** ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯದ ಮೇಲೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡುತ್ತಿದ್ದ ವೇಳೆಯೇ ಪ್ರತಿಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದರು. ● 9ನೇ ಪುಟಕ್ಕೆ





## ವಿಪಕ್ಷಗಳ ಅವಿಶ್ವಾಸ ನಮಗೆ ಅದೃಷ್ಟವೇ ಸರಿ

ದೇಶದ ಜನರು ನಮ್ಮ ಸರ್ಕಾರದ ಮೇಲೆ ನಂಬಿಕೆಯನ್ನು ಮತ್ತೆ ಮತ್ತೆ ತೋರಿಸಿದ್ದಾರೆ. ದೇಶದ ಕೋಟ್ಯಾಂತರ ಜನರಿಗೆ ಕೃತಜ್ಞತೆಯನ್ನು ಸಲ್ಲಿಸಲು ನಾನು ಇಲ್ಲಿದ್ದೇನೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ವೇಳೆ ಪ್ರತಿಕ್ರಿಯಿಸಿದ ಅವರು, ಜನರ ಆಶೀರ್ವಾದದೊಂದಿಗೆ ಹಿಂದಿನ ಎಲ್ಲ ದಾಖಲೆಗಳನ್ನು ಮುರಿದು ಎನ್‌ಡಿಎ ಮತ್ತು ಬಿಜೆಪಿಯನ್ನು ಮಹಾ ವಿಜಯದ ಮೂಲಕ ಮರಳಿ ಅಧಿಕಾರಕ್ಕೆ ತರಲು ನೀವು (ವಿರೋಧ ಪಕ್ಷಗಳು) ನಿರ್ಧರಿಸಿರುವುದನ್ನು ನಾನು ಇಂದು ನೋಡುತ್ತಿದ್ದೇನೆ ಎಂದು ಪ್ರಧಾನಿ ಮೋದಿ ಹೇಳಿದರು. ಒಂದು ರೀತಿಯಲ್ಲಿ, ಪ್ರತಿಪಕ್ಷಗಳ ಅವಿಶ್ವಾಸ ನಿರ್ಣಯವು ಯಾವಾಗಲೂ ನಮಗೆ ಅದೃಷ್ಟವಾಗಿದೆ. ಇಂದು ನೀವು (ವಿರೋಧ ಪಕ್ಷಗಳು) 2024ರ ಲೋಕಸಭೆ ಚುನಾವಣೆಯಲ್ಲಿ ಎನ್‌ಡಿಎ ಮತ್ತು ಬಿಜೆಪಿ ಹಿಂದಿನ ಎಲ್ಲ ದಾಖಲೆಗಳನ್ನು ಮುರಿದು ಅಭೂತಪೂರ್ವ ಜಯದೊಂದಿಗೆ ಮರಳಿ ಬರಲು ನಿರ್ಧರಿಸಿರುವುದನ್ನು ನಾನು ನೋಡುತ್ತಿದ್ದೇನೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ದೇವರು ತುಂಬಾ ಕರುಣಾಮಯಿ. ಈ ನಿರ್ಣಯವನ್ನು ತಂದಿರುವುದು ದೇವರ ಆಶೀರ್ವಾದ ಎಂದು ನಾನು ನಂಬುತ್ತೇನೆ. ನಾನು 2018ರಲ್ಲಿ ಅವಿಶ್ವಾಸ ಗೊತ್ತುವಳಿ ಮಂಡನೆ ವೇಳೆ ಹೇಳಿದ್ದೆ. ಇದು ಸದನದಲ್ಲಿ ನಮ್ಮ ಪರೀಕ್ಷೆ ಅಲ್ಲ, ಬದಲಾಗಿ ಅವರ ಪರೀಕ್ಷೆ ಎಂದಿದ್ದೆ. ಪರಿಣಾಮವಾಗಿ ಅವರು ಕಳೆದ ಚುನಾವಣೆಯಲ್ಲಿ ಸೋತರು ಎಂದು ಮೋದಿ ಹೇಳಿದ್ದಾರೆ.

## INDIA ಮೈತ್ರಿ ಹಳೇ ಕಟ್ಟಡದ ಮೇಲಿನ ಪ್ಲಾಸ್ಟರ್ ಇದ್ದಂತೆ

### 2028ರಲ್ಲೂ ಅವಿಶ್ವಾಸ ನಿರ್ಣಯ ಮಂಡಿಸುತ್ತೀರಿ: ಪ್ರಧಾನಿ ಮೋದಿ

ನವದೆಹಲಿ, ಆ.10– ಪ್ರತಿಪಕ್ಷಗಳ ಮೈತ್ರಿಕೂಟ INDIA ಹಳೆಯ ಕಟ್ಟಡದ ಮೇಲಿನ ಪ್ಲಾಸ್ಟರ್ ಇದ್ದಂತೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಗೇಲಿ ಮಾಡಿದ್ದಾರೆ.

ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಗೆ ಉತ್ತರಿಸಿದ ಪ್ರಧಾನಿ ಮೋದಿ, ದೇಶದ ಜನರು ನಮ್ಮ ಸರ್ಕಾರದ ಮೇಲೆ ವಿಶ್ವಾಸ ಇಟ್ಟಿದ್ದಾರೆ. ದೇಶದ ಕೋಟಿ ಕೋಟಿ ಜನರಿಗೆ

### 'ಅಶಿಸ್ತಿನ ವರ್ತನೆ' ಲೋಕಸಭೆಯಿಂದ ಅಧೀರ್ ರಂಜನ್ ಚೌಧರಿ ಅಮಾನತು!

ನವದೆಹಲಿ, ಆ.10–ಲೋಕಸಭೆಯ ವಿರೋಧ ಪಕ್ಷದ ನಾಯಕ ಮತ್ತು ಕಾಂಗ್ರೆಸ್ ಸಂಸದ ಅಧೀರ್ ರಂಜನ್ ಚೌಧರಿ ಅವರನ್ನು 'ಅಶಿಸ್ತಿನ' ನಡವಳಿಕೆಗಾಗಿ ಲೋಕಸಭೆಯಿಂದ ಅಮಾನತುಗೊಳಿಸಲಾಗಿದೆ. ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ಅವರು ಅಮಾನತು ನಿರ್ಣಯವನ್ನು ಮಂಡಿಸಿದರು. ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರ ಕಾರ್ಯವೈಖರಿಯನ್ನು ವಿಶೇಷಾಧಿಕಾರಗಳ ಸಮಿತಿಗೆ ಶಿಫಾರಸು ಮಾಡಲು ಲೋಕಸಭೆ ನಿರ್ಧರಿಸಿದೆ. ಸಮಿತಿಯ ತೀರ್ಮಾನದವರೆಗೆ ಅವರನ್ನು ಲೋಕಸಭೆಯಿಂದ ಅಮಾನತುಗೊಳಿಸುವ ಪ್ರಸ್ತಾವನೆಗೆ ● 9ನೇ ಪುಟಕ್ಕೆ



### ವಿಪಕ್ಷಗಳಿಗೆ ಪಾಕ್ ಮೇಲೆ ವಿಶ್ವಾಸವಿದೆ; ಭಾರತೀಯ ಸೇನೆ ಮೇಲೆ ನಂಬಿಕೆ ಇಲ್ಲ

ಧನ್ಯವಾದ ಸಮರ್ಪಿಸುತ್ತೇನೆ. ನಮಗೆ ಭಗವಂತನ ಮೇಲೆ ಹೆಚ್ಚು ನಂಬಿಕೆ ಇದೆ ಎಂದರು. ಪ್ರತಿಪಕ್ಷಗಳಿಗೆ ಪಾಕಿಸ್ತಾನದ ಮೇಲೆ ವಿಶ್ವಾಸವಿದೆ. ಆದರೆ ಭಾರತೀಯ ಸೇನೆ ಮೇಲೆ ವಿಶ್ವಾಸವಿಲ್ಲ. ಕಾಂಗ್ರೆಸ್ ತನ್ನ ಅಸ್ತಿತ್ವ ಉಳಿಸಿಕೊಳ್ಳಲು INDIAದಲ್ಲಿ ಎರಡು 'ಐ'ಗಳನ್ನು ಸೇರಿಸಿದೆ. ಇಂಡಿಯಾ ಮೈತ್ರಿಯು 'ಘಮಾಂಡಿಯ' ಮೈತ್ರಿಯಾಗಿದ್ದು, ಪ್ರತಿಯೊಬ್ಬರೂ ಅದರ ಲಾಭ ಪಡೆಯಲು ಬಯಸುತ್ತಾರೆ ● 9ನೇ ಪುಟಕ್ಕೆ

ಪಾರಂಪರಿಕ ಲ್ಯಾನ್ಸ್‌ಡೌನ್ ಕಟ್ಟಡದ ಅಮೂಲ್ಯ ಮರದ ಕಿಟಕಿ, ಬಾಗಿಲು, ಸರಳು ಖದೀಮರ ಪಾಲು; ಒಳಗಿದ್ದವಂತೆ ಅಪರಿಚಿತ ಶವಗಳು!
■ ಪುಟ–4







## ಆ.27ರಂದು ಏಕಕಾಲದಲ್ಲಿ 11 ಸಾವಿರ ಕಡೆ ಗೃಹಲಕ್ಷ್ಮಿ ಯೋಜನೆಗೆ ಚಾಲನೆ

### ಇದುವರೆಗೆ 1.05 ಕೋಟಿ ಯಜಮಾನಿಯರ ಹೆಸರು ನೋಂದಣಿ

ಬೆಂಗಳೂರು, ಆ.10–ಎಲ್ಲರ ಅನುಕೂಲಕ್ಕೆ ಅನುಗುಣವಾಗಿ ಆ. 20ರ ಬದಲಿಗೆ ಆ. 27ರಂದು ರಾಜ್ಯದ 11 ಸಾವಿರ ಕಡೆಗಳಲ್ಲಿ ಗೃಹಲಕ್ಷ್ಮಿ ಯೋಜನೆಗೆ ಬೃಹತ್ ಮಟ್ಟದಲ್ಲಿ ಚಾಲನೆ ನೀಡಲು ತೀರ್ಮಾನಿಸಿದ್ದೇವೆ. ಈ ಯೋಜನೆಯಲ್ಲಿ ನೋಂದಣಿಯಾಗಿರುವ 1.05 ಕೋಟಿ ಫಲಾನುಭವಿಗಳಿಗೆ ಆಗಸ್ಟ್ ತಿಂಗಳ ಹಣ ಖಾತೆಗೆ ಜಮೆ ಆಗಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ಗೃಹಲಕ್ಷ್ಮಿ ಯೋಜನೆ ಕುರಿತ ಸಭೆ ಬಳಿಕ ವಿಕಾಸಸೌಧದಲ್ಲಿ ಗುರುವಾರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಡಿಸಿಎಂ ಶಿವಕುಮಾರ್ ಅವರು, ಬೆಳಗಾವಿಯಲ್ಲಿ ಮುಖ್ಯ ಕಾರ್ಯಕ್ರಮ ನಡೆಯಲಿದ್ದು, ಪ್ರತಿ ಗ್ರಾಮ ಪಂಚಾಯತಿಯಲ್ಲಿ ನೇರಪ್ರಸಾರವಾಗಲಿದೆ. ಪ್ರತಿ ಪಂಚಾಯಿತಿಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆ. ಪ್ರತಿ ವಾರ್ಡಿನಲ್ಲಿ ಸಂಭ್ರಮದಿಂದ ಆಚರಣೆ ಮಾಡುವಂತೆ ಸೂಚನೆ ನೀಡಿದ್ದೇವೆ. ಜೂಮ್ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ನೇರಪ್ರಸಾರ ವ್ಯವಸ್ಥೆ ಮಾಡಿದ್ದೇವೆ. ● 9ನೇ ಪುಟಕ್ಕೆ



## ಲೋಕಾಯುಕ್ತ ಪ್ರಕರಣದಲ್ಲಿ ತಪ್ಪಿತಸ್ಥ ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿ

● ಸಚಿವ ಸಂಪುಟ ಅಸ್ತು ● ಎಸ್‌ಸಿ/ಎಸ್‌ಟಿ ಕ್ಷೇತ್ರಗಳಲ್ಲಿ ಸಂಚಾರಿ ಆರೋಗ್ಯ ಘಟಕ
● ಮೈಸೂರು ಸೇರಿ ವಿವಿಧ ಜಿಲ್ಲಾಸ್ಪತ್ರೆಯಲ್ಲಿ ಸಿಟಿ, ಎಂಆರ್‌ಐ ಸ್ಕ್ಯಾನ್ ಅಳವಡಿಕೆ

ಬೆಂಗಳೂರು, ಆ.10– ಲೋಕಾಯುಕ್ತ ಪ್ರಕರಣದಲ್ಲಿ ತಪ್ಪಿತಸ್ಥರಾಗಿರುವ ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿ ನೀಡಲು ರಾಜ್ಯ ಸಚಿವ ಸಂಪುಟ ಸಭೆ ಗುರುವಾರ ಅನುಮೋದನೆ ನೀಡಿದೆ.



ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಸಚಿವ ಸಂಪುಟ ಸಭೆಯಲ್ಲಿ ಒಟ್ಟು 16 ವಿಷಯಗಳ ಮೇಲೆ ಚರ್ಚೆ ನಡೆದಿದೆ ಎಂದರು. ಲೋಕಾಯುಕ್ತ ಪ್ರಕರಣದಲ್ಲಿ ವಾಣಿಜ್ಯ ತೆರಿಗೆ ಇಲಾಖೆ ಸಹಾಯಕ ಆಯುಕ್ತ ಡಾ.ಎಂ.ಎಚ್.ನಾಗೇಶ್ ಅವರಿಗೆ ಐದು ವರ್ಷ ಜೈಲು ಶಿಕ್ಷೆ ಆಗಿರುವ ಹಿನ್ನೆಲೆಯಲ್ಲಿ ಅವರಿಗೆ ಕಡ್ಡಾಯ ನಿವೃತ್ತಿ ನೀಡಲು ಅನುಮೋದನೆ ● 6ನೇ ಪುಟಕ್ಕೆ


### ಕೋವಿಡ್–19 ನಿಯಮ ಉಲ್ಲಂಘನೆ


### ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮೇಲಿನ ಕೇಸ್ ಕ್ಲೋಸ್!

ಬೆಂಗಳೂರು, ಆ.10– 2022ರ ಕಾಂಗ್ರೆಸ್‌ನ ಮೇಕೆದಾಟು ಪಾದಯಾತ್ರೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್‌ನ ಕೆಲ ನಾಯಕರು ಕೋವಿಡ್–19 ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯಲು ಕರ್ನಾಟಕ ಸಚಿವ ಸಂಪುಟ ನಿರ್ಧರಿಸಿದೆ. ಅಂದು ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್, ಕೋವಿಡ್ ನಿರ್ಬಂಧಗಳ ಹೊರತಾಗಿಯೂ ಕಾವೇರಿ ನದಿಗೆ ಅಡ್ಡಲಾಗಿ ಮೇಕೆದಾಟು ಅಣೆಕಟ್ಟು ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ಪಾದಯಾತ್ರೆ ನಡೆಸಿತ್ತು. ಈ ಹಿನ್ನೆಲೆಯಲ್ಲಿ ವಿವಿಧ ಪೊಲೀಸ್ ಠಾಣೆಗಳಲ್ಲಿ ಒಂಬತ್ತು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಆ ಎಲ್ಲಾ ಪ್ರಕರಣಗಳನ್ನು ಹಿಂಪಡೆಯಲು ನಿರ್ಧರಿಸಲಾಗಿದೆ. ಇದು ಕೇವಲ ಮೇಕೆದಾಟು ಪಾದಯಾತ್ರೆಯಲ್ಲಿ ಕೋವಿಡ್ ನಿಯಮ ಉಲ್ಲಂಘನೆ ಮತ್ತು ಸೆಕ್ಷನ್ 144 ಮತ್ತು ಇತರ ನಿಯಮ ಉಲ್ಲಂಘನೆಗೆ ಸಂಬಂಧಿಸಿದ್ದಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಹೇಳಿದ್ದಾರೆ. ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ● 6ನೇ ಪುಟಕ್ಕೆ

## ಮಂಡ್ಯ ರೈತ ವಿರೂಪಾಕ್ಷಪ್ಪ ದೆಹಲಿ ಸ್ವಾತಂತ್ರ್ಯೋತ್ಸವದ ಆಹ್ವಾನಿತ

● ಪ್ರಧಾನಮಂತ್ರಿ ಕಾರ್ಯಾಲಯದಿಂದ ಅಧಿಕೃತ ಆಹ್ವಾನ ● ಸಾವಯವ ಕೃಷಿ ಮೂಲಕ ಸಾಧನೆ ಮಾಡಿರುವ ಎ.ನಾಗತಿಹಳ್ಳಿ ರೈತ





ಮಂಡ್ಯ, ಆ.10– ದೆಹಲಿಯ ಕೆಂಪುಕೋಟೆಯಲ್ಲಿ ನಡೆಯುವ 76ನೇ ಸ್ವಾತಂತ್ರ್ಯ ದಿನಾಚರಣೆ ವಿಶೇಷ ಆಹ್ವಾನಿತರನ್ನಾಗಿ ಮಂಡ್ಯದ ರೈತ ಎನ್.ಹೆಚ್.ವಿರೂಪಾಕ್ಷಪ್ಪ ಅವರನ್ನು ಪ್ರಧಾನಮಂತ್ರಿಗಳ ಕಾರ್ಯಾಲಯವು ಆಹ್ವಾನಿಸಿದೆ. ವಿರೂಪಾಕ್ಷಪ್ಪ ಅವರು ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆ ಫಲಾನುಭವಿಯಾಗಿದ್ದಾರೆ.

ನಾಗಮಂಗಲ ತಾಲೂಕಿನ ಎ.ನಾಗತಿಹಳ್ಳಿಯ ರೈತರಾಗಿದ್ದಾರೆ. ಪಿಎಂಒ ಕಚೇರಿಯಿಂದ ಆಹ್ವಾನ ಬಂದ ಬಗ್ಗೆ ಸಂತಸ ವ್ಯಕ್ತಪಡಿಸಿದ ವಿರೂಪಾಕ್ಷಪ್ಪ, ಪ್ರಧಾನಮಂತ್ರಿಗಳ ಕಿಸಾನ್ ಸಮ್ಮಾನ್ ಯೋಜನೆಯ ಫಲಾನುಭವಿಯಾಗಿರುವುದರಿಂದ ಅಧಿಕೃತವಾಗಿ ನನ್ನನ್ನು ವಿಶೇಷವಾಗಿ ಮಂಡ್ಯ ಜಿಲ್ಲೆಯಿಂದ ಆಹ್ವಾನಿಸಿದ್ದಾರೆ. ಇದಕ್ಕಾಗಿ ಕರ್ನಾಟಕದ ಹಾಗೂ ಜಿಲ್ಲೆಯ ರೈತರ ಪರವಾಗಿ ಪ್ರಧಾನಿ ● 9ನೇ ಪುಟಕ್ಕೆ




## ದಸರಾ ಕ್ರೀಡಾಕೂಟದ ಗತವೈಭವ ಮರುಕಳಿಸಲಿ

● ಕ್ರೀಡಾ ಸಚಿವ ಬಿ.ನಾಗೇಂದ್ರ ಸೂಚನೆ ● ಅಗತ್ಯ ಅನುದಾನದ ಬಗ್ಗೆ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸುವ ಭರವಸೆ ● ಏಳು ಕೋಟಿ ಅನುದಾನಕ್ಕೆ ಅಧಿಕಾರಿಗಳ ಬೇಡಿಕೆ

ಮೈಸೂರು, ಆ.10(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ದಸರಾ ಕ್ರೀಡಾಕೂಟದಲ್ಲಿ ಯಾವುದಕ್ಕೂ ಕೊರತೆಯಾಗದೆ ವ್ಯವಸ್ಥಿತವಾಗಿ ಹಾಗೂ ಗತವೈಭವ ಮರುಕಳಿಸುವಂತೆ ಯಶಸ್ವಿಯಾಗಿ ನಡೆಯಬೇಕು. ದಸರಾ ಕ್ರೀಡಾಕೂಟ ನಡೆಸಲು ಅವಶ್ಯವಿರುವ ಅನುದಾನ ಹಾಗೂ ಖರ್ಚು ವೆಚ್ಚದ ಪೂರ್ಣ ಮಾಹಿತಿ ನೀಡುವಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ. ನಾಗೇಂದ್ರ ಸೂಚನೆ ನೀಡಿದರು.



ಹಳೇ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಕ್ರೀಡಾ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಾಗಿರುವ ಹಿನ್ನೆಲೆಯಲ್ಲಿ ಯಾವುದೇ ಲೋಪವಾಗದಂತೆ ದಸರಾ ಕ್ರೀಡಾಕೂಟ ಆಯೋಜನೆಯಾಗಬೇಕು. ಈ ಸಂಬಂಧ ಪೂರ್ವ ಸಿದ್ಧತಾ ಪ್ರಕ್ರಿಯೆಗಳನ್ನು ಮಾಡಿಕೊಳ್ಳುವಂತೆ ತಿಳಿಸಿದರು. ಕ್ರೀಡಾಪಟುಗಳಿಗೆ ವಸತಿ ಹಾಗೂ ಊಟದ ವ್ಯವಸ್ಥೆ, ಸಮವಸ್ತ್ರ ವಿತರಣೆ, ಬಹುಮಾನದ ಮೊತ್ತ, ಕ್ರೀಡೆಗಳ ರೂಪುರೇಷೆ, ಸಮಿತಿ ರಚನೆ ಹಾಗೂ ದಸರಾ ಕ್ರೀಡಾಕೂಟ ಉದ್ಘಾಟಕರ ಆಯ್ಕೆ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿದ ಸಚಿವರು, ಕಳೆದ ದಸರಾ ಕ್ರೀಡಾಕೂಟದಲ್ಲಿ ಉಂಟಾಗಿದ್ದ ಸಮಸ್ಯೆಗಳ ಮಾಹಿತಿ ಪಡೆದು ಪ್ರಸಕ್ತ ವರ್ಷ ಯಾವುದೇ ದುಂದು ವೆಚ್ಚಕ್ಕೆ ದಾರಿಮಾಡಿಕೊಡದೆ ವ್ಯವಸ್ಥಿತ ಹಾಗೂ ಪಾರದರ್ಶಕವಾಗಿ ದಸರಾ ಕ್ರೀಡಾಕೂಟ ನಡೆಯಬೇಕು ಎಂದು ಹೇಳಿದರು.

**5 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ:** ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಶಕ್ತಿ ಯೋಜನೆ ಜಾರಿ ಹಿನ್ನೆಲೆ ಶೇ.25ರಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುವ ನಿರೀಕ್ಷೆ ಇದೆ. ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಹಾಗೂ ಅವರ ಕುಟುಂಬಸ್ಥರು ಸೇರಿದಂತೆ 5 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುವ ಸಾಧ್ಯತೆ ಇದ್ದು, ಸಮರ್ಪಕ ವಸತಿ ವ್ಯವಸ್ಥೆಯಾಗಬೇಕು. ಕ್ರೀಡಾಪಟುಗಳು ತಂಗಲು ಸೂಕ್ತವಾಗಿರುವ ಹಾಸ್ಟೆಲ್, ಹೋಟೆಲ್‌ಗಳ ಮಾಹಿತಿ ಪಡೆದು ಮುಂಗಡವಾಗಿಯೇ ಕಾಯ್ದಿರಿಸುವಂತೆ ಕ್ರೀಡಾ ಇಲಾಖೆ ಅಧಿಕಾರಿಗಳಿಗೆ ಸಲಹೆ ನೀಡಿದರಲ್ಲದೆ ದಸರಾ ಕ್ರೀಡಾಕೂಟ ಉದ್ಘಾಟನೆಗೂ ಮುನ್ನವೇ ಚಾಮುಂಡಿವಿಹಾರ ಸ್ಟೇಡಿಯಂನಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಹಾಗೂ ದುರಸ್ತಿ ಕಾಮಗಾರಿಗಳು ಇದ್ದಲ್ಲಿ ಕೂಡಲೇ ಸಚಿವರ ಗಮನಕ್ಕೆ ಪಟ್ಟಿ ತನ್ನಿ ಎಂದರು.

ಕ್ರೀಡಾಕೂಟದಲ್ಲಿ 27 ಗುಂಪು ಹಾಗೂ ವೈಯಕ್ತಿಕ ವಿಭಾಗದ ಕ್ರೀಡೆಗಳು ನಡೆಯಲಿವೆ. ಯುವ ಸಂಭ್ರಮದಂತೆಯೇ ದಸರಾ ಉದ್ಘಾಟನೆಗೂ ಮುನ್ನವೇ ಕ್ರೀಡಾಕೂಟ ಆಯೋಜಿಸಿ, ಅಂತಿಮ ಹಂತದ ಪಂದ್ಯಗಳನ್ನು ದಸರಾ ಉದ್ಘಾಟನೆ ಬಳಿಕ ಹಮ್ಮಿಕೊಂಡರೆ ವಸತಿ ವ್ಯವಸ್ಥೆಯನ್ನು ಉತ್ತಮವಾಗಿ ಕಲ್ಪಿಸಬಹುದು. ಅಂತಿಮ ಘಟ್ಟದ ಸ್ಪರ್ಧೆಗಳಲ್ಲಿ 1,500 ಮಂದಿ ಭಾಗವಹಿಸುವ ಅಂದಾಜಿದೆ ಎಂದು ವಿವರಿಸಿದರು.

**ಅಧಿಕಾರದಲ್ಲಿರುವುದು ಕಾಂಗ್ರೆಸ್ ಸರ್ಕಾರ:** ಈ ಹಿಂದೆ ನಡೆದಿರುವ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಲು ಬಂದಿದ್ದ ಕ್ರೀಡಾಪಟುಗಳು ವಸತಿ ವ್ಯವಸ್ಥೆ ಇಲ್ಲದೆ ರಸ್ತೆಯಲ್ಲೇ ರಾತ್ರಿ ಕಳೆದಿದ್ದಾರೆ ಎಂಬ ಸುದ್ದಿಯನ್ನು ಕೆಲ ಪತ್ರಿಕೆಗಳಲ್ಲಿ ಓದಿದ್ದೇನೆ. ಆದ್ದರಿಂದ ವಸತಿ ಕಲ್ಪಿಸುವಲ್ಲಿ ಮುಂಜಾಗ್ರತೆ ವಹಿಸಬೇಕು ಎಂಬ ಜಿಲ್ಲಾಧಿಕಾರಿಗಳ ಮಾತಿಗೆ ಪ್ರತಿಕ್ರಿಯಿಸಿದ ಶಾಸಕ ಹರೀಶ್‌ಗೌಡ, ಈ ವರ್ಷ ಯಾವುದೇ ಕಾರಣಕ್ಕೂ ಕ್ರೀಡಾಪಟುಗಳು ವಸತಿ ಇಲ್ಲದೆ ರಸ್ತೆಯಲ್ಲಿ ರಾತ್ರಿ ಕಳೆಯುವಂತಾಗುವುದಿಲ್ಲ. ಪೂರಕ ವ್ಯವಸ್ಥೆ ಮಾಡಲಾಗುವುದು. ಅಲ್ಲದೆ ಮುಖ್ಯಮಂತ್ರಿಗಳು ಕೂಡ ಹೆಚ್ಚಿನ ಗಮನ ಹರಿಸಿದ್ದಾರೆ ಎಂದರು. ಇದೇ ವೇಳೆ ದಸರಾ ಕ್ರೀಡಾಕೂಟ ಮುಗಿದು ಮೂರ್ನಾಲ್ಕು ತಿಂಗಳಾದರೂ ಕ್ರೀಡಾಪಟುಗಳಿಗೆ ನಗದು ಬಹುಮಾನ ಹಾಗೂ ಪ್ರೋತ್ಸಾಹ ಧನ ● 9ನೇ ಪುಟಕ್ಕೆ

## ಸ್ವಚ್ಛ ಸರ್ವೇಕ್ಷಣ-2023 ಫೀಡ್‌ಬ್ಯಾಕ್‌ಗೆ ಮನವಿ

ಮೈಸೂರು,ಆ.10–ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಸ್ವಚ್ಛ ಭಾರತ್ ಅಭಿಯಾನದಡಿಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಸ್ವಚ್ಛ ಸರ್ವೇಕ್ಷಣಾ–2023 ಅಭಿಯಾನವನ್ನು ನಡೆಸುತ್ತಿದೆ. ಮೈಸೂರು ನಗರವನ್ನು ಮತ್ತೆ ಭಾರತ ದೇಶದ ಪ್ರಥಮ ಸ್ವಚ್ಛ ನಗರ ಎಂಬ ಗರಿಮೆಯನ್ನು ಪಡೆಯುವುದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿರುತ್ತದೆ. ಸ್ವಚ್ಛ ಸರ್ವೇಕ್ಷಣ್–2023 ರಲ್ಲಿ ನಗರದ ಸ್ವಚ್ಛ ನಗರಿ ಎಂಬ ಗರಿಮೆ ಸಾಧಿಸಲು 600 ಅಂಕಗಳನ್ನು ನಿಗದಿಪಡಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರಾರಂಭವಾಗಿರುವ ಸರ್ವೇ ಕಾರ್ಯದಲ್ಲಿ ನಗರದ ನಾಗರಿಕರ ಪ್ರತಿಕ್ರಿಯೆಯನ್ನು ಆಹ್ವಾನಿಸಿದ್ದು, ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ https://sbmur ban.org/feedback ಲಿಂಕನ್ನು ಬಳಸಿ ನಿಮ್ಮ ರಾಜ್ಯ, ಜಿಲ್ಲೆ, ನಗರ ಹಾಗೂ ಸ್ಥಳ ದಾಖಲಿಸಿ ನಗರದ ಸ್ವಚ್ಛತೆ ಕುರಿತು ಪ್ರಶ್ನೆಗಳಿಗೆ ತಮ್ಮ ಪ್ರತಿಕ್ರಿಯೆಯನ್ನು ನೀಡಬಹುದು ಎಂದು ಮೈಸೂರು ಮಹಾನಗರ ಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆ.20, ದೇವರಾಜ ಅರಸು ಜಯಂತಿ ಆಚರಣೆ



ಮೈಸೂರು,ಆ.10–ಹಿಂದುಳಿದ ವರ್ಗಗಳ ಹರಿಕಾರ, ಕರ್ನಾಟಕದ ಮಾಜಿ ಮುಖ್ಯಮಂತ್ರಿ ದಿ. ದೇವರಾಜ ಅರಸು ಅವರ ಜನ್ಮ ದಿನವನ್ನು ಎಲ್ಲರೂ ಸೇರಿ ಅರ್ಥಪೂರ್ಣವಾಗಿ ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಂ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ದೇವರಾಜ ಅರಸು ಅವರ 108ನೇ ಜನ್ಮದಿನ ಆಚರಿಸುವ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ದೇವರಾಜ ಅರಸು ಅವರ ಜನ್ಮ ದಿನಾಚರಣೆಯನ್ನು ಆ.20ರಂದು ನಗರದ ಕಲಾಮಂದಿರದಲ್ಲಿ ಆಯೋಜಿಸಲಾಗುವುದು. ಎಲ್ಲಾ ಸಮುದಾಯದವರು ಸೇರಿ ದೇವರಾಜ ಅರಸು ಅವರ ಜಯಂತಿಯನ್ನು ಆಚರಣೆ ಮಾಡೋಣ. 2022– 23ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ನಿಲಯಾರ್ಥಿಗಳಿಗೆ ಕಾರ್ಯಕ್ರಮದಲ್ಲಿ ಬಹುಮಾನ ವಿತರಣೆ ಮಾಡಲಾಗುವುದು. ಇದರಿಂದ ನಿಲಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಒಬ್ಬರು ಸಂಪನ್ಮೂಲ ವ್ಯಕ್ತಿಯಿಂದ ದೇವರಾಜ ಅರಸು ಅವರ ಕುರಿತು ವಿಶೇಷ ಉಪನ್ಯಾಸ ಕೊಡಿಸಲಾಗುವುದು. ನಿಲಯದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ ಮಾಡಲಾಗುವುದು. ತಾಲೂಕು ಮಟ್ಟದಲ್ಲಿಯೂ ಜಯಂತಿ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಮಾಹಿತಿ ನೀಡಿದರು.

ಸಮುದಾಯದ ಮುಖಂಡರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅರಸು ಅವರ ಕುರಿತು ಪಿಹೆಚ್.ಡಿ ಮಾಡಿರುವವರನ್ನು ಗುರುತಿಸಿ ಗೌರವಿಸಬೇಕು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಿಂದುಳಿದ ವರ್ಗದವರನ್ನು ಗುರುತಿಸಿ ದೇವರಾಜ ಅರಸು ಅವರ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡಬೇಕು ಎಂದು ಮನವಿ ಮಾಡಿದರು. ಸಭೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ರಾಘವೇಂದ್ರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್ ಸೇರಿದಂತೆ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.

## ಇನ್‌ಫೋಸಿಸ್‌ನಲ್ಲಿ ಅಂಚೆ ಮೇಳ ಉದ್ಘಾಟನೆ



ಮೈಸೂರು ಅಂಚೆ ವಿಭಾಗದ ವತಿಯಿಂದ ಮೂರು ದಿನಗಳ ಅಂಚೆ ಮೇಳವನ್ನು ಇನ್‌ಫೋಸಿಸ್ ಕ್ಯಾಂಪಸ್‌ನಲ್ಲಿ ಆರ್.ಡಿ.ಖಾತೆಯನ್ನು ತೆರೆಯುವ ಮೂಲಕ ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಡಾ.ಏಂಜಲ್‌ರಾಜ್ ಉದ್ಘಾಟಿಸಿದರು. ಉಪ ಅಂಚೆ ಅಧೀಕ್ಷಕ ಸುನಿಲ್ ಹಳಪೇಟಿ, ಮಾರುಕಟ್ಟೆ ಅಧಿಕಾರಿ ಡಾ.ಸುರೇಶ್‌ಕುಮಾರ್, ಮೇಟಗಳ್ಳಿ ಪೋಸ್ಟ್‌ಮಾಸ್ಟರ್ ಸಂತೋಷ್, ಸಿಬ್ಬಂದಿಗಳಾದ ಪ್ರಿಯಾ, ಶ್ರೀಲಕ್ಷ್ಮಿ, ಎನ್.ಲಕ್ಷ್ಮಿ, ಸಿದ್ದೇಶ್, ಸುಬ್ರಹ್ಮಣ್ಯ ಭಾಸ್ಕರ್, ರೇಷ್ಮಾ ಹಾಗೂ ಇನ್‌ಫೋಸಿಸ್ ಸಿಬ್ಬಂದಿ ಹಾಜರಿದ್ದರು.

## ಪತ್ರಕರ್ತರಿಗೆ ಗೃಹಜ್ಯೋತಿ, ಗೃಹಲಕ್ಷ್ಮಿ ನೋಂದಣಿ ಶಿಬಿರಕ್ಕೆ ಚಾಲನೆ



ಮೈಸೂರು, ಆ.10(ಆರ್‌ಕೆ)– ಆಧಾರ್ ಅಪ್‌ಡೇಟ್ ಬೆನ್ನಲ್ಲೇ ಮೈಸೂರಲ್ಲಿ ಪತ್ರಕರ್ತರು ಮತ್ತು ಅವರ ಕುಟುಂಬದ ಸದಸ್ಯರನ್ನು ಸರ್ಕಾರದ ಗೃಹಲಕ್ಷ್ಮಿ ಮತ್ತು ಗೃಹಜ್ಯೋತಿ ಯೋಜನೆಗಳ ಪ್ರಯೋಜನ ಪಡೆಯಲು ನೋಂದಣಿ ಕಾರ್ಯ ನಡೆಯಿತು.

ಜಿಲ್ಲಾ ಪತ್ರಕರ್ತರ ಸಂಘವು ಜಿಲ್ಲಾಡಳಿತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಪ್ರಚಾರ ಇಲಾಖೆ ಹಾಗೂ ಚೆಸ್ಕಾಂ ಸಹಯೋಗದೊಂದಿಗೆ ಮೈಸೂರಿನ ವಾರ್ತಾ ಭವನದಲ್ಲಿ ಆಯೋಜಿಸಿದ್ದ ನೋಂದಣಿ ಶಿಬಿರವನ್ನು ಮೇಯರ್ ಶಿವಕುಮಾರ್ ಉದ್ಘಾಟಿಸಿದರು.

ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಎಲ್ಲಾ ತಾಲೂಕುಗಳ ಪತ್ರಕರ್ತರು ಕುಟುಂಬದ ಸದಸ್ಯರೊಂದಿಗೆ ಹಾಜರಾಗಿ 'ಗೃಹಲಕ್ಷ್ಮಿ', 'ಗೃಹಜ್ಯೋತಿ'ಗೆ ನೋಂದಣಿ ಮಾಡಿಸಿಕೊಂಡು ಫಲಾನುಭವಿಗಳಾದರು.

ಈ ಸಂದರ್ಭ ಮಾತನಾಡಿದ ಶಿವಕುಮಾರ್, ಸರ್ಕಾರದ ಯೋಜನೆಗಳ ಪ್ರಯೋಜನ ಪಡೆಯಲು ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಸದಸ್ಯರಿಗೆ ನೋಂದಣಿ ಶಿಬಿರ ಏರ್ಪಡಿಸಿ ಅನುಕೂಲ ಮಾಡಿರುವುದು ಶ್ಲಾಘನೀಯ. ಅದಕ್ಕೆ ನೆರವಾಗಿರುವ ಎಲ್ಲಾ ಇಲಾಖೆ ಅಧಿಕಾರಿಗಳೂ ಉತ್ತಮ ಕೆಲಸ ಮಾಡಿದ್ದಾರೆ ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು, ಗ್ರಾಮ ಒನ್ ಜಿಲ್ಲಾ ಯೋಜನಾ ವ್ಯವಸ್ಥಾಪಕ ಚೇತನ್, ವಾರ್ತಾ ಮತ್ತು ಸಾರ್ವಜನಿಕ ಮಾಹಿತಿ ಇಲಾಖೆ ಉಪನಿರ್ದೇಶಕ ಅಶೋಕ್‌ಕುಮಾರ್, ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಉಪಾಧ್ಯಕ್ಷ ಎಂ.ಎಸ್.ಬಸವಣ್ಣ, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ರಾಜ್ಯ ಸಮಿತಿ ಸದಸ್ಯ ರಾಘವೇಂದ್ರ, ಮೇಯರ್ ಆಪ್ತ ಸಹಾಯಕ ನಂದೀಶ್, ಪತ್ರಕರ್ತರಾದ ಆರ್.ಕೃಷ್ಣ, ಮುಳ್ಳೂರು ರಾಜು, ಎಂ.ಟಿ. ಯೋಗೇಶ್‌ಕುಮಾರ್, ನಾರಾಯಣ ಯಾದವ್ ಇತರರು ಉಪಸ್ಥಿತರಿದ್ದರು.

## 'ಹರ್ ಘರ್ ತಿರಂಗಾ' ಅಭಿಯಾನ

ಮೈಸೂರು,ಆ.10–ಸ್ವಾತಂತ್ರ್ಯೋತ್ಸವದ 76ನೇ ವರ್ಷಾಚರಣೆ ಅಂಗವಾಗಿ 'ಹರ್ ಘರ್ ತಿರಂಗಾ' ಅಭಿಯಾನದ ಅಂಗವಾಗಿ ಎಲ್ಲಾ ಅಂಚೆ ಕಚೇರಿಗಳಲ್ಲಿ ರಾಷ್ಟ್ರಧ್ವಜ ಮಾರಾಟ ವ್ಯವಸ್ಥೆಯನ್ನು ಮಾಡಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಬೇಕು. ದೇಶದ ಹೆಮ್ಮೆಯ ನಾಗರಿಕರಿಗೆ ಸುಲಲಿತವಾಗಿ ರಾಷ್ಟ್ರಧ್ವಜಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಲು ಮೈಸೂರು ಅಂಚೆ ವಿಭಾಗದ ಎಲ್ಲಾ ಅಂಚೆ ಕಚೇರಿಗಳಲ್ಲಿ ರಾಷ್ಟ್ರಧ್ವಜಗಳನ್ನು 25 ರೂ.ಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಲಾಗಿದೆ ಎಂದು ಮೈಸೂರು ಅಂಚೆ ವಿಭಾಗದ ಹಿರಿಯ ಅಂಚೆ ಅಧೀಕ್ಷಕ ಡಾ.ಏಂಜಲ್‌ರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ಆಸ್ಪತ್ರೆಗಳಲ್ಲಿ ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆ ಆರಂಭಿಸಬೇಕು: ಡಾ.ಮಂಜುನಾಥ್

ಮೈಸೂರು,ಆ.10(ಎಂಟಿವೈ)– ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ನಂದಿನಿ ಉತ್ಪನ್ನಗಳ ಮಾರಾಟ ಹಾಗೂ ಹಾಪ್‌ಕಾಮ್ಸ್ ಮಳಿಗೆಗಳನ್ನು ತೆರೆಯಲು ಕ್ರಮ ಕೈಗೊಂಡರೆ, ರೋಗಿಗಳಿಗೆ ಉಪಯುಕ್ತವಾಗಲಿದೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಜಯದೇವ ಆಸ್ಪತ್ರೆ ಆವರಣದಲ್ಲಿ ಹಾಪ್‌ಕಾಮ್ಸ್ ಮಳಿಗೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ರೈತರ ಶ್ರಮದ ಬೆವರಿನಿಂದ ನಡೆಯುತ್ತಿರುವ ಹಾಪ್‌ಕಾಮ್ಸ್ ಮತ್ತು ನಂದಿನಿ ಆರೋಗ್ಯದ ಎರಡು ಕಣ್ಣುಗಳಂತೆ ಕಾರ್ಯನಿರ್ವಹಿಸುತ್ತಿದೆ. ರಾಜ್ಯದ ದೊಡ್ಡ ದೊಡ್ಡ ಆಸ್ಪತ್ರೆ ಮತ್ತು ಕಾಲೇಜು ಆವರಣಗಳಲ್ಲಿ ಹಾಪ್‌ಕಾಮ್ಸ್ ಮತ್ತು ನಂದಿನಿ ಪಾರ್ಲರ್‌ಗಳನ್ನು ತೆರೆಯಬೇಕು. ಇದಕ್ಕೆ ಜನರು ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು.

ಭಾರತದಲ್ಲಿ ವಾಯುಮಾಲಿನ್ಯದಿಂದ ಸಾವನ್ನಪ್ಪುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ನಾವು ಹಣ್ಣು, ತರಕಾರಿ, ಧಾನ್ಯಗಳನ್ನು ಬೆಳೆಯಲು ಭೂಮಿಗೆ ಕೀಟನಾಶಕ, ರಾಸಾಯನಿಕ ಗೊಬ್ಬರ ಬಳಸುವುದರಿಂದ ನಮ್ಮ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ನಮ್ಮ ದೇಶದ ಕೆಲವು ಭಾಗದಲ್ಲಿ ಮಾಂಸದ ಮೇಲಿರುವ ಹೆಚ್ಚು ಪ್ರೀತಿ, ಹಣ್ಣು ತರಕಾರಿಗಳ ಮೇಲೆ ಇಲ್ಲವಾಗಿದೆ. ಅಧ್ಯಯನದ ಪ್ರಕಾರ ನಮ್ಮ ದೇಶದಲ್ಲಿ ಶೇ.12ರಷ್ಟು ಜನರು ಮಾತ್ರ ತರಕಾರಿ ಹಣ್ಣುಗಳನ್ನು ಸೇವಿಸುತ್ತಿದ್ದಾರೆ. ಈ ಸಂಖ್ಯೆ ಹೆಚ್ಚಾಗಬೇಕು. ಭಾರತದ ಶೇ.70 ಜನರಲ್ಲಿ ವಿಟಮಿನ್ ಡಿ ಕೊರತೆ ಇದೆ. ಗ್ರಾಮೀಣ ಭಾಗದ ಶೇ.50 ಜನರಲ್ಲಿ ರಕ್ತಹೀನತೆ ಇದೆ. ಕಡಿಮೆ ಪಾಲಿಶ್ ಮಾಡಿರುವ ಅಕ್ಕಿಯನ್ನು ತಿಂದರೆ ಅದರಲ್ಲಿ ಎಲ್ಲಾ ವಿಟಮಿನ್ ಇರುತ್ತದೆ. ಆದ್ದರಿಂದ ಪ್ರತಿಯೊಬ್ಬರು ಹಣ್ಣು ಮತ್ತು ತರಕಾರಿಗಳನ್ನು ತಿನ್ನಬೇಕು. ಪ್ರತಿವರ್ಷಕ್ಕೊಮ್ಮೆ ಆರೋಗ್ಯ ತಪಾಸಣೆ ಮಾಡಿಸಿಕೊಂಡು ಆರೋಗ್ಯವಾಗಿರಬೇಕೆಂದು ಸಲಹೆ ನೀಡಿದರು.

ಮೈಸೂರು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ ಮಾತನಾಡಿ, ಮೈಸೂರಿಗೆ ಸಾಂಸ್ಕೃತಿಕವಾಗಿ ಅರಮನೆ ಎಷ್ಟು ಪ್ರಾಮುಖ್ಯವೋ ಜಯದೇವ ಆಸ್ಪತ್ರೆ ಕೂಡ ಜನರ ಆರೋಗ್ಯಕ್ಕೆ ಮುಖ್ಯವಾಗಿದೆ ಎಂದ ಮಂಜುನಾಥ್ ಅವರು, ಈ ಆಸ್ಪತ್ರೆಯನ್ನು ಅದ್ಭುತವಾಗಿ ನಿರ್ಮಾಣ ಮಾಡಿ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದರು.

ಇದೇ ವೇಳೆ ತೋಟಗಾರಿಕಾ ಪಿತಾಮಹ ಮರಿಗೌಡ ಪ್ರಶಸ್ತಿಯನ್ನು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಹಾಪ್‌ಕಾಮ್ಸ್‌ನ ಜಿಲ್ಲಾ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಡಾ. ಶಂಕರ್‌ಶಿರಾ, ಉಪಾಧ್ಯಕ್ಷ ಸರ್ವೇಶ್, ಸೂರ್ಯಕುಮಾರ್, ನಿರ್ದೇಶಕರಾದ ಬೋರೇಗೌಡ, ಹೊಸಹುಂಡಿ ರಘು, ಮಹಾದೇವ, ಶ್ರೀನಿವಾಸ, ಚಂದ್ರೇಗೌಡ, ರಾಮೇಗೌಡ, ಪದ್ಮನಾಭ, ಸುಜಾತ, ನಳಿನಿ, ವ್ಯವಸ್ಥಾಪಕ ನಿರ್ದೇಶಕ ಚೇತನ್, ಜನರಲ್ ಮ್ಯಾನೇಜರ್ ಸುರೇಂದ್ರ ಕುಮಾರ್, ಲೋಕೇಶ್, ನರ್ಸಿಂಗ್ ಅಧೀಕ್ಷಕ ಹರೀಶ್‌ಕುಮಾರ್ ಇನ್ನಿತರರಿದ್ದರು.



ಮೈಸೂರು ಜಯದೇವ ಆಸ್ಪತ್ರೆ ಆವರಣದಲ್ಲಿ ಹಾಪ್‌ಕಾಮ್ಸ್ ಮಳಿಗೆ ಉದ್ಘಾಟನಾ ಕಾರ್ಯಕ್ರಮದಲ್ಲಿ ತೋಟಗಾರಿಕಾ ಪಿತಾಮಹ ಮರಿಗೌಡ ಪ್ರಶಸ್ತಿಯನ್ನು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಅವರಿಗೆ ಗುರುವಾರ ಪ್ರದಾನ ಮಾಡಲಾಯಿತು.

## ರೋಟರಿ ಐವರಿಯಿಂದ ಅಂತಾರಾಷ್ಟ್ರೀಯ ಸ್ತನ್ಯಪಾನ ಸಪ್ತಾಹ



ಮೈಸೂರು, ಆ. 10– ಮೈಸೂರಿನ ಭಾರತೀಯ ಶಿಶುವೈದ್ಯ ಸಂಘ ಹಾಗೂ ಕಾಮಾಕ್ಷಿ ಆಸ್ಪತ್ರೆ ಮತ್ತು ರೋಟರಿ ಐವರಿ ವತಿಯಿಂದ ಅಂತಾರಾಷ್ಟ್ರೀಯ ಸ್ತನ್ಯಪಾನ ಸಪ್ತಾಹವನ್ನು ಏರ್ಪಡಿಸಲಾಗಿತ್ತು.

ಈ ವೇಳೆ ಭಾರತೀಯ ಶಿಶುವೈದ್ಯ ಸಂಘ, ಮೈಸೂರು ವಿಭಾಗದ ಕಾರ್ಯದರ್ಶಿ ಡಾ.ನಂದೀಶ್, ಸ್ತನ್ಯಪಾನದ ಪ್ರಾಮುಖ್ಯತೆ, ಮಹತ್ವದ ಬಗ್ಗೆ ಮಾತನಾಡುತ್ತಾ, ಜನರಲ್ಲಿರುವ ತಪ್ಪು ಕಲ್ಪನೆಗಳನ್ನು ಬಿಡಬೇಕು. ಕುಟುಂಬದ ಹಿರಿಯ ಸದಸ್ಯರ ಅಭಿಪ್ರಾಯಗಳನ್ನು ಕೇಳಿ ತಾಯಂದಿರು ತಮ್ಮ ಕಂದಮ್ಮಗಳಿಗೆ ಹಾಲನ್ನು ಉಣಿಸಬೇಕು ಇಲ್ಲದಿದ್ದರೆ ಮಕ್ಕಳು ಬೆಳೆಯಲು ಅಪೌಷ್ಟಿಕತೆ ಕಾರಣವಾಗುತ್ತದೆ. ಆದ್ದರಿಂದ ತಾಯಿಯಾದವರು ಮಕ್ಕಳಿಗೆ ಎದೆ ಹಾಲು ಉಣಿಸುವುದು ಉತ್ತಮವಾದ ಬೆಳವಣಿಗೆಗೆ ಕಾರಣವಾಗುತ್ತದೆ ಎಂದು ಅಭಿಪ್ರಾಯಪಟ್ಟರು. ತಾಯಿ ಮತ್ತು ಮಗುವಿನ ಸಂಬಂಧ ಗರ್ಭದಲ್ಲಿರುವಾಗಲೇ ಬೆಳೆದಿದ್ದು, ಶಿಶು ಹುಟ್ಟಿದ ನಂತರ ಸ್ತನ್ಯಪಾನದ ಮೂಲಕ ಮತ್ತಷ್ಟು ಬಲಗೊಳ್ಳುತ್ತದೆ. ಶಿಶು ಹುಟ್ಟಿದ ಗಳಿಗೆಯಿಂದ ತಾಯಿಯಾದವರು 2 ವರ್ಷ ತುಂಬುವವರೆಗಾದರೂ ಹಾಲು ಉಣಿಸಿದರೆ ತಾಯಿ ಹಾಗೂ ಮಗು ಇಬ್ಬರು ಸುರಕ್ಷಿತವಾಗಿ ಆರೋಗ್ಯಕರವಾಗಿರಲು ಸಾಧ್ಯವೆಂದು ತಿಳಿಸಿದರು. ಕಾಮಾಕ್ಷಿ ಆಸ್ಪತ್ರೆಯ ಡಾ.ಯು.ಜಿ.ಶೈಣೈ ಮತ್ತು ಡಾ.ರವೀಶ್, ತಾಯಂದಿರ ಹಾರೈಕೆ ಮಗುವಿಗೆ ಹೇಗಿರಬೇಕೆಂದು ಕೆಲವು ಸಾಕ್ಷ್ಯ ಚಿತ್ರಗಳ ಮೂಲಕ ವಿವರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆಸ್ಪತ್ರೆಯ ಮಹೇಶ್ ಶೈಣೈ ವಹಿಸಿದ್ದರು.

ರೋಟರಿ ಐವರಿ ಸಿಟಿ ವತಿಯಿಂದ ಹಣ್ಣು ಹಾಗೂ ಫ್ಲಾಸ್ಕ್‌ಗಳನ್ನು ಉಚಿತವಾಗಿ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ರೋ.ಸುನೀಲ್ ಬಾಳಿಗಾ, ಸಮುದಾಯ ಸೇವೆ ನಿರ್ದೇಶಕಿ ರೋ.ಲತಾ ಸಚ್ಚಿದಾನಂದ, ಐವರಿ ಸಿಟಿ ಅಧ್ಯಕ್ಷ ಸಂಜಯ್ ಅರಸ್ ಹಾಗೂ ಕಾಮಾಕ್ಷಿ ಆಸ್ಪತ್ರೆಯ ಸಿಬ್ಬಂದಿ ಭಾಗವಹಿಸಿದ್ದರು.



ಮೈಸೂರಿನ ವಾರ್ಡ್ ನಂ.56 ಬಲ್ಲಾಳ ವೃತ್ತದಲ್ಲಿ ರಸ್ತೆ ಬದಿ ವ್ಯಾಪಾರಿಗಳ ಅನುಕೂಲಕ್ಕೆ ಕೈಗೆತ್ತಿಕೊಂಡಿರುವ 69 ಲಕ್ಷ ವೆಚ್ಚದ ಕಾಂಕ್ರೀಟ್ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ ಗುದ್ದಲಿಪೂಜೆ ನೆರವೇರಿಸಿದರು. ಬಿಜೆಪಿ ನಗರ ಮಾಧ್ಯಮ ಸಹ ಸಂಚಾಲಕ ಎನ್.ಪ್ರದೀಪ್‌ಕುಮಾರ್, ಪಾಲಿಕೆ ವಲಯಾಭಿವೃದ್ಧಿ ಅಧಿಕಾರಿ ಚೇತನ್ ಬಾಬು, ಇಂಜಿನಿಯರ್ ದಯಾನಂದ್ ಇತರರಿದ್ದಾರೆ.

## ಜವಾಹರ ನವೋದಯ ವಿದ್ಯಾಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು,ಆ.10–ಜವಹಾರ ನವೋದಯ ವಿದ್ಯಾಲಯದ 2024–25ನೇ ಸಾಲಿನ 6ನೇ ತರಗತಿ ಶೈಕ್ಷಣಿಕ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಿದ್ದು, www.navodaya.gov.in ಮೂಲಕ ಅರ್ಜಿ ಸಲ್ಲಿಸಲು ಆ.17 ಕೊನೆಯ ದಿನ. 2024ರ ಜ.20ರಂದು ಪರೀಕ್ಷೆ ನಡೆಯಲಿದ್ದು, ಹೆಚ್ಚಿನ ಮಾಹಿತಿಗಾಗಿ www.navodaya.gov.in ಅಥವಾ ದೂ.ಸಂ: 0821–2970040 ಅನ್ನು ಸಂಪರ್ಕಿಸಬಹುದು.

# ಭತ್ಯೆ ಬಾಕಿ; ಮೈಸೂರು ವಿವಿ ಉಪನ್ಯಾಸಕರ ಉದ್ದೇಶಿತ ಹೋರಾಟಕ್ಕೆ ಎಂಎಲ್‌ಸಿ ಮರಿತಿಬ್ಬೇಗೌಡ ಬೆಂಬಲ

ಮೈಸೂರು,ಆ.10(ಪಿಎಂ)– ಮೈಸೂರು ವಿವಿಯ ಉತ್ತರ ಪತ್ರಿಕೆ ಮೌಲ್ಯಮಾಪನ ಕಾರ್ಯ ಆ.16ರಂದು ಪ್ರಾರಂಭವಾಗಲಿದ್ದು, ಪರೀಕ್ಷೆ, ಮೌಲ್ಯಮಾಪನ ಕರ್ತವ್ಯ ಸಂಬಂಧ ಬಾಕಿ ಉಳಿಸಿಕೊಂಡಿರುವ ಭತ್ಯೆಗಳನ್ನು ಅತಿಥಿ ಉಪನ್ಯಾಸಕರಿಗೆ ಪಾವತಿಸಬೇಕು. ಇಲ್ಲದಿದ್ದರೆ ಮೌಲ್ಯಮಾಪನ ಬಹಿಷ್ಕರಿಸಿ, ಮೈಸೂರು ವಿವಿ ಕ್ರಾಫರ್ಡ್ ಭವನದ ಮುಂದೆ ಪ್ರತಿಭಟನೆ ನಡೆಸಲು ಮುಂದಾಗಿರುವ ಸದರಿ ಉಪನ್ಯಾಸಕರ ಸಂಘಟನೆಗೆ ಸಂಪೂರ್ಣ ಬೆಂಬಲ ನೀಡುವುದಾಗಿ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ತಿಳಿಸಿದ್ದಾರೆ.

ಅತಿಥಿ, ತಾತ್ಕಾಲಿಕ ಮತ್ತು ಗುತ್ತಿಗೆ ಉಪನ್ಯಾಸಕರಿಗೆ ಉತ್ತರ ಪತ್ರಿಕೆ ಮೌಲ್ಯಮಾಪನ ದರ, ಟಿಎ ಮತ್ತು ಡಿಎಗಳನ್ನು ದೀರ್ಘ ಕಾಲದಿಂದ ನೀಡಲಾಗುತ್ತಿದೆ. ಖಾಯಂ ಸಿಬ್ಬಂದಿ ಕೊರತೆ ಇರುವುದರಿಂದ ಪರೀಕ್ಷೆ ಮತ್ತು ಮೌಲ್ಯಮಾಪನ ಕಾರ್ಯಕ್ಕೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡದಿದ್ದರೆ ವಿವಿಗಳಲ್ಲಿ ಪರೀಕ್ಷೆ ಮತ್ತು ಮೌಲ್ಯಮಾಪನಗಳನ್ನು ನಿಗದಿತ ಸಮಯದಲ್ಲಿ ನಡೆಸಲು ಸಾಧ್ಯವೇ ಇಲ್ಲ.



ಮೈಸೂರು ವಿವಿಯು ಸುಗಮವಾಗಿ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುವ ಸಂಬಂಧ ಕಾಲಕಾಲಕ್ಕೆ ನಿಗದಿತ ಭತ್ಯೆಗಳನ್ನು ನೀಡುತ್ತಾ ಬಂದಿದೆ. ಆದರೆ ಪರೀಕ್ಷಾಂಗ ಕುಲಸಚಿವರು (ಸುತ್ತೋಲೆ ಸಂಖ್ಯೆ ಪವಿ:8617ಎ:2019–2020 ದಿನಾಂಕ 17–6–2023ರಂತೆ) ಭತ್ಯೆಗಳನ್ನು ತಡೆಹಿಡಿದಿರುವುದು ಶೋಷನೀಯ. ಭತ್ಯೆಗಳನ್ನು ವಿದ್ಯಾರ್ಥಿಗಳಿಂದ ಪಡೆಯಲಾಗುವ ಶುಲ್ಕದಿಂದಲೇ ಪಾವತಿಸಲಾಗುತ್ತಿದೆ. ಇದಕ್ಕೆ ಸರ್ಕಾರವು ಯಾವುದೇ ಅನುದಾನ ನೀಡುತ್ತಿಲ್ಲ. ಭತ್ಯೆಗಳನ್ನು ತಡೆಹಿಡಿದಿರುವ ಸಂಬಂಧ ಜು.28ರಂದು ಉನ್ನತ ಶಿಕ್ಷಣ ಸಚಿವರಿಗೆ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರದ ಮೂಲಕ ಮನವಿ ಮಾಡಿದರೂ ಯಾವುದೇ ಕ್ರಮ ವಹಿಸದೇ ಇರುವುದು ಸೂಕ್ತವಲ್ಲ. ಮೈಸೂರು ವಿವಿಯಲ್ಲಿ ಪರೀಕ್ಷೆ, ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸಿರುವ ಖಾಯಂ ಹಾಗೂ ಅತಿಥಿ, ತಾತ್ಕಾಲಿಕ, ಗುತ್ತಿಗೆ ಸಿಬ್ಬಂದಿಗೆ ಜು.31ರವರೆಗೂ ಬಾಕಿ ಇರುವ ಭತ್ಯೆ, ಸಂಭಾವನೆಯನ್ನು ಕೂಡಲೇ ಪಾವತಿಸಬೇಕೆಂದು ಮೈಸೂರು ವಿವಿ ಕುಲಸಚಿವರನ್ನು (ಆಡಳಿತ) ಒತ್ತಾಯಿಸುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕೆಲವು ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಪರೀಕ್ಷಾ ಕಾರ್ಯವನ್ನು ಬಹಿಷ್ಕರಿಸಿರುವ ಕಾರಣ ಕಾಲೇಜಿನ ಪಿಜಿ ವಿದ್ಯಾರ್ಥಿಗಳು ಹಾಗೂ ಗ್ರೂಪ್–ಡಿ ಸಿಬ್ಬಂದಿಯಿಂದ ಸದರಿ ಕಾರ್ಯವನ್ನು ನಡೆಸುತ್ತಿರುವುದಾಗಿ ತಿಳಿದು ಬಂದಿದೆ. ಕೂಡಲೇ ವಿವಿ ಆಡಳಿತವು ಕಾಲೇಜಿನ ಅಧ್ಯಾಪಕರಿಂದಲೇ ಪರೀಕ್ಷಾ ಕಾರ್ಯಗಳನ್ನು ನಡೆಸುವಂತೆ ಸಂಬಂಧಿಸಿದ ಪ್ರಾಂಶುಪಾಲರಿಗೆ ಸೂಚನೆ ನೀಡಬೇಕೆಂದು ಪ್ರಕಟಣೆಯಲ್ಲಿ ಅವರು ಕೋರಿದ್ದಾರೆ.

## ಆ.13ರಿಂದ ಸ್ವಾಮಿ ಗಹನಾನಂದಜೀ ಗೀತಾ ಜ್ಞಾನಯಜ್ಞ

ಮೈಸೂರು,ಆ.10–ಮೈಸೂರಿನ ಚಿನ್ಮಯ ಮಿಷನ್ ವತಿಯಿಂದ ಆ.13ರಿಂದ 19ರವರೆಗೆ ಸ್ವಾಮಿ ಗಹನಾನಂದಜೀ ಅವರಿಂದ ಗೀತಾ ಜ್ಞಾನಯಜ್ಞ ಆಯೋಜಿಸಲಾಗಿದೆ.

ಗೋಕುಲಂನಲ್ಲಿರುವ ಚಿನ್ಮಯ ಮಿಷನ್ ಕೇಂದ್ರ ಶ್ರೀ ಗುರುದೇವ ದತ್ತ ಸನ್ನಿಧಿ, ಸಂ.148, 6ನೇ ಮುಖ್ಯರಸ್ತೆ, 3ನೇ ಹಂತ ಇಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಸ್ವಾಮೀಜಿಯವರು, ಭಗವದ್ಗೀತೆಯ 4ನೇ ಅಧ್ಯಾಯ 'ಜ್ಞಾನ ಯೋಗ'ದ ಕುರಿತು ಪ್ರತಿದಿನ ಸಂಜೆ 6.30ರಿಂದ 8ರವರೆಗೆ ಕನ್ನಡದಲ್ಲಿ ಪ್ರವಚನ ನೀಡಲಿದ್ದಾರೆ. ಇದರ ಅಂಗವಾಗಿ ಆ.14ರಿಂದ ಪ್ರತಿದಿನ ಸಂಜೆ 6ರಿಂದ 6.30ರವರೆಗೆ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ ನಡೆಯಲಿದೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

11.8.2023 ಶುಕ್ರವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023ರಿಂದ 16.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ,
ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ರೋಹಿಣಿ, ರಾಹುಕಾಲ: ಬೆಳಗ್ಗೆ 10.30ರಿಂದ 12 ರವರೆಗೆ

- **ಸದ್ವಿದ್ಯಾ ಪ್ರೌಢಶಾಲೆ :** ಸದ್ವಿದ್ಯಾ ಶತೋತ್ತರ, ಸುವರ್ಣ, ರಜತ ಮಹೋತ್ಸವ ವರ್ಷ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಸಹ ಕಾರ್ಯದರ್ಶಿ ಪ್ರೊ. ಕೆ.ಎಸ್. ಹಿರಿಯಣ್ಣ, ಉದ್ಘಾಟನೆ : ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಡಾ. ವಿ.ಎಸ್. ಶೇಷಗಿರಿರಾವ್, ಸ್ಥಳ: ವಿವೇಕಾನಂದ ಸಭಾಂಗಣ, ಬೆಳಗ್ಗೆ 9.30ಕ್ಕೆ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್–ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ–ಮಾರಾಟ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
- **ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ, ಮೈಸೂರು ಹಾಗೂ ಸಕಾಲ ಸ್ಪಂದನ:** ವಿಚಾರ ಮಂಥನ–ಸ್ವಾತಂತ್ರ್ಯ ಚಳವಳಿಯ ಆಶಯಗಳು ಮತ್ತು ಸಮಕಾಲೀನ ಸವಾಲುಗಳು, ಉದ್ಘಾಟನೆ: ಸಂಸ್ಕೃತಿ ಚಿಂತಕ ಪ್ರೊ.ರಹಮತ್ ತರೀಕೆರೆ, ಅಧ್ಯಕ್ಷತೆ: ಮೈವಿವಿ ಕುಲಸಚಿವೆ ವಿ.ಆರ್.ಶೈಲಜಾ, ಉಪಸ್ಥಿತರು: ಗಾಂಧಿ ಅಧ್ಯಯನ ಕೇಂದ್ರ ನಿರ್ದೇಶಕ ಪ್ರೊ.ಎಸ್.ನರೇಂದ್ರಕುಮಾರ್, ಸಕಾಲ ಸಪಂದನ ಅಧ್ಯಕ್ಷ ಪ್ರೊ.ಚಿಂತಾಮಣಿ, ವಿಚಾರ ಮಂಥನ–ಪ್ರಜಾಸತ್ತಾತ್ಮಕ ಆಶಯಗಳು: ಪ್ರಗತಿಪರ ಚಿಂತಕ ಡಾ.ಜಗದೀಶ್ ಕೊಪ್ಪ, ಸಮಾನತಾವಾದಿ ಆಶಯಗಳು: ಕನ್ನಡ ಪ್ರಾಧ್ಯಾಪಕಿ ಡಾ.ಪಿ.ಭಾರತೀದೇವಿ, ಅಧ್ಯಕ್ಷತೆ: ಹಿರಿಯ ಪತ್ರಕರ್ತ ದಿನೇಶ್ ಅಮೀನ್ ಮಟ್ಟು, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಸಾಹಿತ್ಯ ಕಲಾಕೂಟ:** ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನುಮದಿನದ ಅಂಗವಾಗಿ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ–ಪ್ರದರ್ಶನ, ಉದ್ಘಾಟನೆ: ಎಂಎಲ್‌ಸಿ ಸದಸ್ಯ ಡಾ.ಡಿ.ತಿಮ್ಮಯ್ಯ, ಅಧ್ಯಕ್ಷತೆ: ಶಾಸಕ ಕೆ.ಹರೀಶ್ ಗೌಡ, ಚಿತ್ರಕಲಾ ಸ್ಪರ್ಧೆ ಉದ್ಘಾಟನೆ: ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ.ಸಿದ್ದೇಗೌಡ, ಬಹುಮಾನ ವಿತರಣೆ: ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಎ.ಪಿ.ನಾಗೇಶ್, ಡಾ.ನಟರಾಜ್ ಜೋಯಿಸ್, ಮುಖ್ಯ ಅತಿಥಿಗಳು: ಸಮಾಜ ಸೇವಕ ರಘುರಾಂ ವಾಜಪೇಯಿ, ಡಾ.ವೆಂಕಟೇಶ್, ಬಾಬುರಾವ್, ಮಹದೇವಶೆಟ್ಟಿ, ಮಡ್ಡೀಕೆರೆ ಗೋಪಾಲ್, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರದ ಆವರಣ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಅರ್ಬನ್ ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಸಂಜೆ 4ಕ್ಕೆ.
- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಆದ್ಯಗೋವಿಂದಾಚಾರ್ಯ ಅವರಿಂದ ಭಾಗವತ ಸಪ್ತಾಹ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 4.45ರಿಂದ.
- **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀ ಮಾಧವಚಾರ್ಯ ಅವರಿಂದ ಕಿಸ್ಕಿಂದಾ ಕಾಂಡ ಕುರಿತು ಪ್ರವಚನ, ಸ್ಥಳ:ವಿದ್ಯಾಪೀಠದ ಆವರಣ, ಸಂಜೆ 6ರಿಂದ 7ರವರೆಗೆ.
- **ಐಎಸ್‌ಎ ಕರ್ನಾಟಕ ಮತ್ತು ಮೈಸೂರು:** 38ನೇ ಐಎಸ್‌ಎ ವಾರ್ಷಿಕ ದಕ್ಷಿಣ ವಲಯ ಸಮ್ಮೇಳನ, ಮುಖ್ಯ ಅತಿಥಿಗಳು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಮಹದೇವಪ್ಪ, ಗೌರವ ಅತಿಥಿಗಳು: ಎಂಎಂಸಿ ಮತ್ತು ಆರ್‌ಐ ನಿರ್ದೇಶಕರು ಮತ್ತು ಡೀನ್ ಡಾ.ಕೆ.ಆರ್.ದಾಕ್ಷಾಯಿಣಿ, ಐಎಸ್‌ಎ ನ್ಯಾಷನಲ್ ಅಧ್ಯಕ್ಷ ಡಾ.ಭೀಮೇಶ್ವರ್, ಕಾರ್ಯದರ್ಶಿ ಡಾ.ಸುಕಮಿಂದರ್ ಜಿತ್‌ಸಿಂಗ್ ಬಾಜ್ವಾ, ಐಎಸ್‌ಎ ಸೌತ್ ಜಿಸಿ ಮೆಂಬರ್ ಡಾ.ಚಿಂತಲ ಕಿಶನ್, ನ್ಯಾಷನಲ್ ಅಕಾಡೆಮಿಕ್ ಛೇರ್ಮನ್ ಡಾ.ಕೆ.ಎಂ.ವೆಂಕಟಗಿರಿ, ಅಧ್ಯಕ್ಷತೆ: ಐಎಸ್‌ಎ ಕರ್ನಾಟಕ ಅಧ್ಯಕ್ಷ ಡಾ.ಗುರುಲಿಂಗಪ್ಪ ಪಾಟೀಲ್, ಸ್ಥಳ: ಲೈಬ್ರರಿ ಹಾಲ್, ಎಂಎಂಸಿ ಮತ್ತು ಆರ್‌ಐ ಆವರಣ, ಸಂಜೆ 6ಕ್ಕೆ.
- **ಗಾನಭಾರತೀ :** ಟಿ.ಪಿ. ವೈದ್ಯನಾಥನ್ ಸಂಸ್ಮರಣಾ ಸಂಗೀತ ಕಛೇರಿ, ವಿದುಷಿ ಕೃತಿ ಭಟ್ ಅವರಿಂದ ಗಾಯನ, ವಿದುಷಿ ಅದಿತಿ ಕೃಷ್ಣಪ್ರಕಾಶ್–ಪಿಟೀಲು, ವಿದ್ವಾನ್ ಎಚ್.ಎಲ್.ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ಎಂ.ಆರ್. ಮಂಜುನಾಥ್–ಘಟಂ, ಸ್ಥಳ: ವೀಣೆ ಶೇಷಣ್ಣ ಭವನ, ಸಂಜೆ 6ಕ್ಕೆ.
- **ಶ್ರೀಕೃಷ್ಣಧಾಮ :** ಶ್ರೀ ಶ್ರೀ ಪ್ರಸನ್ನತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಸಾಂಸ್ಕೃತಿಕ ಹಬ್ಬ, ವಿದ್ವಾನ್ ಎಂ. ತ್ಯಾಗರಾಜ್ ಅವರಿಂದ (ನೂರು ತಂತಿಗಳ ವಾದನ) ಸಂತೂರ್ ವಾದನ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 7 ರಿಂದ.


### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಬಣ್ಣದ ಬಾನಾಡಿಗಳು, ರಚನೆ–ಡಾ.ಎಸ್.ವಿ.ನರಸಿಂಹನ್, ಪ್ರಸ್ತುತಿ–ಜಿ. ಶಾಂತಕುಮಾರ್, 6.40 ಪದಸಂಸ್ಕೃತಿ–ಡಾ.ಟಿ.ವಿ.ಸತ್ಯನಾರಾಯಣ, 7.15 ಭಾವಗೀತೆಗಳು–ಸಂಗೀತಾ ಕಟ್ಟಿ, 9.05 ವಸುದೈವ ಕುಟುಂಬಕ್ಕಂ – ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಶರತ್ ಆರ್.ರಾವ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಕೆ.ಎಲ್.ಯತಿರಾಜ್, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ–ಕೃಪಾ ಪ್ರಸಾದ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಬಿ.ಎಸ್.ವಿಜಯ ರಾಘವನ್–ಹಾಡುಗಾರಿಕೆ, 4.00 ಮಹಿಳಾರಂಗ–ಮಹಿಳೆಗೂ ಬಂತಾ ಸ್ವಾತಂತ್ರ್ಯ–ಚರ್ಚೆಯಲ್ಲಿ ಭಾಗವಹಿಸುವವರು, ಡಾ.ಶಾಫಿಯಾ ಫಲಿನ್, ಚಿತ್ರಾ ವೈಕುಂಠರಾಜು, ಡಾ. ಶುಭಶ್ರೀ ಪ್ರಸಾದ್, ಪ್ರಸ್ತುತಿ–ಕೆ.ಬಿ.ಮೀನಾ, 4.30 ವೃತ್ತಿ ಮಾಗದರ್ಶನ–ಕೃಷಿ ವಿಜ್ಞಾನ ಶಿಕ್ಷಣದ ಪ್ರಾಮುಖ್ಯತೆ ಕುರಿತು ಡಾ.ಎಸ್.ಎಸ್.ಪ್ರಕಾಶ್ ಅವರೊಂದಿಗೆ ಮಾತುಕತೆ. ಭಾಗವಹಿಸುವವರು ಬೇದ್ರೆ ಮಂಜುನಾಥ್, 6.50 ಕೃಷಿರಂಗ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಎಂ.ಚಿಕ್ಕಸ್ವಾಮಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 8.00 ಕನ್ನಡ ಭಾರತಿ, ಕಥಾ ವಿಹಾರ–ಡಾ.ಶುಭಶ್ರೀ ಪ್ರಸಾದ್ ಅವರಿಂದ ಸಣ್ಣಕಥೆ, ಕಾವ್ಯಧಾರೆ–ಚಂದ್ರಕಲಾ ಕುಮಾರ್, 10.00 ನಾದಾಂಜಲಿ, ಪ್ರಸ್ತುತಿ–ಮೈಸೂರು ಎಂ.ನಾಗರಾಜ್, 10.30 ಸವಿನೆನಪು

# ಸಂಸತ್ತಿನಲ್ಲಿ ಗದ್ದಲ; ಎಲ್ಲರೂ ಘನತೆ, ಸಭ್ಯತೆ ಕಾಪಾಡಿದರೆ ಪ್ರಜಾಪ್ರಭುತ್ವ ಉಳಿಸಲು ಸಾಧ್ಯ

## ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕಿವಿಮಾತು



ಬೆಂಗಳೂರು,ಆ.10–ಸಂಸತ್ತಿನ ಕಲಾಪಗಳಲ್ಲಿನ ಅಡೆತಡೆಗಳ ಬಗ್ಗೆ ಬೇಸರ ವ್ಯಕ್ತಪಡಿಸಿದ ಮಾಜಿ ಪ್ರಧಾನಿ ಎಚ್‌ಡಿ ದೇವೇಗೌಡರು, ಪ್ರತಿ ಯೊಬ್ಬರೂ ಘನತೆ ಮತ್ತು ಸಭ್ಯತೆಯನ್ನು ಕಾಪಾಡಿಕೊಂಡರೆ ಮಾತ್ರ ಪ್ರಜಾಪ್ರಭುತ್ವವನ್ನು ಉಳಿಸಲು ಸಾಧ್ಯ ಎಂದು ಹೇಳಿದರು.

ಕರ್ನಾಟಕದ ರಾಜ್ಯಸಭಾ ಸದಸ್ಯರೂ ಆಗಿರುವ 90 ವರ್ಷದ ಜೆಡಿಎಸ್ ವರಿಷ್ಠರು, ಇತ್ತೀಚಿನ ದಿನಗಳಲ್ಲಿ ಸಂಸತ್ತಿನ ಕಲಾಪವನ್ನು ಹಾಳು ಮಾಡುತ್ತಿರುವ, ಗದ್ದಲ ಎಬ್ಬಿಸುವುದು, ಹೆಸರು ಕರೆಯುವುದು ಮತ್ತು ಘೋಷಣೆ ಕೂಗುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಅನಾರೋಗ್ಯದ ಹೊರತಾಗಿಯೂ ನಾನು ಸಂಸತ್ತಿಗೆ ಹಾಜರಾಗಲು ಬಂದಿದ್ದೇನೆ. ಆದರೆ, ಏನು ನಡೆಯುತ್ತಿದೆಯೋ ಅದರ ಬಗ್ಗೆ ತುಂಬಾ ನಿರಾಶೆಗೊಂಡಿದ್ದೇನೆ. ನನ್ನ ಸುದೀರ್ಘ ಅನುಭವದಿಂದ ಹೇಳುವುದಾದರೆ, ಇದೊಂದು ಹೊಸ ನಿರಾಶಾದಾಯಕ ಪ್ರವೃತ್ತಿ ಎಂದು ನಾನು ಹೇಳುತ್ತೇನೆ. ಪ್ರತಿಯೊಬ್ಬರೂ ಘನತೆ ಮತ್ತು ಸಭ್ಯತೆಯನ್ನು ಕಾಪಾಡಿಕೊಂಡರೆ ಮಾತ್ರ ಪ್ರಜಾಪ್ರಭುತ್ವವನ್ನು ಉಳಿಸಬಹುದು ಎಂದು ಅವರು ಎಕ್ಸ್‌ನಲ್ಲಿ (ಟ್ವಿಟರ್) ಪೋಸ್ಟ್ ಮಾಡಿದ್ದಾರೆ. ಕೂಗಾಡುವುದು, ಹೆಸರು ಕರೆಯುವುದು, ಘೋಷಣೆ ಕೂಗುವುದು ನಮ್ಮ ವ್ಯವಸ್ಥೆಯಲ್ಲಿ ಹಿಂದಿನಿಂದ ಉಳಿದಿರುವ ಪದ್ಧತಿಯನ್ನು ನಾಶಪಡಿಸುತ್ತದೆ ಎಂದು ದೇವೇಗೌಡರು ಹೇಳಿದರು.

ಪ್ರತಿಪಕ್ಷ ನಾಯಕ ಎಂ.ಮಲ್ಲಿಕಾರ್ಜುನ ಖರ್ಗೆ ಅವರು ಮಣಿಪುರ ಕುರಿತು ನಿಯಮ 167ರ ಅಡಿಯಲ್ಲಿ ಚರ್ಚೆಗೆ ಮತ್ತು ಸದನದಲ್ಲಿ ಪ್ರಧಾನಿ ಮೋದಿ ಅವರ ಉಪಸ್ಥಿತಿಗೆ ಒತ್ತಾಯಿಸಿದ ನಂತರ ರಾಜ್ಯಸಭೆಯ ಕಲಾಪವನ್ನು ಮುಂದೂಡಲಾಯಿತು. ಆಡಳಿತ ಪಕ್ಷದ ಸದಸ್ಯರು ಖರ್ಗೆ ಅವರ ಬೇಡಿಕೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಿದರು. ಈ ಬಗ್ಗೆ ಖರ್ಗೆ, ಪ್ರಧಾನಿ ಸದನಕ್ಕೆ ಬಂದರೆ ಏನಾಗುತ್ತದೆ? ಅವರು 'ಪರಮಾತ್ಮ'ನಲ್ಲ, ಅವರು ದೇವರಲ್ಲ ಎಂದರು. ಈ ವೇಳೆ ಆಡಳಿತ ಪಕ್ಷದ ಸದಸ್ಯರ ಘೋಷಣೆಗಳು ತೀವ್ರಗೊಂಡವು. ಗದ್ದಲದ ನಡುವೆ ಸಭಾಪತಿ ಜಗದೀಪ್ ಧನಕರ್ ಅವರು ಸದನವನ್ನು ಮುಂದೂಡಿದರು.

# ಅನುದಾನ ದುರ್ಬಳಕೆ ಬೇಡ: ಸಾಹಿತ್ಯ ಬಳಗ ಮನವಿ

ಮೈಸೂರು,ಆ.10(ಎಂಟಿವೈ)–ಶೋಷಿತ ಸಮುದಾಯದ ಏಳಿಗೆಗಾಗಿ ಬಳಸಬೇಕಾದ ಹಣವನ್ನು, ಗ್ಯಾರಂಟಿ ಯೋಜನೆಗಳಿಗೆ ಬಳಸುವ ನಿರ್ಧಾರದಿಂದ ಹಿಂದೆ ಸರಿಯುವಂತೆ ಅಂಗಳ ಸಾಹಿತ್ಯ ಬಳಗದ ಸದಸ್ಯ ನವೀನ್ ಅಳಗಂಚಿ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದಲಿತರ ಅಭಿವೃದ್ಧಿಗಾಗಿ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಮೀಸಲಿಟ್ಟಿರುವ ಹಣವನ್ನು, ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳಲು ನಿರ್ಧರಿಸಿರುವುದು ಖಂಡನೀಯ. ದಲಿತರಿಗಾಗಿ ಬಳಸಬೇಕಾದ ಹಣವನ್ನು ದಲಿತರ ಹಿತ ಕಾಯುವುದಕ್ಕೆ ಮಾತ್ರ ಬಳಸಿಕೊಳ್ಳಬೇಕು. ಗ್ಯಾರಂಟಿ ಯೋಜನೆಗೆ ಎಸ್‌ಸಿಪಿ, ಟಿಎಸ್‌ಪಿ ಹಣ ಬಳಸದೆ ಬ್ಯಾಕ್‌ಲಾಗ್ ಹುದ್ದೆ ಭರ್ತಿ, ಭೂರಹಿತರಿಗೆ ಭೂಮಿ ಹಂಚಿಕೆ ಹಾಗೂ ಶಾಶ್ವತ ಕಾರ್ಯಕ್ರಮಗಳಿಗೆ ವಿನಿಯೋಜಿಸಬೇಕು. ಸರ್ಕಾರ ಇದೇ ಧೋರಣೆ ಮುಂದುವರಿಸಿದ್ದಲ್ಲಿ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಗೋಷ್ಠಿಯಲ್ಲಿ ಪ್ರದೀಪ್ ಮುಮ್ಮಡಿ, ಪ್ರೀತಂ, ಹೇಮಂತ್ ಇದ್ದರು.

# ಖಾಸಗಿ ಕಂಪನಿ ಇ–ಮೇಲ್ ಹ್ಯಾಕ್ ಮಾಡಿ 12,170 ಡಾಲರ್ ವಂಚನೆ

ಮೈಸೂರು,ಆ.10–ಖಾಸಗಿ ಕಂಪನಿಯೊಂದರ ಇ–ಮೇಲ್ ಹ್ಯಾಕ್ ಮಾಡಿ 12,170 (10,06,343 ಭಾರತೀಯ ರೂಪಾಯಿ) ಡಾಲರ್ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿಸಿಕೊಂಡಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

**ಮತ್ತೊಂದು ಪ್ರಕರಣದಲ್ಲಿ ವಾಟ್ಸಾಪ್‌ಗೆ ಲಿಂಕ್ ಕಳಿಸಿ 1.28 ಲಕ್ಷಕ್ಕೆ ಕನ್ನ**

ಮೈಸೂರಿನ ಬೆಳವಾಡಿ ಕೈಗಾರಿಕಾ ಪ್ರದೇಶದಲ್ಲಿರುವ ಡಿಎಂಎಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ವಂಚನೆಗೊಳಗಾಗಿರುವ ಕಂಪನಿಯಾಗಿದ್ದು, ಈ ಕಂಪನಿಯು Jiangsu kuang shun photo sensitivity new meterial stock (JKPS NMES) ಎಂಬ ಕಂಪನಿಗೆ ಆ ಕಂಪನಿಯ ಇ–ಮೇಲ್ ಐಡಿ pcb_ink @kuangshun.com ಮೂಲಕ ಆರ್ಡರ್ ಮಾಡಿ ಇಂಕ್ ಅನ್ನು ತರಿಸಿಕೊಳ್ಳುತ್ತಿತ್ತು. ಜು.12ರಂದು ಮೈಸೂರಿನ ಕಂಪನಿಯು ಇಂಕ್‌ಗಾಗಿ ಇ–ಮೇಲ್ ಮೂಲಕ ಆರ್ಡರ್ ಮಾಡಿದ್ದು, ಇಂಕ್ ಸರಬರಾಜು ಮಾಡುವ ಕಂಪನಿಯ ಇ–ಮೇಲ್ ಅನ್ನು ದುಷ್ಕರ್ಮಿಗಳು ಹ್ಯಾಕ್ ಮಾಡಿ, ಬ್ಯಾಂಕ್ ಅಕೌಂಟ್ ಬದಲಾವಣೆ ಆಗಿರುವುದಾಗಿ ಬೇರೊಂದು ಬ್ಯಾಂಕ್ ಅಕೌಂಟ್ ಅನ್ನು ಮೇಲ್ ಮೂಲಕ ಕಳುಹಿಸಿದ್ದಾರೆ. ಇದನ್ನು ನಂಬಿದ ಮೈಸೂರಿನ ಕಂಪನಿಯು 12,170 ಡಾಲರ್ ವರ್ಗಾವಣೆ ಮಾಡಿ ವಂಚನೆಗೊಳಗಾಗಿದೆ ಈ ಸಂಬಂಧ ಕಂಪನಿಯ ಕೆ.ಬಿ.ಮೋಹನ್ ರಾಜ್ ಎಂಬುವರು ದೂರು ಸಲ್ಲಿಸಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಮೈಸೂರಿನ ಹೆಬ್ಬಾಳ 3ನೇ ಹಂತದ ನಿವಾಸಿ ಸಿ.ಎ.ಪ್ರವೀಣ್‌ಕುಮಾರ್(28) ಎಂಬುವರ ವಾಟ್ಸಾಪ್‌ಗೆ ಲಿಂಕ್‌ವೊಂದು ಬಂದಿದ್ದು, ಅದನ್ನು ಕ್ಲಿಕ್ ಮಾಡಿದಾಗ ಟೆಲಿಗ್ರಾಂ ಪೇಜ್ ತೆಗೆದುಕೊಂಡಿದೆ. ಈ ವೇಳೆ ಕೆಲವೊಂದು ಟಾಸ್ಕ್‌ಗಳನ್ನು ನೀಡಿ, ಹಣ ಹೂಡಿಕೆ ಹೂಡಿ ಟಾಸ್ಕ್ ಪೂರೈಸಿದರೆ ಹೆಚ್ಚಿನ ಮೊತ್ತದ ಕಮಿಷನ್ ನೀಡಲಾಗುತ್ತದೆ ಎಂದು ನಂಬಿಸಿ 1.28 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಈ ಎರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

# ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳಲು ಸಾಲ ನೀಡುವ ವಿಶ್ವಾಸ ಮೂಡಿಸಿ 1.37 ಲಕ್ಷ ವಂಚನೆ

ಮಡಿಕೇರಿ, ಆ.10–ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳಲು ಸಾಲ ನೀಡುವುದಾಗಿ ನಂಬಿಸಿ ಪದವೀಧರನಿಗೆ 1.37 ಲಕ್ಷ ರೂ. ವಂಚಿಸಲಾಗಿದೆ.

ಮಡಿಕೇರಿ ತಾಲೂಕು ಚೇರಂಗಾಲ ಗ್ರಾಮದ ಎಂ.ಎಸ್.ಪುನೀತ್(21) ವಂಚನೆಗೊಳಗಾದವರಾಗಿದ್ದು, ಬಿ.ಕಾಂ. ಪದವೀಧರರಾದ ಇವರು ಉದ್ಯೋಗಕ್ಕಾಗಿ ವಿದೇಶಕ್ಕೆ ತೆರಳಲು ಸಾಲ ಪಡೆಯಲು ಗೂಗಲ್‌ನಲ್ಲಿ ಸರ್ಚ್ ಮಾಡುತ್ತಿದ್ದಾಗ 'ಪ್ರತಿಭಾ ಲೋನ್ ಕಂಪನಿ' ಹೆಸರಿನ ಲಿಂಕ್ ದೊರೆತಿದೆ. ಅದರ ಮೇಲೆ ಕ್ಲಿಕ್ ಮಾಡಿದ ನಂತರ 9038676917 ಸಂಖ್ಯೆಯಿಂದ ಇವರಿಗೆ ಕರೆ ಮಾಡಿದ ವ್ಯಕ್ತಿ ಹಿಂದಿಯಲ್ಲಿ ಮಾತನಾಡಿದ್ದು, ಸಾಲ ನೀಡಲು ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ವಾಟ್ಸಾಪ್ ಮೂಲಕ ತರಿಸಿಕೊಂಡಿದ್ದಾನೆ. ಆ.3ರಿಂದ 8ರವರೆಗೆ ವಿವಿಧ ಕಾರಣಗಳನ್ನು ಹೇಳಿ ಗೂಗಲ್ ಪೇ ಮೂಲಕ ಪುನೀತ್ ಅವರಿಂದ 1,37,653 ರೂ. ವರ್ಗಾವಣೆ ಮಾಡಿಸಿಕೊಂಡಿದ್ದಲ್ಲದೇ, ಪದೇ ಪದೆ ಕರೆ ಮಾಡಿ ಮತ್ತಷ್ಟು ಹಣ ವರ್ಗಾವಣೆ ಮಾಡುವಂತೆ ಒತ್ತಾಯಿಸುತ್ತಿದ್ದರಿಂದ ಸಂಶಯಗೊಂಡ ಪುನೀತ್, ಭಾಗಮಂಡಲ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

# ಲೋಕಸಭಾ ಚುನಾವಣೆಗಾಗಿ ನೌಕರರ ವರ್ಗಾವರ್ಗಿ, ಗುತ್ತಿಗೆದಾರರ ಕಮಿಷನ್ ವಸೂಲಿ ದಂಧೆ

● ಬಿಜೆಪಿ ಮುಖಂಡರ ಆರೋಪ ● ನಮ್ಮನ್ನು ಪೇಸಿಎಂ ಎಂದವರು ಈಗ ಪೇಕಾಂಗ್ರೆಸ್, ಪೇಸಿಎಂ, ಪೇಡಿಸಿಎಂ ಆಗಿದ್ದಾರೆ



ಬೆಂಗಳೂರು,ಆ.10–(ಕೆಎಂಶಿ) ಸರ್ಕಾರಿ ನೌಕರರ ವರ್ಗಾವರ್ಗಿ ಹಾಗೂ ಗುತ್ತಿಗೆದಾರರಿಂದ ಕಮಿಷನ್ ಪಡೆದು, ಮುಂಬರುವ ಲೋಕಸಭಾ ಚುನಾವಣೆಯನ್ನು ಎದುರಿಸಲು ಕಾಂಗ್ರೆಸ್ ನೇತೃತ್ವದ ಸರ್ಕಾರ ಮುಂದಾಗಿದೆ ಎಂದು ರಾಜ್ಯ ಬಿಜೆಪಿ ಇಂದಿಲ್ಲಿ ಗುರುತರ ಆರೋಪ ಮಾಡಿದೆ.

ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಉಪಮುಖ್ಯಮಂತ್ರಿ ಆರ್.ಅಶೋಕ್ ಮತ್ತು ಕೆಲವು ಬಿಜೆಪಿ ಶಾಸಕರು ಜಂಟಿ ಸುದ್ದಿಗೋಷ್ಠಿಯಲ್ಲಿ ಈ ಆರೋಪ ಮಾಡಿದ್ದಲ್ಲದೆ, ಕೇಂದ್ರದ ಗೃಹ ಸಚಿವರಾದ ಅಮಿತ್ ಶಾ ಅವರು ಕಾಂಗ್ರೆಸ್ ಅಧಿಕಾರ ಪಡೆದರೆ ಎಟಿಎಂ ಮುನ್ಸೂಚನೆ ಕೊಟ್ಟಿದ್ದರು. ಅವರ ಮಾತು ನೂರಕ್ಕೆ ನೂರು ಸತ್ಯವಾಗಿದೆ ಎಂದು ಟೀಕಿಸಿದರು.

ಹಿಂದೆ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿ ಆಗಿದ್ದಾಗ ಪೇಸಿಎಂ ಎಂದು ಅಪಪ್ರಚಾರ ಮಾಡಿದ್ದರು. ಈಗ ಪೇಕಾಂಗ್ರೆಸ್, ಪೇಸಿಎಂ, ಪೇಡಿಸಿಎಂ ಆಗಿದೆಯೇ ಎಂದು ಪ್ರಶ್ನಿಸಿದರು.

ನಮ್ಮ ಮೇಲೆ ಶೇ.40 ಕುರಿತಂತೆ ನಿರಾಧಾರ ಆರೋಪ ಮಾಡಿದ್ದೀರಿ. ನಿಮ್ಮ ಮೇಲೆ ಶೇ.15ರ ಆರೋಪ ಮಾಡಿದ್ದಾರೆ. ಇದಕ್ಕೆ ನಿಮ್ಮ ಉತ್ತರ ಏನು ಎಂದು ಡಿಸಿಎಂ ಶಿವಕುಮಾರ್ ಅವರನ್ನು ಪ್ರಶ್ನಿಸಿದರು. ಗುತ್ತಿಗೆದಾರರು ಅಜ್ಜಯ್ಯ ದೇವಸ್ಥಾನಕ್ಕೆ ಹೋಗಿ ಆಣೆ ಮಾಡುವಂತೆ ಕೇಳಿದ್ದಾರೆ. ನೀವು ಕಮಿಷನ್ ಕೇಳದೆ ಇದ್ದರೆ ಸವಾಲು ಒಪ್ಪಬೇಕಿತ್ತಲ್ಲವೇ ಎಂದು ಆರ್.ಅಶೋಕ್ ಪ್ರಶ್ನಿಸಿದರು.

ಫಂಡ್ ಕಲೆಕ್ಷನ್ ಎಂಬುದು ಲೋಕಸಭಾ ಚುನಾವಣೆಗೆ ಗುದ್ದಲಿ ಪೂಜೆಯೇ ಎಂದು ಕೇಳಿದ ಅವರು, ಗುತ್ತಿಗೆದಾರರ ಸಮಸ್ಯೆ ವಿಚಾರ ಪ್ರಸ್ತಾಪಿಸಿದರು. ಕೆಂಪಣ್ಣನವರೇ ಎಲ್ಲಿದ್ದೀರಪ್ಪಾ ಎಂದು ಕೇಳಿದರು. ಬಿಬಿಎಂಪಿಯ 2019ರಿಂದ 2023ರ ಕಾಮಗಾರಿಗಳನ್ನು ಮಾತ್ರ ತನಿಖೆ ಮಾಡುತ್ತಿದ್ದೀರಿ. ನೀವು ಪ್ರಾಮಾಣಿಕರಿದ್ದರೆ 2013ರಿಂದ ತನಿಖೆ ಮಾಡಬಹುದಲ್ಲವೇ? ಗುತ್ತಿಗೆದಾರರೆಲ್ಲರೂ ಕಳ್ಳರಾದರೆ, 50 ವರ್ಷ ರಾಜ್ಯವಾಳಿದ ಕಾಂಗ್ರೆಸ್ಸಿನ ಬಳುವಳಿ ಇವರೇ ಎಂದು ಪ್ರಶ್ನೆಗಳನ್ನು ಮುಂದಿಟ್ಟರು.

ಗುತ್ತಿಗೆದಾರರು ಕಾಮಗಾರಿ ನಿಲ್ಲಿಸಿದರೆ ನಿಮ್ಮ ಬ್ರ್ಯಾಂಡ್ ಬೆಂಗಳೂರಿನ ಕಥೆ ಏನು? ದಯಾಮರಣ ಕೋರಿ 300 ಜನ ಗುತ್ತಿಗೆದಾರರು ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದ್ದಾರೆ. ಕಾಂಗ್ರೆಸ್ಸಿನವರೇ ಇದಕ್ಕೆ ನಿಮ್ಮ ಉತ್ತರ ಏನು ದೆಹಲಿಯಲ್ಲಿ ಸಚಿವರ ಸಭೆ ಮಾಡಿದ್ದು ಲೋಕಸಭಾ ಸೀಟು ಗೆಲ್ಲಿಸಲೋ ಅಥವಾ ಸೂಟ್‌ಕೇಸ್ ತುಂಬಿಸಲೋ. ಶಿವಕುಮಾರ್ ಅವರೇ ನಿಮ್ಮದು ಬ್ರ್ಯಾಂಡ್ ಬೆಂಗಳೂರೇ ಅಥವಾ ಬ್ಲ್ಯಾಕ್ ಬೆಂಗಳೂರೇ ಮುಖ್ಯಮಂತ್ರಿ ಹಣ ಬಿಡುಗಡೆ ಮಾಡಿದರೆ ಡಿಸಿಎಂ ತಡೆ ಹಿಡಿಯುತ್ತಾರೆ. ವೇಣುಗೋಪಾಲರವರು ಹಣ ಬಿಡುಗಡೆಗೆ ಮತ್ತು ಸುರ್ಜೇವಾಲಾರವರು ಹಣ ತಡೆಹಿಡಿಯಲು ಸೂಚಿಸಿದ್ದರೆ ಎಂದು ಕೇಳಿದರು. ಈ 11 ಪ್ರಶ್ನೆಗಳಿಗೆ ಉತ್ತರವನ್ನು ನಾವು ನಿರೀಕ್ಷೆ ಮಾಡುತ್ತಿದ್ದು, ಜನರೂ ನಿರೀಕ್ಷೆ ಮಾಡುತ್ತಾರೆ ಎಂದು ನುಡಿದರು.

ಗುತ್ತಿಗೆದಾರರೆಲ್ಲರೂ ಬಿಜೆಪಿಯ ಮೂರು ವರ್ಷಗಳ ಆಡಳಿತದ ವೇಳೆ ಆಕಾಶದಿಂದ ಇಳಿದಿದ್ದಾರಾ ಒಬ್ಬರು 29 ವರ್ಷದಿಂದ ಗುತ್ತಿಗೆದಾರರಾಗಿದ್ದವರು ಇಲ್ಲಿದ್ದಾರೆ. 29 ವರ್ಷದಿಂದ ಯಾರು ಆಡಳಿತ ಮಾಡಿದ್ದರು. ಕಾಂಗ್ರೆಸ್ ಪಕ್ಷದ ಆಡಳಿತ ಇತ್ತಲ್ಲವೇ ಇಲ್ಲಿ ಹಲವು ದಶಕಗಳಿಂದ ಇದ್ದ ಅಧಿಕಾರಿಗಳಿದ್ದಾರೆ. ಅವರಿಗೆಲ್ಲ ತರಬೇತಿ ನೀಡಿದವರು ನೀವೇ ತಾನೇ, ನಿಮ್ಮ ಯೂನಿ ವರ್ಸಿಟಿಯಲ್ಲಿ ಈ ಕಂಟ್ರಾಕ್ಟರ್‌ಗಳು, ಇಂಜಿನಿಯರ್‌ಗಳು ಓದಿದ್ದಾರೆ. ಅಲ್ಲೇ ಪದವಿ, ಪಿಎಚ್.ಡಿ. ಪಡೆದವರು. ಎಲ್ಲ ನಿಮ್ಮ ಯೂನಿವರ್ಸಿಟಿಯಲ್ಲೇ ಇರುವಾಗ ಈಗ ಕಳಪೆ ಎಂದರೆ ಹೇಗೆ ಎಂದು ಅಶೋಕ್ ಕೇಳಿದರು.

ಎಲ್ಲ ಅಧಿಕಾರಿಗಳು, ಗುತ್ತಿಗೆದಾರರು ನಿಮ್ಮ ಲೆಕ್ಕದಲ್ಲಿ ಕಳ್ಳರು. ಹೊಸ ಸರ್ಕಾರ ಬಂದ ಮೇಲೆ ನೀವೆಲ್ಲ ಸತ್ಯ ಹರಿಶ್ಚಂದ್ರರಾ? ಇಂಜಿನಿಯರ್, ವೈದ್ಯರು ಸೇರಿ ಎಲ್ಲ ವೃತ್ತಿಯಲ್ಲೂ ಸಣ್ಣ ಪ್ರಮಾಣದ ಕಳ್ಳರಿರುತ್ತಾರೆ. ಶೇ.5ರಿಂದ 10 ಜನ ಇದ್ದಾರು. ಅವರನ್ನು ನೋಡಿ ತನಿಖೆಗೆ ಒಳಪಡಿಸಿ. ಎಲ್ಲಾ ಕಂಟ್ರಾಕ್ಟರ್‌ಗಳ ವಿರುದ್ಧ ಕಳ್ಳರೆಂಬ ಪದ ಬಳಕೆ ಎಷ್ಟು ಸರಿ ಎಂದರು. ಇವರೆಲ್ಲ ಕಳ್ಳರಾದರೆ ನೀವೇನು ದರೋಡೆಕೋರರೇ ಎಂದು ಪ್ರಶ್ನಿಸಿದರು.

ಹೊಸ ಸರ್ಕಾರ ಬಂದಾಗ 6 ತಿಂಗಳು ವಿರೋಧ ಪಕ್ಷ, ಜನರು ಮಾತನಾಡುವುದಿಲ್ಲ. ಮಾಧ್ಯಮದವರು ಅವರ ತಂಟೆಗೆ ಹೋಗುವುದಿಲ್ಲ. ಇಲ್ಲಿ ಬಂದು ಎರಡೇ ತಿಂಗಳಿಗೆ ಹಗರಣಗಳೇ (ಸ್ಕ್ಯಾಂಡಲ್) ಹೆಚ್ಚುತ್ತಿದೆ. ದಿನನಿತ್ಯ ವರ್ಗಾವಣೆ ದಂಧೆ ನಡೆಯುತ್ತಿದೆ ಎಂದು ಟೀಕಿಸಿದರು. ಹಲವು ಸಚಿವರ ವಿರುದ್ಧ ಕಮಿಷನ್ ಆರೋಪ ಬಂದಿದೆ ಎಂದು ಅಶೋಕ್ ಆಕ್ಷೇಪಿಸಿದರು. ನೀವೇನು ಸತ್ಯಹರಿಶ್ಚಂದ್ರರೇ? 2013ರಿಂದ ತನಿಖೆ ನಡೆಸಿ ಎಂದು ಸವಾಲೆಸೆದರು.

ಭ್ರಷ್ಟಾಚಾರ ಕೇಸಿನಲ್ಲಿ ಜಾಮೀನಿನಲ್ಲಿ ಇರುವವರು ನೀವಲ್ಲವೇ? ನೀವು ಸತ್ಯ ಹರಿಶ್ಚಂದ್ರನಂತೆ ಮಾತನಾಡುವುದು ಭೂತದ ಬಾಯಲ್ಲಿ ಭಗವದ್ಗೀತೆ ನುಡಿದಂತೆ ಎಂದು ಟೀಕಿಸಿದರು. 2 ತಿಂಗಳಿಂದ ನಿವೇಶನದ ಒಂದು ಪ್ಲಾನ್‌ಗೆ ಕೂಡ ಒಪ್ಪಿಗೆ ಸಿಗುತ್ತಿಲ್ಲ. ನಿವೇಶನದಲ್ಲಿ ನಿರ್ಮಾಣ ಕಾಮಗಾರಿಗೆ ಅನುಮತಿ ನೀಡದೆ ಇರುವುದರ ಗೂಢಾರ್ಥ ಏನು ಅಧಿಕಾರಿಗಳು ಲೂಟಿ ಹೊಡೆಯುತ್ತಿದ್ದಾರಾ 26 ಕಂಡಿಷನ್ ಹಾಕಿದ್ದಾರೆ.

ನನ್ನ ಪ್ರಕಾರ ಇದಕ್ಕೆ 26 ವರ್ಷ ಬೇಕೇನೋ ದಾಖಲೆ ಪಡೆದು ಕೊಡಲು ಕನಿಷ್ಠ ನಾಲ್ಕೈದು ವರ್ಷ ಬೇಕಾದೀತು ಎಂದರು. ಕಳೆ ಕಿತ್ತ ಮಾಹಿತಿಯನ್ನೂ ಕೋರಿದ್ದಾರೆ ಎಂದು ಟೀಕಿಸಿದರು.

ಪಾಲಿಕೆಗಳಲ್ಲಿ ವರ್ಗಾವಣೆ ಮಾಡಬೇಕಾದರೆ, ನನ್ನ ಗಮನಕ್ಕೆ ತರದೆ ಮಾಡಬಾರದೆಂದು ಶಿವಕುಮಾರ್ ಪತ್ರ ಬರೆದಿದ್ದಾರೆ. ನಾನು ಕೂಡ 4 ಸಾರಿ ಬೆಂಗಳೂರು ಉಸ್ತುವಾರಿ ಸಚಿವನಾಗಿದ್ದೆ. ಯಾವತ್ತೂ ಕೂಡ ಇಂಥ ಒಂದು ಪತ್ರವನ್ನೂ ಬರೆದಿಲ್ಲ. ಬಿಲ್ ಎಲ್ಲವನ್ನೂ ಪಾವತಿಸದೆ ನಿಲ್ಲಿಸಲು ನಾನು ಯಾವತ್ತೂ ಹೇಳಿರಲಿಲ್ಲ ಎಂದು ಅವರು ತಿಳಿಸಿದರು.



**ಕಾಮಗಾರಿಗಳ ಟೆಂಡರ್ ವಿಚಾರದಲ್ಲಿ ಭ್ರಷ್ಟಾಚಾರದ ಬಗ್ಗೆ ಕೆಂಪಣ್ಣ ಅವರು ದೂರು ನೀಡಿದ್ದು ಅವರಿಗೆ ನ್ಯಾಯ ಒದಗಿಸಬೇಕು. ಅದಕ್ಕಾಗಿ ಕಾನೂನು ಪ್ರಕಾರ ತನಿಖೆ ಮಾಡಲು ಹೇಳಿದ್ದೇವೆ. ಸರಿಯಾಗಿ ಕೆಲಸ ಮಾಡಿರುವ ಗುತ್ತಿಗೆದಾರರಿಗೆ ನ್ಯಾಯ ಒದಗಿಸಲು ಸರ್ಕಾರ ಬದ್ಧವಾಗಿದೆ. ಕೆಲವು ಗುತ್ತಿಗೆದಾರರನ್ನು ಮಾಧ್ಯಮಗಳ ಮುಂದೆ ಯಾರು ಮಾತನಾಡಿಸುತ್ತಿದ್ದಾರೆ. ದೆಹಲಿಗೆ ಯಾರು ಕರೆಯುತ್ತಿದ್ದಾರೆ, ಯಾವ ನಾಯಕರ ಮನೆಗೆ ಯಾರು ಕಳಿಸುತ್ತಿದ್ದಾರೆ ಎಂಬ ವಿಚಾರ ನನಗೆ ಗೊತ್ತಿದೆ.**

**–ಡಿ.ಕೆ.ಶಿವಕುಮಾರ್, ಡಿಸಿಎಂ**

## ಎಸ್‌ಐಟಿ ತನಿಖೆ ವರದಿ ಬರುವವರೆಗೆ ಗುತ್ತಿಗೆದಾರರಿಗೆ ಹಣ ಬಿಡುಗಡೆ ಇಲ್ಲ

### ಸರ್ಕಾರದ ತೀರ್ಮಾನ



ಬೆಂಗಳೂರು,ಆ.10–(ಕೆಎಂಶಿ)– ಗುತ್ತಿಗೆ ಕಾಮಗಾರಿಗಳಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಎಸ್‌ಐಟಿ ತಂಡಗಳು ನಡೆಸುತ್ತಿರುವ ವರದಿ ಬರುವವರೆಗೂ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡದಿರಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಹೆಚ್.ಕೆ.ಪಾಟೀಲ್, ಕಾಮಗಾರಿಗಳನ್ನು ಮಾಡದೇ ಹಣ ಪಡೆಯಲು ಕೆಲವು ಗುತ್ತಿಗೆದಾರರು ಮುಂದಾಗಿದ್ದಾರೆ.

ಕಾಮಗಾರಿ ನಡೆಯದೇ ಹಣ ನೀಡುವುದಾದರೂ ಹೇಗೆ? ಎಂದು ಪ್ರಶ್ನಿಸಿದ ಅವರು ಎಸ್‌ಐಟಿ ಮತ್ತು ಇಲಾಖಾ ಮಾಹಿತಿ ಆಧರಿಸಿ, ಸರ್ಕಾರ ಇಂತಹ ತೀರ್ಮಾನ ಕೈಗೊಂಡಿದೆ. ನಾವು ಅಧಿಕಾರಕ್ಕೆ ಬಂದ ನಂತರ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಜನಪರ ಆಡಳಿತ ನೀಡುತ್ತಿರುವುದನ್ನು ಪ್ರತಿಪಕ್ಷಗಳು ಸಹಿಸುತ್ತಿಲ್ಲ. ಇವರ ಚಿತಾವಣೆಯಿಂದ ಕೆಲವು ಗುತ್ತಿಗೆದಾರರು ನಮ್ಮ ಸರ್ಕಾರದ ವಿರುದ್ಧ ಇಲ್ಲ ಸಲ್ಲದ ಆರೋಪ ಮಾಡುತ್ತಿದ್ದಾರೆ. ನಾವು ಇದಕ್ಕೆ ಬಾಗುವುದಿಲ್ಲ. ಯಾರು ನಿಯಮಾನುಸಾರ ಕಾಮಗಾರಿ ನಡೆಸಿರುವರೋ ಅಂತಹ ಗುತ್ತಿಗೆದಾರರಿಗೆ ಹಣ ಪಾವತಿಸಲು ಯಾವುದೇ ಅಡ್ಡಿ–ಆತಂಕಗಳಿಲ್ಲ. ಹಿಂದಿನ ಸರ್ಕಾರದಲ್ಲಿ ನಿಯಮ ಪಾಲನೆಗಿಂತ ಕಾನೂನು ವಿರುದ್ಧವಾಗಿ ಕೆಲಸಗಳು ಕೆಲವೆಡೆ ನಡೆದಿವೆ. ಮತ್ತೆ ಕೆಲವಡೆ ಕಾಮಗಾರಿಯೇ ನಡೆಯದೇ ಹಣಕ್ಕಾಗಿ ಸುಳ್ಳು ಬಿಲ್ ಸೃಷ್ಟಿಸಿದ್ದಾರೆ ಎಂಬ ಆರೋಪಗಳಿವೆ. ಅವುಗಳನ್ನು ಪರಿಶೀಲಿಸಬೇಕಲ್ಲವೆ ಎಂದು.

ಈ ಅಕ್ರಮಗಳ ಬಗ್ಗೆ ತನಿಖೆ ಆರಂಭಿಸುತ್ತಿದ್ದಂತೆ ಇಂತಹ ಗುತ್ತಿಗೆದಾರರು ಒಂದು ಸೂರಿ ನಡಿ ಸೇರಿ, ಸರ್ಕಾರದ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ. ಇದಕ್ಕೆ ಪ್ರತಿಪಕ್ಷಗಳ ಕುಮ್ಮಕ್ಕು ಇದೆ ಎಂದು ಪಾಟೀಲ್ ತಿಳಿಸಿದರು.

ಗುತ್ತಿಗೆದಾರರ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ಮಾಡಿದ್ದೇವೆ. ಅರ್ಹರಿಗೆ ನಮ್ಮ ಸರ್ಕಾರ ಬೆನ್ನೆಲುಬಾಗಿ ನಿಲ್ಲುತ್ತದೆ. ಸರ್ಕಾರದ ವಿಶ್ವಾಸಾರ್ಹತೆ ಹೆಚ್ಚುತ್ತಿರುವುದನ್ನು ಸಹಿಸದೇ ಮಾಡುವ ಲಘುವಾದ ಆರೋಪಗಳನ್ನು ಖಂಡಿಸುತ್ತೇವೆ ಎಂದರು.

# ಸುಪ್ರೀಂಕೋರ್ಟ್ ಪ್ರವೇಶಕ್ಕೆ ಇ–ಪಾಸ್ ಪೋರ್ಟಲ್ ಆರಂಭ

## ಸಿಜೆಐ ಘೋಷಣೆ



ನವದೆಹಲಿ,ಆ.10–ದೇಶದ ಅತ್ಯುನ್ನತ ನ್ಯಾಯಾಲಯ ಸುಪ್ರೀಂಕೋರ್ಟ್ ಪ್ರವೇಶಿಸಲು ಇ–ಪಾಸ್ ಪಡೆಯಲು ಇನ್ನು ಸರದಿಯಲ್ಲಿ ನಿಲ್ಲಬೇಕಿಲ್ಲ. ಇದಕ್ಕೆ ಅನುವು ಮಾಡಿ ಕೊಡಲು 'ಸುಸ್ವಾಗತಂ' ಪೋರ್ಟಲ್ ಪ್ರಾರಂಭಿಸಲಾಗಿದೆ. ಸಿಜೆಐ ಚಂದ್ರಚೂಡ್ ಈ ಆನ್‌ಲೈನ್ ಸೌಲಭ್ಯದ ಬಗ್ಗೆ ಪ್ರಕಟಿಸಿದ್ದಾರೆ. ಇದರ ಮೂಲಕ ವಕೀಲರು, ಸಂದರ್ಶಕರು, ಮತ್ತಿತರರು ಇತರರು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಇ–ಪಾಸ್ ಪಡೆಯಬಹುದಾಗಿದೆ.

'ಸುಸ್ವಾಗತಂ' ವೆಬ್ ಆಧಾರಿತ ಮತ್ತು ಮೊಬೈಲ್ ಸ್ನೇಹಿ ಆಪ್ ಆಗಿದ್ದು, ಕೋರ್ಟ್ ವಿಚಾರಣೆಗೆ ಹಾಜರಾಗಲು, ವಕೀಲರನ್ನು ಭೇಟಿ ಮಾಡುವಂತಹ ವಿವಿಧ ಉದ್ದೇಶಗಳಿಗೆ ಬಳಕೆದಾರರು ಆನ್‌ಲೈನ್‌ನಲ್ಲಿ ನೋಂದಣಿಯಾಗಲು ಮತ್ತು ಇ–ಪಾಸ್ ಪಡೆಯಲು ಅನುಮತಿಸುತ್ತದೆ ಎಂದು ಸಿಜೆಐ ಹೇಳಿದ್ದಾರೆ.

'ಸುಸ್ವಾಗತಂ' ಪೋರ್ಟಲ್ ಅನ್ನು ಜುಲೈ 25, 2023 ರಿಂದ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದ್ದು, ಬಳಕೆದಾರರಿಂದ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಆಗಸ್ಟ್ 9ರವರೆಗೆ ಪ್ರಾಯೋಗಿಕವಾಗಿ 10 ಸಾವಿರಕ್ಕೂ ಹೆಚ್ಚು ಇ–ಪಾಸ್‌ಗಳನ್ನು ಪೋರ್ಟಲ್ ಮೂಲಕ ವಿತರಿಸಲಾಗಿದೆ. ನೀವು ಬೆಳಗ್ಗೆ ಸರತಿ ಸಾಲಿನಲ್ಲಿ ಕಾಯಬೇಕಾಗಿಲ್ಲ. ಆನ್‌ಲೈನ್‌ನಲ್ಲಿಯೇ ಎಲ್ಲಾ ಪಾಸ್‌ಗಳು ದೊರೆಯುತ್ತವೆ. ಇಂದು ಬೆಳಗ್ಗೆಯಿಂದಲೇ ಈ ಸೌಲಭ್ಯವನ್ನು ಒದಗಿಸಲಾಗಿದೆ. ಎಂಟ್ರಿಪಾಸ್ ಪಡೆಯಲು ಕೋರ್ಟಿನ ಕೌಂಟರ್ ಮುಂದೆ ಬೆಳಗೆ ಹೊತ್ತು ಬಹಳ ಹೊತ್ತು ಸರತಿ ಸಾಲಿನಲ್ಲಿ ಕಾಯಬೇಕಾಗುತ್ತದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ನ್ಯಾಯಪೀಠದ ಗಮನಕ್ಕೆ ತಂದಿದ್ದರು. ಅರ್ಜಿಯನ್ನು ಹೇಗೆ ಬಳಸುವುದು ಎಂಬುದರ ಕುರಿತು ವೀಡಿಯೊ ಟ್ಯುಟೋರಿಯಲ್ ವೆಬ್‌ಸೈಟ್‌ನಲ್ಲಿ ಲಭ್ಯವಿದೆ ಎಂದು ಸಿಜೆಐ ಹೇಳಿದರು.

# ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ನೋಂದಣಿ

ಮೈಸೂರು,ಆ.10–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ನಡೆಸಲು ಇರುವ ಪಿ.ಡಿ.ಓ, ಎಫ್.ಡಿ.ಎ, ಎಸ್.ಡಿ.ಎ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 45 ದಿನಗಳ ತರಬೇತಿಯನ್ನು ನೀಡಲಾಗುತ್ತದೆ. ಆಸಕ್ತರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಆ.14ರೊಳಗಾಗಿ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ದೂ.ಸಂ: 0821– 2515944 ಸಂಪರ್ಕಿಸಬಹುದು ಎಂದು ಕುಲಸಚಿವ ಪ್ರೊ.ಕೆ.ಎಲ್.ಎನ್. ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದ್ವಿತೀಯ ಪಿಯುಸಿ ಫೇಲಾದ ವಿದ್ಯಾರ್ಥಿಗಳಿಗಾಗಿ ಎನ್‌ಟಿಟಿ ತರಬೇತಿ

ಮೈಸೂರು,ಆ.10–ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ, ಎನ್‌ಡಿಎಂಎಲ್ ಹಾಗೂ ಎಸ್‌ಎಸ್ ಐಟಿ ಸಲ್ಯೂಷನ್ಸ್ ತರಬೇತಿ ಕೇಂದ್ರದ ಸಹಯೋಗದೊಂದಿಗೆ ದ್ವಿತೀಯ ಪಿಯುಸಿಯಲ್ಲಿ ಫೇಲಾದ ವಿದ್ಯಾರ್ಥಿಗಳಿಗಾಗಿ ನರ್ಸರಿ ಟೀಚರ್ ಟ್ರೈನಿಂಗ್ (ಎನ್‌ಟಿಟಿ) ತರಬೇತಿ ಆಯೋಜಿಸಿದೆ. ಮಹಿಳಾ ಸಬಲೀಕರಣದ ದೃಷ್ಟಿಯಿಂದ ಈ ತರಬೇತಿಯು ಪೂರಕವಾಗಿದ್ದು, 18 ವರುಷಕ್ಕಿಂತ ಮೇಲ್ಪಟ್ಟ ಆಸಕ್ತರೆಲ್ಲಾ ಫಲಾನುಭವಿಗಳಾಗಲಿದ್ದಾರೆ. ತರಬೇತಿಯಲ್ಲಿ ಮಕ್ಕಳ ವಿಕಾಸ, ಆರೋಗ್ಯ, ಪೌಷ್ಟಿಕಾಂಶ, ಕಂಪ್ಯೂಟರ್ ತರಬೇತಿ ಮುಂತಾದ ವಿಷಯಗಳ ಕುರಿತು ಪ್ರಾಯೋಗಿಕ ತರಗತಿಗಳಿರುತ್ತವೆ. ಅರ್ಜಿ ಹಾಗೂ ನೋಂದಾವಣೆಗಾಗಿ ಎಸ್‌ಎಸ್ ಐಟಿ ತರಬೇತಿ ಕೇಂದ್ರ, ರಾಮಕೃಷ್ಣನಗರ, ಮೈಸೂರು. 8310306882, 9964790442 ಸಂಪರ್ಕಿಸಬಹುದು.



# ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಆ.15ರವರೆಗೆ ಸ್ವದೇಶಿ ಸಪ್ತಾಹ



ಮೈಸೂರು,ಆ.10–ಮೈಸೂರಿನ ನಜರ್‌ಬಾದ್‌ನ ಹೈದರ್ ಅಲಿ ರಸ್ತೆಯ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಸ್ವದೇಶಿ ಸಪ್ತಾಹವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ನೆಕ್ಸಸ್, ಒಂದು ವಾರದ ಅವಧಿಯಲ್ಲಿ ಖಾದಿ, ರಾಷ್ಟ್ರೀಯ ಕೈಮಗ್ಗ ದಿನವನ್ನು ಆಚರಿಸುವ ಮೂಲಕ 'ಜೈ ಜವಾನ್ ಜೈ ಕಿಸಾನ್' ಅಡಿ ಸ್ಥಳೀಯ ರೈತರು ಹಾಗೂ ಸೈನಿಕರ ಕೊಡುಗೆಯನ್ನು ಗೌರವಿಸಲಾಗುವುದು. ಸ್ವದೇಶಿ ಸಪ್ತಾಹವನ್ನು ಆ.7ರಂದು ಭಾರತದ ಸಿರಿಧಾನ್ಯ ಖ್ಯಾತಿಯ ಪದ್ಮಶ್ರೀ ಡಾ.ಖಾದರ್ ವಲ್ಲಿ ಉದ್ಘಾಟಿಸಿದರು. ಈ ವೇಳೆ ಅವರು ಮಾತನಾಡಿ, ಸಿರಿಧಾನ್ಯಗಳು ಭಾರತ ದೇಶದ ಆಹಾರ ಪದ್ಧತಿಯಾಗಿದೆ. ಸುಸ್ಥಿರತೆಗಾಗಿ ಇವೇ ಭವಿಷ್ಯದ ಬೆಳೆಗಳು. ಪ್ರತಿಯೊಬ್ಬ ಭಾರತೀಯ ತಮಗೆ ಹಾಗೂ ತಮ್ಮ ಭವಿಷ್ಯದ ಪೀಳಿಗೆಯ ಆರೋಗ್ಯ ಹಾಗೂ ಸುಸ್ಥಿರತೆಗಾಗಿ ಸಿರಿಧಾನ್ಯಗಳನ್ನು ಒಳಗೊಳ್ಳಬೇಕು ಎಂದರು. ಪರಿಸರವಾದಿ ಮತ್ತು ಖಾದಿಯ ಪ್ರಚಾರಕರಲ್ಲೊಬ್ಬರು, ಸಸ್ಟೇನಬಲ್ ಡೆವಲಪ್‌ಮೆಂಟ್ ಗೋಲ್(ಎಸ್‌ಡಿಜಿ)ನ ಸುರೇಶ್ ಗುಪ್ತ ಮಾತನಾಡಿ, ಪ್ರತಿಯೊಬ್ಬ ಭಾರತೀಯನೂ ಖಾದಿಯನ್ನು ಉಪಯೋಗಿಸುವ ಮೂಲಕ ಭಾರತದ ಸಾಂಪ್ರದಾಯಿಕ ವಸ್ತ್ರ ಉದ್ಯಮಕ್ಕೆ ಒತ್ತಾಸೆಯಾಗಬೇಕು. ಜೊತೆಗೆ ಸ್ಥಳೀಯ ನೇಕಾರರ ಸಮುದಾಯವನ್ನು ಬೆಂಬಲಿಸಬೇಕು ಎಂದರು. ಒಂದು ಸಾವಯವ ರೈತ ಸಮೂಹವಾದ ಸಹಜ ಸಮೃದ್ಧಿಯ ನಿರ್ದೇಶಕರಾದ ಕೃಷ್ಣಪ್ರಸಾದ್, ಭಾರತದ ಹತ್ತಿಯು ವಿಶ್ವದಲ್ಲೇ ಅತ್ಯುತ್ತಮ ಹಾಗೂ ಅಪರೂಪದ್ದಾಗಿದೆ ಎಂದರು. ಇದೇ ವೇಳೆ ಸಿರಿಧಾನ್ಯಗಳು ಮತ್ತು ಅದರ ಉತ್ಪನ್ನಗಳನ್ನು ಪ್ರದರ್ಶಿಸಲಾಗುತ್ತಿದೆ. ಈ ಸ್ವದೇಶಿ ಮೇಳವು ಆ.15ರಂದು ಅಂತ್ಯಗೊಳ್ಳಲಿದೆ.

## ನಕ್ಕರೆ ಅದೇ ಸ್ವರ್ಗ

ಗುಂಡ : ಕಪ್ಪೆಗಳಿಗೆ ಮದುವೆ ಮಾಡಿಸಿದರೆ ಮಳೆ ಬರುತ್ತದೆ ಎಂದು ಎರಡು ಕಪ್ಪೆಗಳಿಗೆ ಮದುವೆ ಮಾಡಿಸಿದೆವು. ಆದರೆ ಈಗ ಮಳೆ ಜಾಸ್ತಿಯಾಗಿದೆ. ಏನು ಮಾಡುವುದು?

ಹನುಮ : ಕಪ್ಪೆಗಳಿಗೆ ಡೈವೋರ್ಸ್ ಕೊಡಿಸಬೇಕು!

ಮೈಸೂರು ಮಿತ್ರ

ಶುಕ್ರವಾರ, 11 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

### ಅಮೃತವಾಹಿನಿ.........

ಕಷ್ಟಪಟ್ಟು ದುಡಿಯುವುದರಲ್ಲಿ ಯಾವ ಅನುಮಾನವೂ ಇಲ್ಲ.

–ಜಮನಾಲಾಲ್ ಬಜಾಜ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತುಂಬಿ ತುಂಬಿ ಹೊಯ್ದರೂ ಹಂಬಲ ಮಾತ್ರ ಹೋಗದು

## ನಿಮ್ಮ ಪತ್ರಗಳು

### ಬಿಡಾಡಿ ದನಗಳ ಹಾವಳಿ ತಪ್ಪಿಸಿ

ಮಾನ್ಯರೇ,



ಮೈಸೂರಿನ ಹೃದಯ ಭಾಗ, ಪ್ರತಿಷ್ಠಿತ ಬಡಾವಣೆಗಳು ಹಾಗೂ ರಸ್ತೆಗಳು ಸೇರಿದಂತೆ ನಗರದೆಲ್ಲೆಡೆ ಬಿಡಾಡಿ ದನಗಳ ಹಾವಳಿ ಮತ್ತುದಾಂಧಲೆ ವಿಪರೀತ ಹೆಚ್ಚಿದ್ದು, ಪಾದಚಾರಿಗಳು, ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸುವಂತಾಗಿದೆ. ಇನ್ನು ನಗರ ಭಾಗದಲ್ಲಿ ಸೊಪ್ಪು ತರಕಾರಿ ಕೊಂಡು, ತಮ್ಮ ದ್ವಿಚಕ್ರ ವಾಹನದಲ್ಲಿ ತಗಲು ಹಾಕಿಕೊಂಡು ಇಲ್ಲವೇ ಕೈಚೀಲದಲ್ಲಿ ಹಿಡಿದುಕೊಂಡು ಹೋಗುವಾಗ ಕೈ ಚೀಲಕ್ಕೆ ಬಾಯಿ ಹಾಕಿ ಸೊಪ್ಪು, ತರಕಾರಿಯನ್ನು ತಿನ್ನಲೆತ್ನಿಸಿದ ನಿದರ್ಶನಗಳು ಸಾಕಷ್ಟು ಇವೆ.

ನಗರಪಾಲಿಕೆ ಇದನ್ನು ಗಂಭೀರವಾಗಿ ಪರಿಗಣಿಸಿ, ಗೋಪಾಲಕರಿಗೆ ಸೂಕ್ತ ನಿರ್ದೇಶನವನ್ನು ನೀಡಿ, ಹಸು ಕರುಗಳಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಪಾಲನೆ ಮಾಡಲು ತಾಕೀತು ಮಾಡಬೇಕಿದೆ. ಬೀಡಾಡಿ ಜಾನುವಾರುಗಳನ್ನು ಸನಿಹದ ಗೋ ಶಾಲೆಗೆ ಅಟ್ಟುವ ಪ್ರಯತ್ನಕ್ಕೆ ಮುಂದಾಗಿ ಸಾರ್ವಜನಿಕರು, ಪಾದಚಾರಿಗಳು ನಿರ್ಭೀತಿಯಿಂದ ರಸ್ತೆಗಳಲ್ಲಿ ಸಂಚರಿಸಲು ಅನುವು ಮಾಡಿಕೊಡುವಂತೆ ಸಂಬಂಧಪಟ್ಟವರು ಶೀಘ್ರ ಕ್ರಮ ಕೈಗೊಳ್ಳುವಂತೆ ಈ ಮೂಲಕ ಕೋರಲಾಗಿದೆ.

_ಎಂ.ಎನ್ ತುಕಾರಾಮ್ ರಾವ್, ಪ್ರಜ್ಞಾವಂತ ನಾಗರಿಕ ಬಳಗ, ಮೈಸೂರು.

### ಮೊಬೈಲ್ ನಂಬರ್‌ಗೆ ಬರುವ ಲಿಂಕ್ ಒತ್ತಿ ಹಣ ಕಳೆದುಕೊಳ್ಳಬೇಡಿ

ಮಾನ್ಯರೆ,

ಪ್ರತಿ ದಿನವೂ ನಮ್ಮ ಮೊಬೈಲ್ ಸಂಖ್ಯೆಗೆ ಅನಾಮಧೇಯ ಮೊಬೈಲ್ ಸಂಖ್ಯೆಗಳಿಂದ ನಿಮ್ಮ ಮೊಬೈಲ್ ಸಂಖ್ಯೆಗೆ ಒಂದು ಬಿಲಿಯನ್ ಹಣ ಲಕ್ಕಿ ಡ್ರಾನಲ್ಲಿ ಬಂದಿದೆ ಎಂದು ಒಂದು ಲಿಂಕ್ ಸಂದೇಶವನ್ನು ಕಳುಹಿಸಿ ಈ ಲಿಂಕ್ ಅನ್ನು ಒತ್ತಿ ನಿಮ್ಮ ಬ್ಯಾಂಕ್ ಮಾಹಿತಿ ನೀಡಿ, ನಿಮ್ಮ ಬ್ಯಾಂಕ್ ಖಾತೆಗೆ ಹಣ ಕ್ರೆಡಿಟ್ ಮಾಡುತ್ತೇವೆ ಎಂದು ಈ ಲಿಂಕ್ ಸಂದೇಶವಿರುತ್ತದೆ.

ನಾವೇನಾದರೂ ಹಣ ಬಂದಿರಬಹುದೆಂಬ ಆಸೆಗೆ ಈ ಲಿಂಕ್ ಅನ್ನು ಒತ್ತಿದರೆ ಮೊದಲು ನಮ್ಮ ಬ್ಯಾಂಕ್ ಅಕೌಂಟ್ ನಂಬರನ್ನು, ನಂತರ ನಮ್ಮ ಪಾನ್ ನಂಬರನ್ನು ಕೇಳುತ್ತದೆ. ಇವುಗಳನ್ನೇನಾದರು ನಾವು ಕೊಟ್ಟರೇ, ನಾವು ಮಾಹಿತಿ ನೀಡಿದ ಹತ್ತೇ ನಿಮಿಷದಲ್ಲಿ ನಾವು ಕೊಟ್ಟ ಬ್ಯಾಂಕ್ ಅಕೌಂಟ್‌ನ ಹಣ ಸಂಪೂರ್ಣ ಮಾಯವಾಗಿರುತ್ತದೆ.

ಇದು ಇತ್ತೀಚೆಗೆ ನನ್ನ ಸ್ನೇಹಿತನೊಬ್ಬ ಮೋಸ ಹೋದ ಕಥೆ. ಈ ರೀತಿ ಮೋಸ ಹೋಗುವವರು ಹೆಚ್ಚಾಗಿ ವಿದ್ಯಾವಂತರೇ ಆಗಿರುತ್ತಾರೆ. ಈ ಬಗ್ಗೆ ಬ್ಯಾಂಕ್‌ಗೆ ದೂರು ಕೊಡಲು ಹೋದರೆ, ನಮಗೂ ಅದಕ್ಕೂ ಸಂಬಂಧವಿಲ್ಲ ಎನ್ನುತ್ತಾರೆ. ದಯವಿಟ್ಟು ಎಲ್ಲಾ ಬ್ಯಾಂಕ್‌ನವರು, ಗ್ರಾಹಕರಿಗೆ ಕಾಣುವಂತೆ ನಿಮ್ಮ ಮೊಬೈಲ್ ನಂಬರ್‌ಗೆ ಬರುವ ಲಿಂಕ್‌ಗಳನ್ನು ಒತ್ತಿ ನಿಮ್ಮ ಹಣ ಕಳೆದುಕೊಳ್ಳಬೇಡಿ ಎಂದು ದೊಡ್ಡದಾಗಿ ಬೋರ್ಡ್ ಹಾಕಿ ಗ್ರಾಹಕರಲ್ಲಿ ಜಾಗೃತಿ ಮೂಡಿಸಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

### ಪೌರಕಾರ್ಮಿಕರು ಹೆಮ್ಮೆಯ ಶ್ರಮಜೀವಿಗಳು


ಮಾನ್ಯರೆ,

ಮೊದಲು ಕಾರ್ಮಿಕರು ಬೆಳಗ್ಗೆಯೇ ಮನೆ ಮುಂದೆ ತಳ್ಳುಗಾಡಿಗಳ ಮೂಲಕ ಸೀಟಿ ಹೊಡೆದು ಕಸ ಸಂಗ್ರಹಿಸುತ್ತಿದ್ದರು. ಈಗ ಸ್ವಲ್ಪ ಮಾರ್ಪಾಡು ಹೊಂದಿ ವಾಹನದಲ್ಲಿ ಧ್ವನಿವರ್ಧಕ ಬಳಸಿ ಕಸ ಸಂಗ್ರಹಣೆಯ ಜಾಗೃತಿ ಗೀತೆ ಹಾಡುಗಳನ್ನು ಹಾಕುವ ಮೂಲಕ ಜನರಲ್ಲಿ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ನಮ್ಮ ಬೀದಿ ಪರಿಸರ ನಗರ ಸ್ವಚ್ಛ ಹಾಗೂ ಸುಂದರವಾಗಿ ಕಾಣಲು ದುಡಿಯುವ ಹೆಮ್ಮೆಯ ಪೌರಕಾರ್ಮಿಕರಿಗೆ ಧನ್ಯವಾದಗಳು.

ಪೌರಕಾರ್ಮಿಕರು ಪ್ರತಿದಿನ ಬೆಳಗ್ಗೆ 5.30ರಿಂದ ಬೆಳಗ್ಗೆ 9 ಗಂಟೆವರೆಗೆ ಮನೆಮನೆಗೆ ಹೋಗಿ ಕಸ ಸಂಗ್ರಹಿಸುತ್ತಿದ್ದಾರೆ. ಕೆಲವು ವಾರ್ಡ್‌ಗಳಲ್ಲಿ ಅವರಿಗಾಗಿ ವಿಶೇಷ ವಿಶ್ರಾಂತಿ ಗೃಹವನ್ನು ನಿರ್ಮಿಸಿ ಅವರಿಗೆ ಅನುಕೂಲವಾಗಲೆಂದು ಸೌಕರ್ಯ ಕಲ್ಪಿಸಲಾಗಿದೆ. ಇದನ್ನು ಮತ್ತಷ್ಟು ಕಡೆ ವಿಸ್ತರಣೆ ಮಾಡಿ ಮೂಲಸೌಕರ್ಯಗಳನ್ನು ಕಲ್ಪಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಹಾಗೂ ಸ್ವಚ್ಛತಾ ಕಾರ್ಯದಲ್ಲಿ ಮತ್ತಷ್ಟು ವೈಜ್ಞಾನಿಕ ಸ್ವಚ್ಛತಾ ವಿಧಾನವನ್ನು ಅಳವಡಿಸಿಕೊಂಡರೆ ಉತ್ತಮ.

–ಗೋವಿತ್ ಕಿರಣ್, ರಾಜೇಂದ್ರನಗರ, ಮೈಸೂರು

### ಸಾರ್ವಜನಿಕರ ಗಮನ ಸೆಳೆಯುತ್ತಿರುವ ಡೆಮೋ ರೈಲು





ಮಾನ್ಯರೆ,

ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ನೈರುತ್ಯ ರೈಲ್ವೆ ಕಾರ್ಯಾಗಾರದ ಗೇಟ್‌ನಲ್ಲಿ ರೈಲ್ವೆ ಇಲಾಖೆಯು, ದ್ವಾರದ ಎರಡು ಬದಿಯಲ್ಲಿ ವ್ಯವಸ್ಥೆ ಮಾಡಿರುವ ಡೆಮೋ ರೈಲು ನೋಡುಗರ ಗಮನ ಸೆಳೆಯುತ್ತಿದೆ. ಬಲಭಾಗದಲ್ಲಿ ಕೆಂಪು ಬಣ್ಣದ ರೈಲು ಹಳಿಯ ಮೇಲೆ ನಿಂತಿರುವುದು ತುಂಬಾ ಆಕರ್ಷಕವಾಗಿದೆ. ಅಲ್ಲದೆ ಗೇಟಿನ ಎರಡೂ ಬದಿಯಲ್ಲಿ ರೈಲು ಚಲಿಸುವ ರೀತಿಯಲ್ಲಿ ಅಳವಡಿಸಿದ್ದು ಸಾರ್ವಜನಿಕರ ಗಮನ ಸೆಳೆಯುತ್ತಿದೆ. ಕಾರ್ಯಾಗಾರದ ಅಂದ ಹೆಚ್ಚಿಸಿರುವ ರೈಲ್ವೆ ಆಡಳಿತ ಮಂಡಳಿಗೆ ವಂದನೆಗಳು.


– ಪಡುವಾರಹಳ್ಳಿ ಎಂ.ರಾಮಕೃಷ್ಣ, ವಕೀಲರು

# ಪಾರಂಪರಿಕ ಲ್ಯಾನ್ಸ್‌ಡೌನ್ ಕಟ್ಟಡದ ಅಮೂಲ್ಯ ಮರದ ಕಿಟಕಿ, ಬಾಗಿಲು, ಸರಳು ಖದೀಮರ ಪಾಲು; ಒಳಗಿದ್ದವಂತೆ ಅಪರಿಚಿತ ಶವಗಳು!









● ಮೋಹನ್ ಕಾಯಕ

ಮೈಸೂರು, ಆ.10– ಪಾರಂಪರಿಕ ನಗರಿ(ಹೆಸರಿಗಷ್ಟೇ ಸೀಮಿತ...!) ಮೈಸೂರಿನಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳ ಬೇಜವಾಬ್ದಾರಿ ಮತ್ತು ಅವರಲ್ಲಿನ ಇಚ್ಛಾಶಕ್ತಿಯ ಕೊರತೆ ಹಾಗೂ ಕಳ್ಳ–ಖದೀಮರ ದುರಾಸೆಯಿಂದಾಗಿ ಮರೆಯಾಗುತ್ತಿವೆ ಮೈಸೂರು ಮಹಾ ಸಂಸ್ಥಾನ ನೀಡಿದ ಕುರುಹುಗಳು...!

ಇದು ಮೈಸೂರಿನಲ್ಲಿ ಸಂರಕ್ಷಣೆಯಾಗದಿದ್ದರೂ ಬಾಯಿ ಚಪಲಕ್ಕೆ ಸದಾ ಚರ್ಚೆಯಲ್ಲಿರುವ ಪಾರಂಪರಿಕ ಕಟ್ಟಡಗಳ ದುಸ್ಥಿತಿಯಾಗಿದೆ. ಮುಖ್ಯವಾಗಿ 132 ವರ್ಷಗಳ ಇತಿಹಾಸ ಹೊಂದಿರುವ ಲ್ಯಾನ್ಸ್‌ಡೌನ್ ಕಟ್ಟಡ ಕುಸಿದು ಬರೋಬ್ಬರಿ ಹನ್ನೊಂದು ವರ್ಷಗಳು ಕಳೆದಿವೆ. ಸಂರಕ್ಷಣೆ ಮಾಡುತ್ತೇವೆ... ಹೊಸದಾಗಿ ಅದೇ ರೀತಿ ಕಟ್ಟುತ್ತೇವೆ... ಎಂದು ತಮ್ಮ ಪ್ರಚಾರದ ತೆವಲು ತೀರಿಸಿಕೊಳ್ಳುತ್ತಿದ್ದಾರೆಯೇ ಹೊರತು ನಿಜವಾಗಿಯೂ ಸಂರಕ್ಷಣೆ ಮಾಡಬೇಕು ಎಂಬ ಇಚ್ಛಾಶಕ್ತಿ ಯಾರಲ್ಲೂ ಇಲ್ಲವೆಂಬುದು ಖಾತರಿಯಾಗಿದೆ

ನಗರದ ಕೇಂದ್ರ ಭಾಗದಲ್ಲಿರುವ ಲ್ಯಾನ್ಸ್‌ಡೌನ್ ಕಟ್ಟಡದ ಸ್ಥಿತಿಯನ್ನು ಕಂಡರೆ ಈ ಪಾರಂಪರಿಕ ಕಟ್ಟಡ ನಿಜವಾಗಿಯೂ ಸ್ವಚ್ಛ ನಗರಿಯಲ್ಲಿ ಇದೆಯೇ? ಎಂಬ ಪ್ರಶ್ನೆ ಮೂಡುತ್ತದೆ. ಅಷ್ಟರ ಮಟ್ಟಿಗೆ ಕಟ್ಟಡವನ್ನು ಹಾಳು ಮಾಡಿರುವುದಲ್ಲದೆ ಕಸದ ಗುಂಡಿಯನ್ನಾಗಿ... ಬಯಲು ಶೌಚಾಲಯವನ್ನಾಗಿ... ಅಪರಿಚಿತರ ಮೃತದೇಹಗಳು ಪತ್ತೆಯಾಗುವ ನಿಗೂಢ ಸ್ಥಳವನ್ನಾಗಿ ಮಾರ್ಪಾಡು ಮಾಡಿಕೊಂಡಿದ್ದಾರೆ. ಇದಕ್ಕೆ ಯಾರು ಹೊಣೆ... ಕಟ್ಟಡ ಸಂರಕ್ಷಣೆ ಜವಾಬ್ದಾರಿ ಯಾರದ್ದು... ಎಂದು ಯೋಚನೆ ಮಾಡಿದರೆ... ಇಷ್ಟೊಂದು ಅನಾಗರಿಕರು.. ಅಶಕ್ತರು ನಮ್ಮವರು.. ಎನ್ನಿಸುತ್ತದೆ.

2012ರ ಆ.25ರಂದು ಮಳಿಗೆ ಸಂಖ್ಯೆ 17 ಮತ್ತು 18ರ ಚಾವಣಿ ಕುಸಿದು ನಾಲ್ವರು ಸಾವನ್ನಪ್ಪಿದ್ದ ಘಟನೆ ನಂತರ ಶಿಥಿಲಗೊಂಡಿರುವ ಪಾರಂಪರಿಕ ಕಟ್ಟಡವನ್ನು ನವೀಕರಿಸಬೇಕೇ ಅಥವಾ ಅದೇ ವಿನ್ಯಾಸದಲ್ಲಿ ಮರು ನಿರ್ಮಿಸಬೇಕೇ ಎಂಬ ಚರ್ಚೆಗಳು 11 ವರ್ಷ ಕಳೆದರೂ ಚರ್ಚೆಗಳಾಗಿವೇ ಹೊರತು ಕಾರ್ಯರೂಪಕ್ಕೆ ಬಂದಿಲ್ಲ. ಪಾರಂಪರಿಕ ಕಟ್ಟಡ ಉಳಿಸಿ ಎನ್ನುವವರು ಹಾಗೂ ಇದನ್ನು ಕೆಡವಿ ನವೀನ ಮಾದರಿಯಲ್ಲಿ ಹೊಸ ಕಟ್ಟಡ ನಿರ್ಮಾಣವಾಗಬೇಕು ಎನ್ನುವವರ ತಿಕ್ಕಾಟದಲ್ಲಿ ಮೈಸೂರು ಮಹಾರಾಜರ ಪರಿಶ್ರಮ, ಕಾಳಜಿ ಕಳ್ಳ–ಖದೀಮರ ಪಾಲಾಗುತ್ತಿದೆ.

ಲ್ಯಾನ್ಸ್ ಡೌನ್ ಕಟ್ಟಡದ ಹಿಂದೆ–ಮುಂದೆ ಇದ್ದಂತಹ ಕಿಟಕಿ, ಬಾಗಿಲು ಹಾಗೂ ಕಬ್ಬಿಣದ ಸರಳುಗಳು ಕಳ್ಳರ ಚಟಕ್ಕೆ ಹಣ ದೊರಕಿಸಿ ಕೊಡುವ ಅಮೂಲ್ಯ ವಸ್ತುಗಳಾಗಿವೆ. ನೂರಾರು ವರ್ಷ ಕಳೆದರೂ ತುಕ್ಕು ಹಿಡಿಯದ ಕಬ್ಬಿಣದ ಸರಳುಗಳು ಹಾಗೂ ಕುಟ್ಟೆ ಹಿಡಿಯದ(ದುರ್ಬಲ ಗೊಳ್ಳದ) ಮರದ ಕಿಟಕಿ–ಬಾಗಿಲುಗಳನ್ನು ಮನ ಬಂದಂತೆ ಮೀಟಿ ಕಿತ್ತೊಯ್ಯಲಾಗಿದೆ. ಕಾಗೆಗಳು ಕಿತ್ತು ತಿಂದ ರಸಭರಿತ ಹಣ್ಣಿನಂತೆ ಲ್ಯಾನ್ಸ್ ಡೌನ್ ಕಟ್ಟಡ ಕಣ್ಣಿಗೆ ರಾಚುತ್ತಿದ್ದು, ಸೌಮ್ಯ ಸ್ವಭಾವದವರನ್ನು ಕೆರಳಿಸುವಂತಿದೆ.

**ಉಚ್ಚೆ(ಮೂತ್ರ) ಮೋರಿ:** ಲ್ಯಾನ್ಸ್ ಡೌನ್ ಕಟ್ಟಡದ ಮುಂಭಾಗ ಸುರಕ್ಷತೆಯ ದೃಷ್ಟಿಯಿಂದ ಕಬ್ಬಿಣದ ತಡೆಗೋಡೆ ನಿರ್ಮಿಸಲಾಗಿದ್ದು, ಅದನ್ನೂ ಮೀಟಿ ಒಳನುಸುಳಲು ದಾರಿ ಮಾಡಿಕೊಂಡಿದ್ದಾರೆ. ಹಿಂಭಾಗದಲ್ಲಿ ಕಾಂಕ್ರೀಟ್ ರಸ್ತೆಯೇನೋ ಆಗಿದೆ. ಆದರೆ ಲ್ಯಾನ್ಸ್‌ಡೌನ್ ಕಟ್ಟಡಕ್ಕೆ ಹೊಂದಿಕೊಂಡಂತೆ ಮಳೆ ನೀರು ಹರಿಸಲು ಮಾಡಿರುವ ಮೋರಿ ಅಕ್ಷರಶಃ ಉಚ್ಚೆ ಮೋರಿಯಾಗಿದೆ. ಅಲ್ಲಿಯೇ ಹತ್ತಾರು ಮಳಿಗೆಗಳು, ಹೋಟೆಲ್‌ಗಳು, ಟೀ ಅಂಗಡಿ ಗಳಿದ್ದರೂ ಯಾವುದೇ ಮುಜುಗರ, ಅಂಜಿಕೆ ಇಲ್ಲದೆ ರಾಜಾರೋಷವಾಗಿ ಮೂತ್ರ ವಿಸರ್ಜನೆ ಮಾಡುತ್ತಾರೆ. ಇವರನ್ನು ಅನಾಗರಿಕರನ್ನಬೇಕೊ... ಅವಿವೇಕಿಗಳು ಎನ್ನಬೇಕೋ... ಇಲ್ಲ ಹೇಸಿಗೆ ಜನ ಅನ್ನಬೇಕೋ... ತಿಳಿಯದು. ಅಪ್ಪಿತಪ್ಪಿ ಏನಾದರೂ ಪ್ರಶ್ನಿಸಿದರೆ ಇಲ್ಲೆಲ್ಲಿಯೂ ಸಾರ್ವಜನಿಕ ಶೌಚಾಲಯವಿಲ್ಲ. ಆದ್ದರಿಂದ ಇಲ್ಲಿಗೆ ಬರುತ್ತೇವೆ... ನೀವ್ಯಾರು ಕೇಳಲು... ನನ್ನಿಷ್ಟ ಎಂಬ ಜೋರು ಅಸಡ್ಡೆ ಉತ್ತರಗಳನ್ನು ನೀಡುತ್ತಾರೆ.

ಅಲ್ಲದೆ ಲ್ಯಾನ್ಸ್ ಡೌನ್ ಕಟ್ಟಡದೊಳಗಿರುವ ಮಳಿಗೆಗಳನ್ನು ಕಸದ ತೊಟ್ಟಿಗಳನ್ನಾಗಿ ಮಾಡಿಕೊಂಡಿದ್ದು, ರಾಶಿ ರಾಶಿ ಕಸ ಬಿದ್ದಿದೆ. ಕಟ್ಟಡ ಸುತ್ತಲೂ ಮಲ–ಮೂತ್ರದ ದುರ್ವಾಸನೆ ಮೂಗಿಗೆ ಬಡಿಯಲಿದ್ದು, ಹಳೇ ಸಂತೆಪೇಟೆಗೆ ಬರುವ ಜನರಿಗೆ, ಅಂಗಡಿ ಮಾಲೀಕರಿಗೆ ಈ ಕಟ್ಟಡ ಸುಲಭ ಶೌಚಾಲಯವಾಗಿದೆ.

**ಸಾಕಾರಗೊಳ್ಳದ ಪ್ರಯತ್ನಗಳು:** ಲ್ಯಾನ್ಸ್ ಡೌನ್ ಕಟ್ಟಡದ ಕೆಲ ಭಾಗ ಕುಸಿದು ಬಿದ್ದ ಬಳಿಕ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎ.ರಾಮದಾಸ್ ಸರ್ವಪಕ್ಷ ಮುಖಂಡರ ಸಭೆ ನಡೆಸಿ ಮುಂದಿನ ಒಂದು ವರ್ಷದೊಳಗೆ ಪುನರ್ ನಿರ್ಮಾಣ ಕಾರ್ಯ ಕೈಗೊಳ್ಳುವ ಭರವಸೆ ಈಡೇರಲಿಲ್ಲ. ಯಡಿಯೂರಪ್ಪ ಅವರ ಸರ್ಕಾರದ ಅವಧಿಯಲ್ಲಿ 2 ಕೋಟಿ ಹಣ ಮಂಜೂರು ಮಾಡಿತ್ತು. ಲ್ಯಾನ್ಸ್‌ಡೌನ್ ಕಟ್ಟಡವನ್ನು ಮರು ನಿರ್ಮಿಸಬೇಕೆ ಅಥವಾ ನವೀಕರಿಸಬೇಕೇ ಎಂದು ವರದಿ ನೀಡಲು ಎರಡು ಸಮಿತಿಗಳನ್ನು ರಚಿಸಲಾಗಿತ್ತು. ಆದರೆ ಆ ಸಮಿತಿಗಳು ನೀಡಿದ ಪ್ರತ್ಯೇಕ ವರದಿ ಅಂದೇ ಕಳೆದು ಹೋಯಿತು. 2015ರಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಕಟ್ಟಡ ಪುನರ್ ನಿರ್ಮಾಣಕ್ಕಾಗಿ 6 ಕೋಟಿ ರೂ. ಬಿಡುಗಡೆ ಮಾಡಿ ಶಂಕುಸ್ಥಾಪನೆಯನ್ನೂ ನೆರವೇರಿಸಿದ್ದರು. ದುರದೃಷ್ಟವಶಾತ್ ದೇವರಾಜ ಮಾರುಕಟ್ಟೆಯ ಕಮಾನು ದ್ವಾರ ನವೀಕರಣ ಸಂದರ್ಭದಲ್ಲಿ ಕುಸಿದು ಬಿದ್ದ ಬಳಿಕ ಎಲ್ಲಾ ಕೆಲಸಗಳು ಅಲ್ಲಿಗೇ ಸ್ಥಗಿತಗೊಂಡು ಇದುವರೆಗೂ ಸರಿಪಡಿಸುವ ಸಣ್ಣ ಪ್ರಯತ್ನವೂ ನಡೆದಿಲ್ಲ. ಆದರೆ ಇದರ ಲಾಭ ಪಡೆಯುತ್ತಿರುವ ಕಳ್ಳರು ಲ್ಯಾನ್ಸ್‌ಡೌನ್ ಕಟ್ಟಡದಲ್ಲಿದ್ದ ಕಿಟಕಿ, ಬಾಗಿಲುಗಳನ್ನು ಮುರಿದು, ಕಬ್ಬಿಣದ ಸರಳುಗಳನ್ನು ಗೋಡೆ ಮೀಟಿ ತೆಗೆದುಕೊಂಡು ಹೋಗಿ ಮಾರಿಕೊಂಡಿದ್ದಾರೆ.

ಸದ್ಯಕ್ಕೆ ಲ್ಯಾನ್ಸ್‌ಡೌನ್ ಕಟ್ಟಡದ ನವೀಕರಣ ಅಥವಾ ಮರು ನಿರ್ಮಾಣ ವಿಚಾರ ಕೋರ್ಟ್ ಅಂಗಳದಲ್ಲಿದ್ದು, ಯಾವ ನಿರ್ಧಾರ ಹೊರಬರಲಿದೆ ಎಂದು ಕಾಯುವುದರ ಜೊತೆಗೆ ಅನೈರ್ಮಲ್ಯ, ದುರ್ವಾಸನೆ ಜೊತೆಗೆ ಕಳ್ಳರ ಲೂಟಿ ನೋಡುತ್ತಾ, ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳು ಬಣ್ಣವಿಲ್ಲದೆ ಆಡುತ್ತಿರುವ ನಾಟಕದ ಮಾತುಗಳನ್ನು ಕೇಳುತ್ತಾ ಮೌನವಾಗಿರುವುದು ಪ್ರಜ್ಞಾವಂತ ನಾಗರಿಕರ ಅಸಹಾಯಕ ಸ್ಥಿತಿಯಾಗಿದೆ.



### ಲಕ್ಷಾಂತರ ರೂ. ಮೌಲ್ಯದ ಕಿಟಕಿ, ಕಬ್ಬಿಣ ಕಳವು...

“ಲ್ಯಾನ್ಸ್‌ಡೌನ್ ಕಟ್ಟಡದಲ್ಲಿದ್ದ ಲಕ್ಷಾಂತರ ರೂ.ಮೌಲ್ಯದ ಕಿಟಕಿ, ಕಬ್ಬಿಣಗಳನ್ನು ಕದ್ದೊಯ್ದಿದ್ದಾರೆ. ಪೊಲೀಸರಿಗೆ ತಿಳಿಸಿದರೆ, ನಾವೇನು ಕಾಯ್ಕೊಂಡು ಕೂರೋದಕ್ಕೆ ಆಗುತ್ತೇನ್ರಿ... ಎನ್ನುತ್ತಾರೆ. ಕಿಟಕಿಗಳಿಗೆ ಅಳವಡಿಸಿದ್ದ ಒಂದೇ ಒಂದು ಕಬ್ಬಿಣದ ರಾಡಿಲ್ಲ. ಅಮೂಲ್ಯ ಮರದ ಕಿಟಕಿ, ಬಾಗಿಲುಗಳನ್ನು ಕಿತ್ತೊಯ್ದಿದ್ದಾರೆ. ಇನ್ನೂ ಸ್ವಲ್ಪದಿನ ಕಳೆದರೆ ಗೋಡೆ ಹೊಡೆದು ಇಟ್ಟಿಗೆಗಳನ್ನು ಬಿಡುವುದಿಲ್ಲ.

–ನಂಜುಂಡಸ್ವಾಮಿ, ಟೀ ಅಂಗಡಿ ಮಾಲೀಕ, ಲ್ಯಾನ್ಸ್‌ಡೌನ್ ಕಟ್ಟಡದ ಹಿಂಭಾಗ

### ಮೂತ್ರ ಮಾಡುವವರಿಗೆ ಮಾತು ಕೊಡಲಾಗದು...

“ಏನೂ ಹೇಳೋದ್ ಸರ್.. ಇಲ್ಲಿ ಮೂತ್ರ ಮಾಡಬೇಡಪ್ಪ ಎಂದರೆ ಒಬ್ಬ ನಿಮ್ ಅಂಗಡಿಯೊಳಗೆ ಮಾಡ್ತಾ ಇದ್ದಿನಾ.. ಇನ್ನೊಬ್ಬ ಬೋರ್ಡ್(ಮೂತ್ರ ವಿಸರ್ಜನೆ ಮಾಡಬಾರದು ಎಂಬ ಬೋರ್ಡ್) ಮೇಲಾಕಿರೋದು ನಾನು ಕೆಳಗೆ ಮಾಡುತ್ತಿದ್ದೇನೆ... ಮತ್ತೊಬ್ಬ ಅಲ್ಲಿ ಮಾಡಿದರೂ ಹರಿದು ಇಲ್ಲೇ ಬರೋದು... ಮಗದೊಬ್ಬ ನಿಮ್ಮಪ್ಪನದಾ ಜಾಗ... ಎನ್ನುತ್ತಾರೆ. ಆದ್ದರಿಂದ ಇದಕ್ಕೆ ಉಚ್ಚೆ ಗಲ್ಲಿ ಎಂಬ ಹೆಸರು ಬಂದಿದೆ. ಅಲ್ಲದೆ ಲ್ಯಾನ್ಸ್ ಡೌನ್ ಕಟ್ಟಡದೊಳಗೆ ಐದಾರು ಮಂದಿ ಅಪರಿಚಿತರ ಮೃತದೇಹಗಳು ಸಿಕ್ಕಿವೆ.

–ಆರೀಫ್ ಪಾಷಾ, ಮೆಕ್ಯಾನಿಕ್, ಲ್ಯಾನ್ಸ್‌ಡೌನ್ ಕಟ್ಟಡದ ಹಿಂಭಾಗ



### ಮೈಸೂರು ಸಂಸ್ಥಾನದ ಕುರುಹು ಮರೆಯತ್ತ

1892ರಲ್ಲಿ ನವೆಂಬರ್ ತಿಂಗಳಿನಲ್ಲಿ ಅಂದಿನ ಮಹಾರಾಜರಾದ ಹತ್ತನೇ ಚಾಮರಾಜ ಒಡೆಯರ್ ಅವರು ಜನರಿಗೆ ಅಗತ್ಯ ವಸ್ತುಗಳು ಒಂದೇ ಸೂರಿನಡಿ ದೊರೆಯಲಿ ಎಂಬ ಸದುದ್ದೇಶದಿಂದ ಈ ಕಟ್ಟಡವನ್ನು ಕಟ್ಟಿಸಿದ್ದರು. ಅಂದಿನ ಬ್ರಿಟಿಷ್ ವೈಸ್‌ರಾಯ್ ಲ್ಯಾನ್ಸ್ ಡೌನ್, ವಿಕ್ಟೋರಿಯಾ ರಾಣಿಯ ಪ್ರತಿನಿಧಿಯಾಗಿ ಮೈಸೂರಿಗೆ ಭೇಟಿ ನೀಡಿದ್ದರ ಜ್ಞಾಪಕಾರ್ಥವಾಗಿ ಈ ಕಟ್ಟಡಕ್ಕೆ ಅವರ ಹೆಸರಿಡಲಾಗಿತ್ತು. ಹಾಗೆಯೇ ಮುಂಬೈನ ವಿಕ್ಟೋರಿಯಾ ಟರ್ಮಿನಲ್ ಮಾದರಿಯಲ್ಲಿ ಕಟ್ಟಿದ ಈ ಕಟ್ಟಡ ಅಂದು ಮೈಸೂರಿನ ಹೆಗ್ಗುರುತಾಗಿತ್ತು. ಆದರೀಗ ಮರೆಯತ್ತ ಸಾಗುತ್ತಿದ್ದು, ಇದನ್ನು ಉಳಿಸಿಕೊಳ್ಳಲು ಇಚ್ಛಾಶಕ್ತಿ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳಲ್ಲಿ ಇಲ್ಲದಿರುವುದು ಬೇಸರದ ಸಂಗತಿಯಾಗಿದೆ.





# ಉರುಳು ಸೇವೆ ವೇಳೆ ಎಚ್ಚರ ತಪ್ಪಿದರೆ ಉಸಿರು ಹೋಗುವುದು ಗ್ಯಾರಂಟಿ!; ಇದು ಶ್ರೀ ನಂಜುಂಡೇಶ್ವರನ ಬಡ ಭಕ್ತರ ವ್ಯಥೆ!!

ಇತ್ತೀಚೆಗೆ ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಾಲಯವನ್ನು (ಶ್ರೀಕಂಠೇಶ್ವರ ದೇವಾಲಯ) ಕಮರ್ಷಿಯಲ್ ಕಾಂಪ್ಲೆಕ್ಸ್ ರೀತಿಯಲ್ಲಿ ಬಳಸಿಕೊಳ್ಳಲಾಗುತ್ತಿದೆ. ದೇವಸ್ಥಾನದ ಸುತ್ತಲು ಉರುಳು ಸೇವೆಗೆ ಮೀಸಲಿದ್ದ ಸ್ಥಳವೀಗ ಟಿಕೆಟ್ ಖರೀದಿಸಿ ವಿಶೇಷ ದರ್ಶನ ಪಡೆಯುವವರು ಸರತಿ ಸಾಲಿನಲ್ಲಿ ನಿಲ್ಲಲು ಬಳಕೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬಡ ಭಕ್ತರು ರಸ್ತೆಯಲ್ಲಿ ವಾಹನಗಳ ಸಂಚಾರದ ನಡುವೆ ಉರುಳು ಸೇವೆ ಸಲ್ಲಿಸುವ ಸನ್ನಿವೇಶ ಸೃಷ್ಟಿಯಾಗಿದೆ. ಎಚ್ಚರ ತಪ್ಪಿದರೆ ವಾಹನಗಳಿಗೆ ಸಿಲುಕಿ ಬಡ ಭಕ್ತರ ಉಸಿರು ಹೋಗುವುದು ಗ್ಯಾರಂಟಿ ಎನ್ನುವಂತಾಗಿದೆ.

ಭಕ್ತರು ಹಲವು ವಿಧದ ಹರಕೆಗಳನ್ನು ಹೊತ್ತು ಇಲ್ಲಿಗೆ ಬರುತ್ತಾರೆ. ಅವುಗಳಲ್ಲಿ ಉರುಳು ಸೇವೆ, ಹೆಜ್ಜೆ ನಮಸ್ಕಾರ, ಧೂಪ ಸೇವೆಗಳು ಪ್ರಮುಖವಾದವು. ಅನಾದಿ ಕಾಲದಿಂದಲೂ ಭಕ್ತರು ಈ ಸೇವೆಗಳನ್ನು ಮಾಡುತ್ತ ಬರುತ್ತಿದ್ದಾರೆ. ಹುಣ್ಣಿಮೆ, ಸೋಮವಾರ, ಶಿವರಾತ್ರಿ, ಜಾತ್ರೆ ಸೇರಿದಂತೆ ವಿಶೇಷ ದಿನಗಳಲ್ಲಿ ಸಾವಿರಾರು ಭಕ್ತರು ಈ ಸೇವೆಗಳನ್ನು ಸಲ್ಲಿಸುತ್ತಾರೆ. ಇಂತಹ ಸೇವೆಗಳನ್ನು ಸಲ್ಲಿಸುವ ಭಕ್ತರ ಅನುಕೂಲಕ್ಕಾಗಿ ಮಹಾರಾಜರು ದೇವಾಲಯದ ಸುತ್ತಲು ಮರಳು ಹಾಕಿಸಿ, ಉರುಳು ಸೇವೆಗೆ ಪೂರಕ ವ್ಯವಸ್ಥೆ ಕಲ್ಪಿಸಿದ್ದರು. 2002ರಲ್ಲಿ ದೇವಾಲಯದ ಸಮಗ್ರ ಅಭಿವೃದ್ಧಿ ಮಾಡಲಾಯಿತು. ಇದೇ ಸಂದರ್ಭದಲ್ಲಿ ಮಾಜಿ ಮಂತ್ರಿ ದಿವಂಗತ ಎಂ.ಮಹದೇವ್ ಅವರು ಉರುಳು ಸೇವೆ ಮಾಡುವ ಭಕ್ತರ ಸುರಕ್ಷತೆ ದೃಷ್ಟಿಯಿಂದ ಮತ್ತು ಹೆಚ್ಚಿನ ಅನುಕೂಲಕ್ಕಾಗಿ



ಕಲ್ಲಿನ ಚಪ್ಪಡಿಗಳನ್ನು ಹಾಕಿಸಿ, ನೀರು ಜಿನುಗುವಂತೆ ವ್ಯವಸ್ಥೆ ಮಾಡಿಸಿದ್ದರು. ಅಲ್ಲದೆ, ಸುತ್ತಲು ಕಬ್ಬಿಣದ ಫೆನ್ಸ್ ಹಾಕಿಸಿ, ಯಾವುದೇ ಅಡೆತಡೆ ಇಲ್ಲದೇ ಉರುಳು ಸೇವೆ ಮಾಡಲು ವ್ಯವಸ್ಥೆ ಕಲ್ಪಿಸಿದರು. ಇದರಿಂದ ಸಾವಿರಾರು ಭಕ್ತರು ಸುಲಲಿತವಾಗಿ ತಮ್ಮ ಉರುಳು ಸೇವೆಯ ಹರಕೆ ಸಲ್ಲಿಸಲು ಅನುಕೂಲವಾಗಿತ್ತು. ಇತ್ತೀಚೆಗೆ ದೇವಾಲಯದ ಆಡಳಿತ ವ್ಯವಸ್ಥೆಯು ಸದರಿ ಸ್ಥಳದಲ್ಲಿ 50 ಮತ್ತು 100 ರೂ. ಟಿಕೆಟ್ ಖರೀದಿಸಿ ವಿಶೇಷ ದರ್ಶನ ಪಡೆಯಲಿಚ್ಛಿಸುವವರು ಕಾದು ನಿಲ್ಲಲು ಮೀಸಲಿಟ್ಟಿದೆ. ಇದರಿಂದ ಉರುಳು ಸೇವೆ, ಧೂಪ ಸೇವೆ, ಹೆಜ್ಜೆ ನಮಸ್ಕಾರ ಮಾಡುವ ಬಡ ಭಕ್ತರು ರಸ್ತೆಯಲ್ಲೇ ಹರಕೆ ತೀರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ವಾಹನ ದಟ್ಟಣೆ ನಡುವೆ ರಸ್ತೆಯಲ್ಲೇ ಬಡ ಭಕ್ತರು ಉರುಳು ಸೇವೆ ಮಾಡುತ್ತಿದ್ದು, ಎಚ್ಚರ ತಪ್ಪಿದರೆ ಅವರು ವಾಹನಗಳಿಗೆ ಸಿಲುಕಿ ಪ್ರಾಣ ಕಳೆದುಕೊಳ್ಳುವ ದುಸ್ಥಿತಿ ಬಂದೊದಗಲಿದೆ. ಸುರಕ್ಷತೆ ದೃಷ್ಟಿಯಿಂದ ಈ ಹಿಂದಿನಂತೆ ಉರುಳು ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಬೇಕೆಂದು ಭಕ್ತರು ಮಾಡಿದ ಮನವಿಗೆ ಆಡಳಿತ ಮಂಡಳಿ ಸ್ಪಂದಿಸದೇ ನಿರ್ಲಕ್ಷ್ಯ ತಾಳಿದ್ದು, ಉರುಳು ಸೇವೆಯಿಂದ ದೇವಸ್ಥಾನಕ್ಕೇನು ಲಾಭವೆಂಬ ಉಡಾಫೆ ಉತ್ತರವನ್ನೂ ನೀಡಿದೆ. ಇದು ನಿಜಕ್ಕೂ ಖಂಡನೀಯ.

ಶೀಘ್ರವೇ ಈ ಅವ್ಯವಸ್ಥೆಯನ್ನು ಸರಿಪಡಿಸದೇ ಇದ್ದಲ್ಲಿ ದೇವಸ್ಥಾನದ ಆಡಳಿತ ಮಂಡಳಿಯ ಹಣದಾಸೆಗೆ ಬಡ ಭಕ್ತರ ಪ್ರಾಣ ಹೋಗುವುದು ಗ್ಯಾರಂಟಿ. ವಾಹನಗಳಿಗೆ ಸಿಲುಕಿ ಭಕ್ತರ ಪ್ರಾಣ ಹೋಗಿ ದಕ್ಷಿಣ ಕಾಶಿಗೆ ಕಳಂಕ ಬರುವುದು ಬೇಡವೆಂದರೆ ಕ್ಷೇತ್ರದ ಶಾಸಕರು, ತಹಸೀಲ್ದಾರ್ ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳು ದೇವಾಲಯದ ಆಡಳಿತ ಮಂಡಳಿಯ ಕಿವಿ ಹಿಂಡಿ ಈ ಸಮಸ್ಯೆ ಪರಿಹರಿಸಬೇಕಿದೆ.

–ಚಂದ್ರಶೇಖರ್, ನಂಜನಗೂಡು.
(ವಾಟ್ಸಾಪ್)

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದ ಶಾಸಕ ಹರೀಶ್‌ಗೌಡ



ಮೈಸೂರು, ಆ.10(ಜಿಎ)–ಜನಸ್ಪಂದನ ಕಾರ್ಯಕ್ರಮ ನಡೆಸುವ ಮೂಲಕ ಶಾಸಕ ಕೆ.ಹರೀಶ್‌ಗೌಡ ಸಾರ್ವಜನಿಕರಿಂದ ಗುರುವಾರ ಅಹವಾಲು ಸ್ವೀಕರಿಸಿದರು.

ಮೈಸೂರಿನ ಹೆಬ್ಬಾಳಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಕನ್ವೆನ್ಷನ್ ಹಾಲ್ ಏರ್ಪಡಿಸಿದ್ದ ಜನ ಸ್ಪಂದನ ಕಾರ್ಯಕ್ರಮದಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ವಾರ್ಡ್ 1ರ ವ್ಯಾಪ್ತಿಗೆ ಸಂಬಂಧಿಸಿದಂತೆ ಸಮಸ್ಯೆಗಳನ್ನು ಆಲಿಸಿದರು.

ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲು ಸ್ವೀಕಾರಿಸಿ, ಸ್ಥಳದಲ್ಲಿ ಹಾಜರಿದ್ದ ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಪೋಲಿಸ್, ಕಂದಾಯ, ಆಹಾರ, ಚೆಸ್ಕಾಂ, ಕೈಗಾರಿಕೆ, ಸಾರಿಗೆ ಹಾಗೂ ಇನ್ನಿತರೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸ್ಥಳದಲ್ಲಿಯೇ ಸಮಸ್ಯೆಗಳನ್ನು ಇತ್ಯರ್ಥಪಡಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಅಂಗವಿಕಲರ ಮೈಸೂರು ಒಕ್ಕೂಟದವರ ಮನವಿಗೆ ಸ್ಪಂದಿಸಿ, ವಿಶೇಷ ಚೇತನರ ಸಮಸ್ಯೆಗಳ ಕುರಿತು ಸ್ಥಳದಲ್ಲಿ ಇದ್ದ ಜಿಲ್ಲಾ ಅಂಗವಿಕಲರ ಕಲ್ಯಾಣ ಅಧಿಕಾರಿಯವರಿಗೆ ನಿರ್ದೇಶನ ನೀಡಿ ಸಮಸ್ಯೆಯನ್ನು ಪರಿಹರಿಸಲು ಸೂಚಿಸಿದರು. ಈ ಸಂದರ್ಭದಲ್ಲಿ ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಮಾದು, ವಾರ್ಡ್ 1 ರ ಮುಖಂಡರಾದ ರಮೇಶ್, ಮಸಿಂಗಪ್ಪ, ಚಂದ್ರು, ಜಗದೀಶ್, ರಾಮಚಂದ್ರ ಮತ್ತು ತನುಜಾ ಮಹೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ವಿವಿಧ ಬೇಡಿಕೆ ಈಡೇರಿಸಲು ಒತ್ತಾಯಿಸಿ ಗ್ರಾಮೀಣ ಅಂಚೆ ನೌಕರರ ಪ್ರತಿಭಟನೆ



ಮೈಸೂರು,ಆ.10(ಪಿಎಂ)– ಏಳನೇ ವೇತನ ಆಯೋಗದ ವರದಿ ಸಂಪೂರ್ಣ ಜಾರಿಗೊಳಿಸಬೇಕು ಎಂಬುದೂ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಸಂಘದ (ಎಐಜಿಡಿಎಸ್‌ಯು) ಮೈಸೂರು ವಿಭಾಗೀಯ ಘಟಕದ ನೇತೃತ್ವದಲ್ಲಿ ಗ್ರಾಮೀಣ ಅಂಚೆ ನೌಕರರು ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಯಾದವಗಿರಿಯಲ್ಲಿರುವ ಮೈಸೂರು ವಿಭಾಗೀಯ ಅಂಚೆ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಗ್ರಾಮೀಣ ಅಂಚೆ ನೌಕರರಿಗೂ ಪಿಂಚಣಿ ಸೌಲಭ್ಯ ನೀಡಬೇಕು. ಅವೈಜ್ಞಾನಿಕ ಟಾರ್ಗೆಟ್ ನೀಡಿ ನೌಕರರ ಮೇಲೆ ಮಾನಸಿಕ ಒತ್ತಡ ಹೇರುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಎಲ್ಲಾ ಸವಲತ್ತುಗಳನ್ನು ಒದಗಿಸಬೇಕು. ಸೇವಾ ಹಿರಿತನದ ಆಧಾರದಲ್ಲಿ ವೇತನ ಹೆಚ್ಚಳ ಮಾಡಬೇಕು. ಅವೈಜ್ಞಾನಿಕವಾಗಿ ಗುರಿ ನಿಗದಿಗೊಳಿಸಿ, ಮೇಳಗಳನ್ನು ನಡೆಸುವ ವ್ಯವಸ್ಥೆ ಕೈಬಿಡಬೇಕು. ಗ್ರೂಪ್ ಇನ್ಸೂರೆನ್ಸ್ ಕವರೇಜ್ ಅನ್ನು 5 ಲಕ್ಷ ರೂ.ವರೆಗೆ ಹೆಚ್ಚಿಸಬೇಕು. ತುಟ್ಟಿಭತ್ಯೆಯನ್ನು 5 ಲಕ್ಷ ರೂ.ವರೆಗೆ ಹೆಚ್ಚಿಸಬೇಕು. 180 ದಿನಗಳ ರಜೆ ಉಳಿಸಿಕೊಳ್ಳಲು ಅವಕಾಶ ನೀಡಬೇಕು. ನಮಗೆ (ಗ್ರಾಮೀಣ ಅಂಚೆ ನೌಕರರು) ಮತ್ತು ನಮ್ಮ ಕುಟುಂಬ ಸದಸ್ಯರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

ಅಂಚೆ ಇಲಾಖೆಯ ಮೈಸೂರು ವಿಭಾಗದ ಹಿರಿಯ ಅಂಚೆ ಅಧೀಕ್ಷಕಿ ಅಂಜಲ್ ರಾಜ್ ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಅಂತ್ಯಗೊಳಿಸಿದರು. ಸಂಘದ ಮೈಸೂರು ವಿಭಾಗೀಯ ಅಧ್ಯಕ್ಷ ಸೋಮಶೇಖರ್, ಕಾರ್ಯದರ್ಶಿ ಟಿ.ರಾಣಿ, ನೌಕರರಾದ ಪ್ರಸನ್ನ, ವಾಸುದೇವ್, ಅನಿತಾ, ಗೌರಮ್ಮಣಿ, ಮಹದೇವ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಜೈನ್ ವಾಣಿಜ್ಯ ಸಂಸ್ಥೆ ವತಿಯಿಂದ ಟ್ರಕ್ ಚಾಲಕರಿಗೆ ಸುರಕ್ಷಾ ಕಿಟ್ ವಿತರಣೆ



ಮೈಸೂರು,ಆ.10(ಎಂಟಿವೈ)– ಅಂತಾರಾಷ್ಟ್ರೀಯ ಜೈನ್ ವಾಣಿಜ್ಯ ಸಂಸ್ಥೆಯ (ಜಿತೋ) ಮೈಸೂರು ಘಟಕದ ವತಿಯಿಂದ ಆ.13ರಂದು ಬೆಳಗ್ಗೆ 9ಕ್ಕೆ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ತ್ರಾಣ ಆರೋಗ್ಯ ಕಾರ್ಯಕ್ರಮದ ಅಂಗವಾಗಿ 1008 ಟ್ರಕ್ ಚಾಲಕರಿಗೆ ಸುರಕ್ಷಾ ಕಿಟ್ ನೀಡಲಾಗುವುದು ಎಂದು ಜಿತೋ ಸಂಸ್ಥೆಯ ಮಾಜಿ ಉಪಾಧ್ಯಕ್ಷ ಪ್ರಕಾಶ್ ದತ್ ತಿಳಿಸಿದ್ದಾರೆ.


ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತಾರಾಷ್ಟ್ರೀಯ ಜೈನ್ ವಾಣಿಜ್ಯ ಸಂಸ್ಥೆ ನಡೆಸಲು ಉದ್ದೇಶಿಸಿರುವ ಸುರಕ್ಷಾ ಕಿಟ್ ವಿತರಣಾ ಅಭಿಯಾನಕ್ಕೆ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಲಿದ್ದಾರೆ. ಜಿತೋ ಸಂಸ್ಥೆ ಜೈನ ಸಮಾಜದ ಏಕೈಕ ಸಂಸ್ಥೆಯಾಗಿದ್ದು, ಶಿಕ್ಷಣ, ಮಹಿಳಾ ಸಬಲೀಕರಣ, ವ್ಯಾಪಾರ ಕ್ಷೇತ್ರಗಳಲ್ಲದೆ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಜೈನ ಸಂತರು, ಋಷಿ ಮುನಿಗಳು, ಸಾಧ್ವಿಯರು ವಿಹಾರದ ಸಮಯದಲ್ಲಿ ರಸ್ತೆಗಳಲ್ಲಿ ನಡೆದು ಹೋಗುವಾಗ ಅನೇಕ ಬಾರಿ ವಾಹನಗಳು ಡಿಕ್ಕಿಯಾಗಿ ಹಲವರು ಪ್ರಾಣ ಕಳೆದುಕೊಂಡಿದ್ದಾರೆ. ಹೀಗಾಗಿ ವಿಶೇಷವಾಗಿ ಬೆಳಗಿನ ವೇಳೆ ಚಾಲನೆ ಮಾಡುವಾಗ ಎಚ್ಚರ ವಹಿಸುವಂತೆ ಕೋರಿ ಟ್ರಕ್ ಚಾಲಕರಿಗೆ ಸುರಕ್ಷಾ ಕಿಟ್ ನೀಡಲಾಗುತ್ತಿದೆ. ಇದರಲ್ಲಿ ದುರಸ್ತಿ ಸಾಧನ, ಚಾಕೊಲೇಟ್, ಸಿಹಿ ತಿನಿಸಿನ ಪ್ಯಾಕೆಟ್, ಟೀ ಶರ್ಟ್ ಸೇರಿದಂತೆ ಇನ್ನಿತರ ವಸ್ತುಗಳು ಇರುತ್ತವೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿತೋ ಸಂಸ್ಥೆಯ ಪದಾಧಿಕಾರಿಗಳಾದ ಕಾಂತಿಲಾಲ್ ಎಸ್. ಜೈನ್, ಗೌತಮ್ ಸಲೇಚ, ರಾಜನ್ ಬಾಯ್ ಬಾಗ್ಮಾರ್, ಸುಘವಿ ರಾಜೇಶ್ ಸಲೇಚ, ವಿನೋದ್ ಇದ್ದರು.

# ಆ.13ರಂದು ಮೈಗ್ರಾಪದಲ್ಲಿ ಚರ್ಚೆ

ಮೈಸೂರು, ಆ.10(ಎಸ್‌ಪಿಎನ್)– ಮೈಸೂರಿನ ಶ್ರೀಮಂತ ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಳ್ಳುವತ್ತ ನಾಗರಿಕರ ಪಾಲ್ಗೊಳ್ಳುವಿಕೆ ಮತ್ತು ಸ್ಥಿತಿ–ಗತಿಗಳ ಸಂರಕ್ಷಣೆಯಲ್ಲಿ ನಾಗರಿಕ ಹೊಣೆಗಾರಿಕೆ ಕುರಿತು ಚರ್ಚಿಸಲು ಯಾದವಗಿರಿಯ ವಿವೇಕಾನಂದ ರಸ್ತೆಯಲ್ಲಿರುವ ಮೈಸೂರು ಗ್ರಾಹಕರ ಪರಿಷತ್ ಕಚೇರಿ ಆವರಣದಲ್ಲಿ ಆ.13 (ಭಾನುವಾರ) ರಂದು ಸಂಜೆ 4 ಗಂಟೆಗೆ ಚರ್ಚೆ ಆಯೋಜಿಸಲಾಗಿದೆ.

ಮೈಸೂರು ಗ್ರಾಹಕರ ಪರಿಷತ್ತು ಹಾಗೂ ಮೈಸೂರು ವಿವಿ ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆಯ ಸಹಾಯಕ ನಿರ್ದೇಶಕರ ಜೊತೆಗೆ ಸಭೆ ಏರ್ಪಡಿಸಿದ್ದು, ಸರ್ಕಾರದ ಇತ್ತೀಚೆಗೆ ಜಾರಿಗೆ ತಂದಿರುವ ಉಚಿತ ಗ್ಯಾರಂಟಿ ಕೊಡುಗೆಗಳು ಮತ್ತು ಗ್ರಾಹಕರ ಮೇಲೆ ಉಂಟು ಮಾಡಬಹುದಾದ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳ ಕುರಿತು ಸಂವಾದ ನಡೆಯಲಿದೆ ಎಂದು ಮೈಗ್ರಾಪ ಕಚೇರಿ ಪ್ರಕಟಣೆ ತಿಳಿಸಿದೆ.

# ಗೀತಾ ಜಿಜ್ಞಾಸು ಪರೀಕ್ಷೆಯಲ್ಲಿ ಉನ್ನತ ಶ್ರೇಣಿ



ಮೈಸೂರು, ಆ.10– ಭಗವದ್ಗೀತೆ ಕಲಿಕೆಗೆ ಅಂತರ್ಜಾಲದ ಮೂಲಕ ಮಾರ್ಗದರ್ಶನ ನೀಡುತ್ತಿರುವ ಗೀತಾ ಪರಿವಾರ್ ಇತ್ತೀಚೆಗೆ ನಡೆಸಿದ ಗೀತಾ ಜಿಜ್ಞಾಸು ಪರೀಕ್ಷೆಯಲ್ಲಿ ಮೈಸೂರಿನ ಖ್ಯಾತ ಸಂಘಟಕರು ಹಾಗೂ ಕವಯಿತ್ರಿಯೂ ಆದ ಎ. ಹೇಮಗಂಗಾ ಅವರು ನೂರಕ್ಕೆ ನೂರು ಅಂಕಗಳನ್ನು ಪಡೆದು ಸರ್ವೋತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಶೋಭಾ ಬಿ. ಅವರು ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಯನಕೆರೆ ಆವರಣದ ಶ್ವಾನ ಆರೈಕೆ ಕೇಂದ್ರ ಕಾಮಗಾರಿ ಶೀಘ್ರ ಆರಂಭ?



ಮೈಸೂರು,ಆ.10(ಎಂಟಿವೈ)– ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಹೊರವಲಯದ ರಾಯನಕೆರೆ ಆವರಣದಲ್ಲಿ ನಿರ್ಮಿಸುತ್ತಿರುವ ಶ್ವಾನಗಳ ಆರೈಕೆ ಹಾಗೂ ಪುನರ್ವಸತಿ ಕೇಂದ್ರದ ಕಾಮಗಾರಿ ಅಂತಿಮ ಹಂತಕ್ಕೆ ತಲುಪಿದ್ದು, ಮಾಸಾಂತ್ಯಕ್ಕೆ ಕಾರ್ಯಾರಂಭ ಮಾಡುವ ನಿರೀಕ್ಷೆಯಿದೆ.

ಮೈಸೂರು–ಹೆಚ್.ಡಿ.ಕೋಟೆ ರಸ್ತೆಯ ರಾಯನಕೆರೆಯ ಎಸ್‌ಟಿಪಿ ಪ್ಲಾಂಟ್ ಬಳಿ ಪಾಲಿಕೆ ವತಿಯಿಂದ 2.50 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಶ್ವಾನಗಳ ಪುನರ್ವಸತಿ ಕೇಂದ್ರ ಹಾಗೂ ಬಿಡಾಡಿ ಹಂದಿಗಳ ಪುನರ್ವಸತಿ ಕೇಂದ್ರದ ಕಟ್ಟಡದ ಕಾಮಗಾರಿಯನ್ನು ಮೇಯರ್ ಶಿವಕುಮಾರ್ ಪಾಲಿಕೆ ಅಧಿಕಾರಿಗಳೊಂದಿಗೆ ಪರಿಶೀಲಿಸಿದರಲ್ಲದೆ, ಪುನರ್ವಸತಿ ಕೇಂದ್ರದ ಬಗ್ಗೆ ಮಾಹಿತಿ ಪಡೆದರು.

ಕಾಮಗಾರಿ ವೀಕ್ಷಣೆ ಬಳಿಕ ಮಾತನಾಡಿದ ಮೇಯರ್ ಶಿವಕುಮಾರ್, ಮೈಸೂರು ನಗರದಲ್ಲಿ ದಿನದಿಂದ ದಿನಕ್ಕೆ ಬೀದಿನಾಯಿ ಹಾಗೂ ಬಿಡಾಡಿ ಹಂದಿಗಳ ಹಾವಳಿ ಹೆಚ್ಚಾಗುತ್ತಿರುವ ದೂರು ಕೇಳಿ ಬರುತ್ತಿದೆ. ಅದನ್ನು ನಿಯಂತ್ರಿಸುವುದರೊಂದಿಗೆ ಬೀದಿನಾಯಿಗಳಿಗೆ ಸಂತಾನಶಕ್ತಿ ಹರಣ ಚಿಕಿತ್ಸೆ ಮಾಡಲು ಪುನರ್ವಸತಿ ಕೇಂದ್ರ ಸಹಕಾರಿಯಾಗಲಿದೆ. ಆರೈಕೆ ಕೇಂದ್ರವೂ ಇರುವುದು ಸಹಕಾರಿಯಾಗಿದೆ. ಸಾಮಾನ್ಯ ಆಸ್ಪತ್ರೆ ಮಾದರಿಯಲ್ಲೇ ಬೀದಿನಾಯಿಗಳ ಆರೈಕೆ ಮತ್ತು ಶಸ್ತ್ರಚಿಕಿತ್ಸೆಗೆ ಅಗತ್ಯವಿರುವ ಸೌಲಭ್ಯವುಳ್ಳ ಆರೈಕೆ ಕೇಂದ್ರದ ಕಾಮಗಾರಿ ಪೂರ್ಣಗೊಂಡ ಬಳಿಕ ಪಶುಪಾಲನಾ ಮತ್ತು ಪಶುವೈದ್ಯಕೀಯ ಇಲಾಖೆ ಅಧಿಕಾರಿಗಳಿಗೆ ಹಸ್ತಾಂತರ ಮಾಡಲಾಗುತ್ತದೆ ಎಂದರು.



ಸೆಪ್ಟೆಂಬರ್ ನಂತರ ಮೈಸೂರು ನಗರದಲ್ಲಿ ಇರುವ ಬೀದಿನಾಯಿಗಳ ಕಾರ್ಯಾಚರಣೆ ಮಾಡಿ ಈ ಕೇಂದ್ರಕ್ಕೆ ತಂದು ಆರೈಕೆ, ಶಸ್ತ್ರಚಿಕಿತ್ಸೆ ಮಾಡಿದ ಬಳಿಕ ಮತ್ತೆ ಅದೇ ಜಾಗಕ್ಕೆ ಬಿಡುವ ಕೆಲಸ ಆರಂಭವಾಗಲಿದೆ. ಬೀದಿನಾಯಿಗಳ ಕಾಟ ಹೆಚ್ಚಾಗುತ್ತಿರುವ ಬಗ್ಗೆ ಕೌನ್ಸಿಲ್ ಸಭೆಯಲ್ಲಿ ಪಕ್ಷಾತೀತವಾಗಿ ಸದಸ್ಯರು ವಿಷಯ ಪ್ರಸ್ತಾಪಿಸಿ, ಬೀದಿನಾಯಿಗಳ ಹಾವಳಿ ನಿಯಂತ್ರಿಸಬೇಕೆಂದು ಒತ್ತಾಯಿಸಿದ್ದರು. ಆರೈಕೆ ಕೇಂದ್ರವನ್ನು ತಕ್ಷಣವೇ ಸೇವೆಗೆ ಸಜ್ಜುಗೊಳಿಸುವಂತೆ ಒತ್ತಡ ಹೇರಿದ್ದರು. ಇದರಿಂದಾಗಿ ಮಾಸಾಂತ್ಯಕ್ಕೆ ಆರೈಕೆ ಕೇಂದ್ರ ಕಾರ್ಯಾರಂಭ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

**2.50 ಕೋಟಿ ರೂ. ವೆಚ್ಚದಲ್ಲಿ ಆರೈಕೆ ಕೇಂದ್ರ:** ಪಾಲಿಕೆಯ ಆರೋಗ್ಯಾಧಿಕಾರಿ ಡಾ.ಡಿ.ಜಿ.ನಾಗರಾಜು ಮಾತನಾಡಿ, ರಾಯನಕರೆ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಬಳಿ ಎರಡೂವರೆ ಎಕರೆ ಪ್ರದೇಶದಲ್ಲಿ 2.50 ಕೋಟಿ ರೂ.ವೆಚ್ಚದಲ್ಲಿ ಆರೈಕೆ ಕೇಂದ್ರ ನಿರ್ಮಾಣ ಮಾಡಲಾಗುತ್ತಿದೆ. ಇದರ ಕಾಮಗಾರಿ ಸಂಪೂರ್ಣಗೊಂಡ ಬಳಿಕ ಆಸ್ಪತ್ರೆಯ ರೂಪದಲ್ಲಿ ಕಾರ್ಯ ನಿರ್ವಹಿಸಲಿದೆ. ಅಡುಗೆ ಮನೆ, ಚಿಕಿತ್ಸಾ ಕೊಠಡಿ, ಒಪಿಡಿ, ಪ್ರಯೋಗಾಲಯ, ಶಸ್ತ್ರಚಿಕಿತ್ಸಾ ಕೊಠಡಿ, ಮೆಡಿಸಿನ್ ಕೊಠಡಿ, ನಾಯಿಮರಿಗಳ ಆರೈಕೆ ಕೊಠಡಿ, ರೋಗ ಬಂದ ನಾಯಿಗಳ ಐಸೋಲೇಷನ್ ಸೆಂಟರ್, ವೈದ್ಯರ ಕೊಠಡಿ, ವಿಶ್ರಾಂತಿ ಕೊಠಡಿ, ಸಿಬ್ಬಂದಿ ಕೊಠಡಿ ನಿರ್ಮಿಸಲಾಗುತ್ತಿದೆ ಎಂದರು.

ಈ ಕೇಂದ್ರದಲ್ಲಿ ಸಂಪೂರ್ಣವಾಗಿ ನಾಯಿಗಳನ್ನು ಇಟ್ಟುಕೊಂಡು ಸಾಕುವುದಿಲ್ಲ. ಬೀದಿನಾಯಿಗಳನ್ನು ಹಿಡಿದು ತಂದು ಸಂತಾನಶಕ್ತಿಹರಣ ಚಿಕಿತ್ಸೆ ಮಾಡಿ ವಾಪಸ್ ಬಿಡಲಾಗುತ್ತದೆ. ರೋಗಪೀಡಿತ ನಾಯಿಗಳಿಗೆ ಎರಡು–ಮೂರು ದಿನಗಳ ಕಾಲ ಚಿಕಿತ್ಸೆ ನೀಡಿ ಗುಣವಾದ ಬಳಿಕ ವಾಪಸ್ ಅದೇ ಜಾಗಕ್ಕೆ ಬಿಡಲಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪ ಮೇಯರ್ ಡಾ.ಜಿ.ರೂಪಾ, ಆಡಳಿತ ಪಕ್ಷದ ನಾಯಕ ಮ.ವಿ.ರಾಮಪ್ರಸಾದ್, ಸದಸ್ಯರಾದ ಬಿ.ವಿ.ಮಂಜುನಾಥ್, ಅಶ್ವಿನಿ ಅನಂತು, ಸಾತ್ವಿಕ್, ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು, ಸವಿತಾ, ಅಧೀಕ್ಷಕ ಅಭಿಯಂತರರಾದ ಕೆ.ಜೆ.ಸಿಂಧು, ವಲಯ ಸಹಾಯಕ ಆಯುಕ್ತ ಸತ್ಯಮೂರ್ತಿ, ಜೆಇ ರಂಜಿತ ಇನ್ನಿತರರು ಉಪಸ್ಥಿತರಿದ್ದರು.

## ಹಂದಿ ಸಾಕಾಣಿಕಾ ಕೇಂದ್ರ

ಹಂದಿಗಳನ್ನು ಸಾಕುವವರು ಪ್ರತ್ಯೇಕವಾಗಿ ಜಾಗ ಇಲ್ಲದೆ ಬೀದಿಯಲ್ಲಿ ಬಿಡುತ್ತಿರುವ ಕಾರಣ ಅಂತಹ ಹಂದಿಗಳನ್ನು ಹಿಡಿದು ಹಂದಿ ಸಾಕಾಣಿಕಾ ಕೇಂದ್ರದಲ್ಲಿ ಬಿಟ್ಟು ಸಾಕಲಾಗುತ್ತದೆ. ಪಾಲಿಕೆಯಿಂದಲೇ ಅದನ್ನು ಮಾರಾಟ ಮಾಡುವ ವ್ಯವಸ್ಥೆ ಇರುತ್ತದೆ. 2.37ಎಕರೆ ಪ್ರದೇಶದಲ್ಲಿ ನಿರ್ಮಿಸು ತ್ತಿರುವ ಈ ಕೇಂದ್ರಕ್ಕೆ 1 ಕೋಟಿ ರೂ. ಖರ್ಚಾಗಿದ್ದು, ಉಳಿದ ಕಾಮಗಾರಿ ಪೂರ್ಣಕ್ಕೆ ಹೆಚ್ಚುವರಿ ಒಂದು ಕೋಟಿ ರೂ. ಪ್ರಸ್ತಾಪಿಸಲಾಗಿದೆ. ಹೀಗಾಗಿ, ಮುಂದಿನ ಕೌನ್ಸಿಲ್ ಸಭೆಯಲ್ಲಿ ಒಪ್ಪಿಗೆ ನೀಡಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳುವುದಾದಗಿ ತಿಳಿಸಿದರು.

# ಮೇಟಗಳ್ಳಿ ಠಾಣೆಯ ಮಹಿಳಾ ಸಿಬ್ಬಂದಿ ರಾತ್ರಿ ಗಸ್ತು

## ಇನ್ಸ್‌ಪೆಕ್ಟರ್ ದಿವಾಕರ್ ಮಾರ್ಗದರ್ಶನ



ಮೈಸೂರು, ಆ.10(ಎಸ್‌ಬಿಡಿ)– ಮೈಸೂರಿನ ಮಹಿಳಾ ಪೊಲೀಸ್ ಸಿಬ್ಬಂದಿಯೂ ರಾತ್ರಿ ಗಸ್ತಿಗಿಳಿದಿದ್ದಾರೆ.

ನಗರದ ಮೇಟಗಳ್ಳಿ ಪೊಲೀಸ್ ಠಾಣೆಯ ಮಹಿಳಾ ಸಿಬ್ಬಂದಿಯನ್ನು ಬುಧವಾರದಿಂದ ರಾತ್ರಿ ಪಾಳಿಯ ಗಸ್ತಿಗೆ ನಿಯೋಜಿಸಲಾಗುತ್ತಿದೆ. ಈ ಠಾಣೆಯಲ್ಲಿ 10 ಮಹಿಳಾ ಸಿಬ್ಬಂದಿಗಳಿದ್ದು, ಎಸ್‌ಹೆಚ್‌ಓ, ಸೆಂಟ್ರಿ, ನೈಟ್ ರಿಸೆಪ್ಷನ್ ಡೆಸ್ಕ್ ಆಪರೇಟರ್ ಹಾಗೂ ಗಸ್ತು ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಠಾಣೆಯ ಇನ್ಸ್‌ಪೆಕ್ಟರ್ ದಿವಾಕರ್, ಮೊದಲ ದಿನ ಮಹಿಳಾ ಸಿಬ್ಬಂದಿಯನ್ನು ಗಸ್ತು ಕಾರ್ಯಕ್ಕೆ ನಿಯೋಜಿಸಿ, ಅಗತ್ಯ ಮಾರ್ಗದರ್ಶನ ನೀಡಿದರು. ಬಳಿಕ ತಮಗೆ ನಿಗದಿಪಡಿಸಿದ್ದ ವ್ಯಾಪ್ತಿಯಲ್ಲಿ ಗಸ್ತು ನಡೆಸಿ, ತಡರಾತ್ರಿಯಲ್ಲಿ ಓಡಾಡುತ್ತಿದ್ದ ವಾಹನಗಳ ತಡೆದು, ತಪಾಸಣೆ ಮಾಡಿದರು. ಎಲ್ಲಿಂದ ಬರುತ್ತಿದ್ದೀರಿ, ಎಲ್ಲಿಗೆ ಹೋಗುತ್ತಿದ್ದೀರಿ, ಗುರುತಿನ ಚೀಟಿ ತೋರಿಸಿ ಎಂದೆಲ್ಲಾ ವಿಚಾರಣೆ ನಡೆಸಿದರಲ್ಲದೆ, ಸುಖಾಸುಮ್ಮನೆ ಅಡ್ಡಾಡುವವರಿಗೆ ಎಚ್ಚರಿಕೆಯನ್ನೂ ನೀಡಿದರು. ಇನ್ನು ಮುಂದೆ ರಾತ್ರಿ 9ರಿಂದ ಮುಂಜಾನೆ 5 ಗಂಟೆವರೆಗೆ ಮಹಿಳಾ ಸಿಬ್ಬಂದಿಯೂ ಕಾರ್ಯ ನಿರ್ವಹಿಸಲಿದ್ದಾರೆ.

ಮಹಿಳಾ ಪೊಲೀಸ್ ಸಿಬ್ಬಂದಿ ರಾತ್ರಿ ಪಾಳಿಯಲ್ಲಿ ಕಾರ್ಯ ನಿರ್ವಹಿಸುವ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ರವಾನಿಸಬಹುದು. ಮಹಿಳಾ ಸಿಬ್ಬಂದಿ ರಸ್ತೆಯಲ್ಲಿ ಗಸ್ತು ಮಾಡುವುದರಿಂದ ಇತರೆ ಮಹಿಳೆಯರಲ್ಲಿ ಸುರಕ್ಷತೆ ಭಾವ ಹೆಚ್ಚಾಗಬಹುದು. ಖಾಸಗಿ ಕಂಪನಿಗಳಲ್ಲಿ ಪಾಳಿಯಲ್ಲಿ ಕಾರ್ಯ ನಿರ್ವಹಿಸುವ ಮಹಿಳಾ ಸಿಬ್ಬಂದಿ ತಡರಾತ್ರಿ ವಾಹನಗಳಲ್ಲಿ ಓಡಾಡುತ್ತಿರುತ್ತಾರೆ. ಅಂತಹವರಿಗೂ ಆತ್ಮಸ್ಥೈರ್ಯ ಇಮ್ಮಡಿಯಾಗಬಹುದು. ಜೊತೆಗೆ ಪುರುಷ ಸಿಬ್ಬಂದಿಯಂತೆ ಎಲ್ಲಾ ಕೆಲಸಗಳನ್ನೂ ನಾವೂ ಸಮರ್ಥವಾಗಿ ನಿರ್ವಹಿಸುತ್ತೇವೆ ಎನ್ನುವುದು ಮಹಿಳಾ ಸಿಬ್ಬಂದಿಗೂ ತಿಳಿಯುತ್ತದೆ ಎಂಬ ಉದ್ದೇಶದಿಂದ ಈ ಕ್ರಮ ವಹಿಸಲು ಮೇಲಧಿಕಾರಿಗಳು ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ.

ಸದ್ಯ ಮೇಟಗಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಹಿಳಾ ಸಿಬ್ಬಂದಿಯ ರಾತ್ರಿ ಗಸ್ತು ಆರಂಭವಾಗಿದ್ದು, ಮುಂದಿನ ದಿನಗಳಲ್ಲಿ ಸಿಬ್ಬಂದಿಯ ಸಂಖ್ಯೆ ಆಧರಿಸಿ ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುವುದು ಎನ್ನಲಾಗಿದೆ. ದೇವರಾಜ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಹಿಂದೆ ಮಹಿಳಾ ಸಿಬ್ಬಂದಿಯನ್ನು ಪ್ರಾಯೋಗಿಕವಾಗಿ ರಾತ್ರಿ ಗಸ್ತಿಗೆ ನಿಯೋಜಿಸಲಾಗಿತ್ತು.

## ಮೈಸೂರಲ್ಲಿ ವ್ಯಾಪಕಗೊಳ್ಳುತ್ತಿದೆ ಗಾಂಜಾ ಘಾಟು!

# ಮೂವರು ಪೆಡ್ಲರ್ ಬಂಧಿಸಿ 2.60 ಲಕ್ಷದ ಗಾಂಜಾ ವಶಕ್ಕೆ

ಮೈಸೂರು, ಆ.10(ಎಸ್‌ಬಿಡಿ)– ಒರಿಸ್ಸಾದಿಂದ ಗಾಂಜಾ ತಂದು ಮೈಸೂರಿನಲ್ಲಿ ಮಾರಾಟಕ್ಕೆ ಯತ್ನಿಸುತ್ತಿದ್ದ ಮೂವರು ಪೆಡ್ಲರ್(ವ್ಯಾಪಾರಿ)ಗಳನ್ನು ಇಲ್ಲಿನ ಸಿಸಿಬಿ ಪೊಲೀಸರು ಬಂಧಿಸಿ, ಸುಮಾರು 2.60 ಲಕ್ಷಮೌಲ್ಯದ ಗಾಂಜಾ ವಶಪಡಿಸಿಕೊಂಡಿದ್ದಾರೆ.

ನಗರದ ಉದಯಗಿರಿ, ಮಹದೇವಪುರ ಮುಖ್ಯರಸ್ತೆಯ ಎಸ್ಸಾರ್ ಪೆಟ್ರೋಲ್ ಬಂಕ್ ಪಕ್ಕದ ರಸ್ತೆಯಲ್ಲಿ ಆ.7ರಂದು ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದ ಮೂವರನ್ನು ಗಸ್ತಿನಲ್ಲಿದ್ದ ಸಿಸಿಬಿ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಮತ್ತೋರ್ವ ಪೆಡ್ಲರ್‌ಗಾಗಿ ಕಾಯುತ್ತಿದ್ದರು ಎಂದು ತಿಳಿದುಬಂದಿದೆ. ಅವರ ಬಳಿ ಇದ್ದ ಸುಮಾರು 2.60 ಲಕ್ಷ ರೂ. ಮೌಲ್ಯದ 6 ಕೆಜಿ 520 ಗ್ರಾಂ ಗಾಂಜಾ ವಶಪಡಿಸಿಕೊಂಡು, ಮೂವರನ್ನು ಬಂಧಿಸಿದ್ದಾರೆ.

ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಒರಿಸ್ಸಾದಿಂದ ಗಾಂಜಾ ತಂದಿದ್ದವರು ಮೈಸೂರಿನವರೋ ಅಥವಾ ಆ ರಾಜ್ಯದಿಂದಲೇ ಬಂದವರೊ ಎನ್ನುವುದು ತಿಳಿದುಬಂದಿಲ್ಲ. ಆದರೆ ಅಲ್ಲಿಂದ ತಂದಿದ್ದ ಗಾಂಜಾವನ್ನು ಮೈಸೂರಿನ ಪೆಡ್ಲರ್‌ಗೆ ಮಾರಾಟ ಮಾಡಲು ಕಾದಿದ್ದರು ಎಂದಷ್ಟೇ ಪೊಲೀಸರು ತಿಳಿಸಿದ್ದಾರೆ. ಸದ್ಯ ಆತನ ಬಂಧನಕ್ಕೂ ಪೊಲೀಸರು ಕಾರ್ಯೋನ್ಮುಖರಾಗಿದ್ದಾರೆ.

ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನ ಹಾಗೂ ಸಿಸಿಬಿ ಎಸಿಪಿ ಎಸ್.ಎನ್. ಸಂದೇಶ್‌ಕುಮಾರ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್ (ವರ್ಗಾವಣೆಗೊಂಡಿದ್ದಾರೆ), ಸಬ್‌ಇನ್ಸ್‌ಪೆಕ್ಟರ್‌ಗಳಾದ ಪ್ರತಿಭಾ ಜಂಗವಾಡ, ರಾಜುಕೋನಕೇರಿ, ಎಎಸ್‌ಐ ಆರ್.ರಾಜು, ಸಿಬ್ಬದಿ ಪುರುಷೋತ್ತಮ್, ರಾಮೇಗೌಡ, ಹೆಚ್.ಪಿ.ಮಧುಕುಮಾರ್, ಕೆ.ಪುಟ್ಟಮ್ಮ, ವಿ.ರಘು, ಅರುಣ್‌ಕುಮಾರ್ ಮತ್ತು ಕೆ.ಜಿ.ಶ್ರೀನಿವಾಸ್ ಭಾಗವಹಿಸಿದ್ದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ತಂಡದ ಕಾರ್ಯಾಚರಣೆಯನ್ನು ಶ್ಲಾಘಿಸಿದ್ದಾರೆ.

# ನಾಲ್ವಡಿ ಕೃಷ್ಣರಾಜ ಒಡೆಯರ್ ಎಲ್ಲರ ಮನದಲ್ಲಿ ಮನೆ ಮಾಡಿದ್ದಾರೆ




ಮೈಸೂರು, ಆ.10(ಸಿಎನ್)– ಮೈಸೂರಿನ ಸರ್ವತೋಮುಖ ಅಭಿವೃದ್ಧಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ ಅಪಾರ. ಮೈಸೂರು ಎಂದರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಎಂದೇ ಎಲ್ಲರ ಮನದಲ್ಲಿ ಅಚ್ಚಳಿಯದ ರೀತಿ ಗುರುತಿಸಲಾಗುತ್ತದೆ ಎಂದು ಎಸಿಎಫ್ ಎ.ಸಿ.ಲಕ್ಷ್ಮಣ್ ಅವರು ಸ್ಮರಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಕಾನ್‌ರಾರ್ಡ್ ಅಡೆನೌರ್ ಫೌಂಡೇಶನ್ (KAS) ಹಾಗೂ ಎಸ್‌ಡಿಜಿ (SDG) ವತಿಯಿಂದ 39ನೇ ಜೆಎಸ್‌ಡಿಪಿ ಕಾರ್ಯಕ್ರಮದ, 'ನೀರು, ಶಕ್ತಿ ಮತ್ತು ಹವಾಮಾನ ಕ್ರಿಯೆಯ ಎಸ್‌ಡಿಜಿಎಸ್ (ಸುಸ್ಥಿರ ಅಭಿವೃದ್ಧಿ ಗುರಿಗಳು) ಉತ್ತೇಜಿಸುವಲ್ಲಿ ನಾಗರಿಕ ಸಮಾಜದ ಪಾತ್ರ' ವಿಚಾರ ಕುರಿತು ಮಾತನಾಡಿದರು.

ಕರ್ನಾಟಕವನ್ನು ಅನೇಕ ರಾಜರು ಆಳಿದ್ದಾರೆ. ಕೆಲವರು ಅಭಿವೃದ್ಧಿ ವಿಚಾರದಲ್ಲಿ ಹಲವು ಕೊಡುಗೆಗಳನ್ನು ನೀಡುವ ಮೂಲಕ ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಅಂತ ರಾಜರ ಪೈಕಿ ಮೈಸೂರು ಸಂಸ್ಥಾನದ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸದಾ ನೆನಪಿಗೆ ಬರುತ್ತಾರೆ. ಅವರು ಮಾಡಿದ ಶೈಕ್ಷಣಿಕ, ಅಭಿವೃದ್ಧಿ ಕ್ರಾಂತಿ ಮರೆಯಲು ಸಾಧ್ಯವಿಲ್ಲ ಎಂದು ಸ್ಮರಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ 38 ವರ್ಷಗಳ ಸುದೀರ್ಘ ಆಳ್ವಿಕೆಯಲ್ಲಿ ಮೈಸೂರು ಸಂಪದ್ಭರಿತ ರಾಜ್ಯವಾಗಿತ್ತು. ಕೆಆರ್‌ಎಸ್ ಅಣೆಕಟ್ಟು ನಿರ್ಮಾಣದ ವೇಳೆ ಅವರಿಗೆ ಹಣಕಾಸಿನ ತೊಂದರೆಯಾಗಿ ಕೆಲ ದಿನಗಳ ಕಾಲ ಕಾಮಗಾರಿ ನಿಲ್ಲಿಸಿ, ಹೆಂಡತಿಯ ಆಭರಣಗಳನ್ನು ಗಿರಿವಿ ಇಟ್ಟು ಅಣೆಕಟ್ಟು ನಿರ್ಮಾಣ ಕಾರ್ಯ ಮುಂದುವರಿಸಿದ್ದರು. ಆ ಬದ್ಧತೆ, ಜನಪರ ಕಾಳಜಿಯಿಂದಲೇ ಮಹಾತ್ಮ ಗಾಂಧಿ ಅವರಿಂದ ರಾಜರ್ಷಿ ಎಂಬ ಬಿರುದು ಪಡೆದಿದ್ದರು ಎಂದು ತಿಳಿಸಿದರು.

ದೇಶದಲ್ಲಿ ಅರಣ್ಯ ಸಂಪತ್ತನ್ನು ನಾಶ ಮಾಡಿದರೆ ಮೊದಲು ಪರಿಣಾಮ ಬೀರುವುದೇ ನಮ್ಮ ಮೇಲೆ. ಇದಕ್ಕೆ ಉದಾಹರಣೆ ಭಾರತದ ಸ್ವಿಜ್ಜರ್‌ಲ್ಯಾಂಡ್ ಎಂದೇ ಕರೆಯಲ್ಪಡುವ ಕರ್ನಾಟಕದ ಕೂರ್ಗ್. ಕೊಡಗಿನಲ್ಲಿ ಇತ್ತೀಚೆಗೆ ಮರಗಳ ಸಂತತಿ ಕ್ಷೀಣಿಸುತ್ತಿದೆ. ಬೃಹತ್ ಕಟ್ಟಡಗಳು ತಲೆ ಎತ್ತುತ್ತಿವೆ. ಹಾಗಾಗಿ ಗುಡ್ಡ ಕುಸಿದು, ಪ್ರಕೃತಿ ವಿಕೋಪಗಳು ಹೆಚ್ಚಾಗಿ ಸಂಭವಿಸುತ್ತಿವೆ. ಇದರಿಂದಾಗಿ ಒಂದೇ ರಾತ್ರಿಯಲ್ಲಿ ಒಬ್ಬ ಧಣಿಕ ಕುಚೇಲನಾಗಿ ಗಂಜಿಕೇಂದ್ರಗಳಲ್ಲಿ ತಟ್ಟೆ ಹಿಡಿದು ನಿಲ್ಲುವ ದೃಶ್ಯಗಳನ್ನು ನೋಡಿದ್ದೇವೆ. ಪ್ರಕೃತಿಗೆ ಒಳ್ಳೆಯದನ್ನು ಬಯಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎಂದು ವಿಶ್ಲೇಷಿಸಿದರು. ಈ ಸಂದರ್ಭ ಕೆಎಎಸ್ ನಿರ್ದೇಶಕ ಪ್ರೊ.ಗಾಂಧಿದಾಸ್, ಪ್ರೊ.ಸಿದ್ದೇಗೌಡ, ಇಲಿಯಾಸ್, ಪಂಕಜ್, ಮದನ್, ಶಿವಕುಮಾರ್ ಮತ್ತಿತರರಿದ್ದರು.

## ಇಸ್ರೋಗೂ ಮೊದಲೇ ಚಂದ್ರನ ದಕ್ಷಿಣ ಧ್ರುವಕ್ಕಿಳಿಯಲು ರಷ್ಯಾ ಸಾಹಸ

ನವದೆಹಲಿ, ಆ.10– ಚಂದ್ರನ ದಕ್ಷಿಣ ಧ್ರುವದಲ್ಲಿ ಸಾಫ್ಟ್ ಲ್ಯಾಂಡಿಂಗ್ ಮಾಡಿದ ಮೊದಲ ದೇಶ ಎಂಬ ಹಿರಿಮೆ ಪಡೆಯುವ ಭಾರತದ ಯತ್ನಕ್ಕೆ ಇದೀಗ ರಷ್ಯಾ ಅಡ್ಡಗಾಲಾಗಿ ಬಂದಿದೆ. ಚಂದ್ರನ ಅಧ್ಯಯನಕ್ಕಾಗಿ ರಷ್ಯಾ ಲುನಾ–25 ನೌಕೆಯನ್ನು ಹಾರಿಬಿಟ್ಟಿದ್ದು, ಅದು ಇಸ್ರೋ ಹಾರಿಬಿಟ್ಟಿರುವ ಚಂದ್ರಯಾನ–3 ನೌಕೆಗಿಂತ ಮೊದಲೇ ದಕ್ಷಿಣ ಧ್ರುವ ಪ್ರದೇಶದಲ್ಲಿ ಇಳಿಯಲು ಸಜ್ಜಾಗಿದೆ.

ಚಂದ್ರಯಾನ–3 ಉಡಾವಣೆಗೊಂಡ 4 ವಾರಗಳ ತರುವಾಯ ಉಡಾವಣೆಗೊಂಡ ಲುನಾ–25 ಆ.22/23ರಂದು ಚಂದ್ರನ ದಕ್ಷಿಣ ಧ್ರುವದಲ್ಲಿ ರಷ್ಯಾ ಗುರುತಿಸಿರುವ 3 ಪ್ರದೇಶಗಳಲ್ಲಿ ಒಂದರಲ್ಲಿ ಇಳಿಯಲಿದೆ. ಈ ಯೋಜನೆ ಚಂದ್ರಯಾನ–3 ಲ್ಯಾಂಡರ್‌ಗೆ ಯಾವುದೇ ರೀತಿಯ ತಡೆಯನ್ನು ಉಂಟು ಮಾಡುವುದಿಲ್ಲ. 2 ದೇಶಗಳು ಇಳಿಯಲು ಬೇರೆ ಸ್ಥಳಗಳನ್ನು ನಿರ್ಧರಿಸಿವೆ ಎಂದು ರಷ್ಯಾದ ಬಾಹ್ಯಾಕಾಶ ಸಂಸ್ಥೆ ಹೇಳಿದೆ.

# ಗೋಕಾಕ್ ಚಳವಳಿಯಲ್ಲಿ ನಾವು ಭಾಗವಹಿಸಲು ಮಳಲಿ ಪ್ರೇರಣೆ

## ಪ್ರೊ.ಮಳಲಿ ವಸಂತಕುಮಾರ್ 78ನೇ ನೆನಪಿನ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರೊ.ಸಿಪಿಕೆ ಸ್ಮರಣೆ

ಮೈಸೂರು, ಆ.10(ಎಸ್‌ಬಿಡಿ)– ಗೋಕಾಕ್ ಚಳವಳಿಯಲ್ಲಿ ಭಾಗವಹಿಸಲು ಪ್ರೇರಣೆ ನೀಡಿದ್ದು ಪ್ರೊಮಳಲಿ ವಸಂತಕುಮಾರ್ ಎಂದು ಹಿರಿಯ ವಿದ್ವಾಂಸ ಪ್ರೊ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಸ್ಮರಿಸಿಕೊಂಡರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ವಿಜಯನಗರದ ಸಾಹಿತ್ಯ ಭವನದಲ್ಲಿ ಗುರುವಾರ ಆಯೋಜಿಸಿದ್ದ ದಿವಂಗತ ಪ್ರೊಮಳಲಿ ವಸಂತಕುಮಾರ್ ಅವರ 78ನೇ ನೆನಪಿನ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ದಿವಂಗತ ಮಳಲಿ ವಸಂತಕುಮಾರ್ ಅವರು ಬಹುಮುಖ ಮೇಧಾವಿಯಾಗಿದ್ದರು. ಸಾಹಿತಿಯಾಗಿ ಕಾದಂಬರಿ ಹೊರತಾಗಿ ಉಳಿದೆಲ್ಲಾ ಪ್ರಕಾರಗಳಲ್ಲೂ ಕೃಷಿ ಮಾಡಿದರು. ಸ್ಮರಣೀಯ ಸಣ್ಣ ಕತೆಗಳ ಸಂಕಲನವನ್ನೂ ನೀಡಿದ್ದಾರೆ. ಸಾಹಿತಿ ಮಾತ್ರವಲ್ಲ ಅವರೊಬ್ಬ ಅಪ್ರತಿಮ ಕನ್ನಡ ಹೋರಾಟಗಾರರಾಗಿದ್ದರು. ಮನುಕುಲದ ಮಾತುಗಾರ ಎಂಬ ಬಣ್ಣನೆಗೆ ಪಾತ್ರವಾಗಿದ್ದ ವಾಗ್ಮಿಯಾಗಿದ್ದರು. ಹೀಗೆ ಹಲವು ಆಯಾಮಗಳ ವ್ಯಕ್ತಿತ್ವ ಹೊಂದಿದ್ದ ಮಳಲಿ ವಸಂತಕುಮಾರ್, ಗೋಕಾಕ್ ಚಳವಳಿಯಲ್ಲಿ ಭಾಗಿಯಾಗಲು ನನಗೆ ಪ್ರೇರಣೆಯಾದರು. ಅವರು ಚಳವಳಿಯಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು ಎಂದು ತಿಳಿಸಿದರು.



ಮಳಲಿ ವಸಂತಕುಮಾರ್ ಮೊದಲಿಗೆ ನನ್ನ ಶಿಷ್ಯರು, ನಂತರ ಮಿತ್ರರಾದರು. ಮುಂದಿನ ಹಂತದಲ್ಲಿ ಅವರೇ ನನ್ನ ಗುರುಗಳಾಗಿ ಪರಿಣಮಿಸಿದ್ದು ವಿಚಿತ್ರ ಸತ್ಯ. ನನ್ನ ಮತ್ತು ಅವರ ಸ್ನೇಹ ಬಹಳ ಅಪೂರ್ವದ್ದಾಗಿತ್ತು. ನಮ್ಮ ಅನ್ಯೂನ್ಯತೆ ಒಡಲೆರಡು ಜೀವವೊಂದೇ ಎನ್ನುವಂತಿತ್ತು. ಸಂತೋಷದ ಹಿಂದೆ ನೋವಿನ ಎಳೆಯೂ ಇರುತ್ತದೆ. ನಮ್ಮ ಬದುಕೇ ನೋವು–ನಲಿವುಗಳ ಸಂಕೀರ್ಣ ಎಂದು ಬಾವುಕರಾಗಿ ನುಡಿದರು.

ದತ್ತಿ ಉಪನ್ಯಾಸ ಹಾಗೂ ಪ್ರಶಸ್ತಿ ಪ್ರದಾನ ಕಾರ್ಯಕ್ರಮಗಳು ನಾಡಿನ ಉದ್ದಗಲಕ್ಕೂ ನಡೆಯುತ್ತವೆ. ಇದು ಮುಖ್ಯ ಹಾಗೂ ಪ್ರಶಸ್ತ. ಮಳಲಿ ವಸಂತಕುಮಾರ್ ಅವರ 78ನೇ ನೆನಪಿನ ದತ್ತಿ ಪ್ರಶಸ್ತಿ ಸ್ವೀಕರಿಸಬೇಕಿದ್ದ ಹಿರಿಯ ಜಾನಪದ ವಿದ್ವಾಂಸರಾದ ಪ್ರೊಜಿ.ಎಸ್.ಭಟ್ಟರು ಕಾರಣಾಂತರದಿಂದ ಈ ಕಾರ್ಯಕ್ರಮದಲ್ಲಿ ಭಾಗಿಯಾಗಲು ಸಾಧ್ಯವಾಗಿಲ್ಲ. ಇವರೂ ನನ್ನ ಆತ್ಮೀಯ ವಿದ್ಯಾರ್ಥಿ. ಜೀವನ ಚರಿತ್ರೆ ರಚನೆಯಲ್ಲಿ ಅವರದು ಎತ್ತಿದ ಕೈ. ಯಕ್ಷಗಾನ ವಿದ್ವಾಂಸರಾಗಿಯೂ ಸಾಹಿತ್ಯಕ್ಷೇತ್ರಕ್ಕೆ ಅವಿಸ್ಮರಣೀಯ ಕೊಡುಗೆ ನೀಡಿದ್ದಾರೆ ಎಂದು ಬಣ್ಣಿಸಿದರು.

ಹಿರಿಯ ವಿದ್ವಾಂಸ ಪ್ರೊ.ಅನಂತರಾಮು ವಿಶೇಷ ಉಪನ್ಯಾಸ ನೀಡಿದರು. ಮೈಸೂರು ವಿವಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಸ್.ಎನ್.ಹೆಗ್ಡೆ, ಶ್ರೀಮತಿ ಶಾಂತ ಮಳಲಿ ವಸಂತ ಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಗೌರವ ಕೋಶಾಧ್ಯಕ್ಷ ಜಿ.ಪ್ರಕಾಶ್, ಗೌರವ ಕಾರ್ಯದರ್ಶಿಗಳಾದ ಲತಾ ಮೋಹನ್, ಚೀಲೂರು ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಕೆಂಪಣ್ಣ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಗುಮ್ಮನಹಳ್ಳಿ ಗ್ರಾಪಂ ಜೆಡಿಎಸ್ ತೆಕ್ಕೆಗೆ



ಚಿನಕುರಳಿ, ಆ.10– ರಾಗಿಮುದ್ದನಹಳ್ಳಿ ಗ್ರಾಮದಲ್ಲಿರುವ ಗುಮ್ಮನಹಳ್ಳಿ ಗ್ರಾಪಂನ ನೂತನ ಅಧ್ಯಕ್ಷ, ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಾದ ರಾಜೇಗೌಡ ಅಧ್ಯಕ್ಷರಾಗಿ, ಎ.ಬಿ.ಅನಿತಾ ರಮೇಶ್ ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದರು.

ತೆರವಾದ ಅಧ್ಯಕ್ಷ ಸ್ಥಾನಕ್ಕೆ ರಾಜೇಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ಎ.ಜಿ.ಅನಿತಾ ರಮೇಶ್ ಅವರು ನಾಮಪತ್ರ ಸಲ್ಲಿಸಿದರು. ಇವರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ಸದಸ್ಯರು ಸಹ ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಇವರಿಬ್ಬರೂ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಪುಟ್ಟಮಾಯಿಗೌಡ ಘೋಷಿಸಿದರು. ನೂತನ ಅಧ್ಯಕ್ಷ ರಾಜೇಗೌಡ, ಉಪಾಧ್ಯಕ್ಷೆ ಎ.ಜಿ.ಅನಿತಾ ರಮೇಶ್ ಅವರನ್ನು ಎಲ್ಲಾ ಮುಖಂಡರು, ಸದಸ್ಯರು ಅಭಿನಂದಿಸಿ ಪಟಾಕಿ ಸಿಡಿಸಿ ಸಿಹಿಹಂಚಿ ಸಂಭ್ರಮಿಸಿದರು.

ಸಂದರ್ಭದಲ್ಲಿ ಮುಖಂಡ ಎಂ.ಎನ್.ಶಿವಣ್ಣ, ಆರ್.ಎಂ.ಪುಟ್ಟರಾಜು, ನಾಗರಾಜು, ಜಗದೀಶ್, ಮಾದೇಗೌಡ, ನಾಗಣ್ಣ, ಧನಂಜಯ್, ಶಿವಕುಮಾರ್, ಆರ್.ಪಿ.ನಾಗಣ್ಣ, ಪರಮೇಶ್, ಗ್ರಾಪಂ ಸದಸ್ಯರಾದ ವರದರಾಜು, ಜಿ.ಎನ್.ಶ್ರೀನಿವಾಸ್, ಅಶ್ವಿನಿ.ಜಿ., ಸ್ವಾಮಿ, ಎಂ.ಕೆ.ಶಕುಂತಲ, ಜವರೇಗೌಡ, ಆರ್.ಜಯರಾಮ, ಲಕ್ಷ್ಮಮ್ಮ, ರಾಧ, ಲಕ್ಷ್ಮಮ್ಮ (ಮಂಜುಳ), ಕೆ.ಆರ್.ಚಂದ್ರ, ನಾಗಮ್ಮ, ಎಂ.ಎಸ್.ರಘು ಸೇರಿದಂತೆ ರಾಗಿಮುದ್ದನಹಳ್ಳಿ, ಗುಮ್ಮನಹಳ್ಳಿ, ಕುಂಬಾರಕೊಪ್ಪಲು ಗ್ರಾಮಸ್ಥರು ಮುಖಂಡರು ಹಾಜರಿದ್ದರು.

# ಸೇತುವೆ ನಿರ್ಮಾಣಕ್ಕೆ ತೋಡಿದ್ದ ಹಳ್ಳಕ್ಕೆ ಬಿದ್ದ ಕೆಎಸ್‌ಆರ್‌ಟಿಸಿ ಬಸ್

## ಮಳವಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿ 209ರಲ್ಲಿ ಘಟನೆ

ಮಳವಳ್ಳಿ, ಆ.10– ಚಾಲಕನ ನಿಯಂತ್ರಣ ತಪ್ಪಿದ ಕೆಎಸ್‌ಆರ್‌ಟಿಸಿ ಬಸ್ ಸೇತುವೆ ನಿರ್ಮಾಣಕ್ಕಾಗಿ ತೋಡಿದ್ದ ಹಳ್ಳಕ್ಕೆ ಇಳಿದ ಘಟನೆ ಮಳವಳ್ಳಿ ಪಟ್ಟಣದ ರಾಷ್ಟ್ರೀಯ ಹೆದ್ದಾರಿ 209ರಲ್ಲಿರುವ ಮಾರೇಹಳ್ಳಿ ಬಳಿ ನಡೆದಿದ್ದು, ಚಾಲಕ ಮಹದೇವಸ್ವಾಮಿ ಹಾಗೂ ನಿರ್ವಾಹಕ ಶಿವಕಾಳಯ್ಯ ಗಾಯಗೊಂಡಿದ್ದಾರೆ.



ಪಟ್ಟಣದ ಮದ್ದೂರು–ಕೊಳ್ಳೇಗಾಲ ರಸ್ತೆಯ ಮಾರೇಹಳ್ಳಿ ಬಳಿ ಸೇತುವೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದು, ಅದಕ್ಕಾಗಿ ರಸ್ತೆ ಬದಿ ಹಳ್ಳ ತೋಡಲಾಗಿದೆ. ಗುರುವಾರ ಬೆಳಗ್ಗೆ 12 ಪ್ರಯಾಣಿಕರೊಂದಿಗೆ ತಲಕಾಡಿನಿಂದ ಬೆಂಗಳೂರಿನತ್ತ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಸೇತುವೆ ನಿರ್ಮಾಣಕ್ಕೆ ತೆಗೆದಿದ್ದ ಹಳ್ಳಕ್ಕೆ ಇಳಿದಿದೆ. ಸೇತುವೆ ನಿರ್ಮಾಣಕ್ಕಾಗಿ ಹಳ್ಳದಲ್ಲಿ ಕಬ್ಬಿಣದ ರಾಡ್‌ಗಳನ್ನು ಅಳವಡಿಸಲಾಗಿದ್ದು, ಬಸ್ ಈ ರಾಡ್‌ಗಳ ನಡುವೆ ಸಿಲುಕಿ ನಿಂತಿದೆ. ಒಂದು ವೇಳೆ ಬಸ್ ನೇರವಾಗಿ ಹಳ್ಳಕ್ಕೆ ಇಳಿಯದೇ ಉರುಳಿ ಬಿದ್ದಿದ್ದರೆ ಸೇತುವೆ ನಿರ್ಮಾಣಕ್ಕಾಗಿ ಅಳವಡಿಸಿದ್ದ ಕಂಬಿಗಳು ಪ್ರಯಾಣಿಕರಿಗೆ ಚುಚ್ಚಿ ದೊಡ್ಡ ಅನಾಹುತವೇ ಸಂಭವಿಸುತ್ತಿತ್ತು. ಅದೃಷ್ಟವಶಾತ್ ಚಾಲಕ ಮತ್ತು ನಿರ್ವಾಹಕ ಸಣ್ಣ ಪುಟ್ಟ ಗಾಯಗಳೊಂದಿಗೆ ಪಾರಾಗಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಸೇತುವೆ ಕಾಮಗಾರಿಗೆ ದೊಡ್ಡ ಹಳ್ಳ ತೋಡಿದರೂ ಕೂಡ ಯಾವುದೇ ರೀತಿಯ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಂಡಿಲ್ಲ. ಇಲ್ಲಿ ವಾಹನ ಚಾಲಕರು ನಿಧಾನಗತಿಯಿಂದ ಚಾಲನೆ ಮಾಡಬೇಕೆಂಬುದರ ಬಗ್ಗೆ ಎಚ್ಚರಿಕಾ ಫಲಕಗಳನ್ನು ಅಳವಡಿಸಿಲ್ಲ. ಅಲ್ಲದೆ, ಹಳ್ಳಕ್ಕೆ ವಾಹನಗಳು ಇಳಿಯದಂತೆ ಬ್ಯಾರಿಕೇಟ್‌ಗಳನ್ನು ಕೂಡ ಅಳವಡಿಸಿಲ್ಲ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ. ಅಪಘಾತದ ವಿಷಯ ತಿಳಿಯುತ್ತಿದ್ದಂತೆಯೇ ಮಳವಳ್ಳಿ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಬಸ್ಸನ್ನು ಮೇಲಕ್ಕೆತ್ತಿ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

**ಸಚಿವ ಚಲುವರಾಯಸ್ವಾಮಿ ವಿರುದ್ಧ ರಾಜ್ಯಪಾಲರಿಗೆ ಪತ್ರ ಬರೆದ ಪ್ರಕರಣ**

# ಸಿಐಡಿಯಿಂದ ಮೊಬೈಲ್ ಸೀಝ್ ಮಾಡಿ ಕೃಷಿ ಅಧಿಕಾರಿಗಳ ವಿಚಾರಣೆ



ಮಂಡ್ಯ, ಆ.10– ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆಂದು ಕೃಷಿ ಅಧಿಕಾರಿಗಳು ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ ಎಂಬ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ವಿಚಾರಣೆ ಎರಡನೇ ದಿನ ಚುರುಕಿನಿಂದ ನಡೆದಿದೆ.

ನಗರದ ಕೃಷಿ ಇಲಾಖೆಯಲ್ಲಿ ಊಟಕ್ಕೂ ಸಮಯಾವಕಾಶ ಕೊಡದೇ ಅಧಿಕಾರಿಗಳ ಮೊಬೈಲ್ ಸೀಝ್ ಮಾಡಿ, ಸಿಐಡಿ ಐಜಿ ಪ್ರವೀಣ್ ಮಧುಕರ್ ಪವಾರ್ ನೇತೃತ್ವದಲ್ಲಿ ಮಂಡ್ಯ ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಕೃಷಿ ಇಲಾಖೆಯ ಜೆಡಿ, ಎಡಿ, ಡಿಡಿ ಸೇರಿದಂತೆ ಹಲವು ಅಧಿಕಾರಿಗಳ ವಿಚಾರಣೆ ನಡೆಯಿತು.

ಗುರುವಾರ ಸರಿಸುಮಾರು ನಾಲ್ಕು ಗಂಟೆಗಳ ಕಾಲ ಕೃಷಿ ಇಲಾಖೆಯ ಅಧಿಕಾರಿಗಳನ್ನು ವಿಚಾರಣೆಗೊಳಪಡಿಸಿದ ಸಿಐಡಿ, ಮಂಡ್ಯದ ಕೃಷಿ ಇಲಾಖೆಯ ಅಧಿಕಾರಿಗಳ ವಿಚಾರಣೆ ನಡೆಸಿ ಫೋನ್‌ಗಳನ್ನು ವಶಕ್ಕೆ ಪಡೆದಿದೆ. ಅಧಿಕಾರಿಗಳು ಮೊಬೈಲ್‌ನಲ್ಲಿ ಯಾರೊಂದಿಗೆ ಸಂಪರ್ಕದಲ್ಲಿ ಇದ್ದರು ಎಂಬ ಪತ್ತೆಗೆ ಸಿಐಡಿ ಮುಂದಾಗಿದ್ದು, ಮೊಬೈಲ್ ಫೋನ್ ಶೋಧನೆ ಬಳಿಕ ಅಧಿಕಾರಿಗಳಿಗೆ ಮತ್ತೆ ಫೋನ್ ವಾಪಸ್ ಕೊಡಲಿದ್ದಾರೆ ಎಂದು ತಿಳಿದು ಬಂದಿದೆ.

ಕೃಷಿ ಅಧಿಕಾರಿಗಳಿಗೆ ಊಟಕ್ಕೂ ವಿರಾಮ ಕೊಡದೇ ಸಿಐಡಿ ಅಧಿಕಾರಿಗಳ ಸುದೀರ್ಘ ವಿಚಾರಣೆಗೆ ಕೃಷಿ ಅಧಿಕಾರಿಗಳು ಸುಸ್ತಾದರು. ಮೊದಲು ಒಬ್ಬೊಬ್ಬ ಕೃಷಿ ಅಧಿಕಾರಿ ವಿಚಾರಣೆ ನಡೆಸಿ ಬಳಿಕ ಸಾಮೂಹಿಕವಾಗಿ ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿದರು.

**ಅಂಚೆ ಇಲಾಖೆ ಸಿಬ್ಬಂದಿಗಳ ವಿಚಾರಣೆ:** ಮಂಡ್ಯದ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಮೈಸೂರಿನ ಸರಸ್ವತಿಪುರಂ ಅಂಚೆ ಕಚೇರಿ ಸಿಬ್ಬಂದಿಯನ್ನು ಕರೆಸಿ ವಿಚಾರಣೆ ಬಳಿಕ ಪತ್ರವೊಂದಕ್ಕೆ ಸಹಿ ಹಾಕಿಸಿಕೊಂಡು ಕಳುಹಿಸಿದರು. ಈ ಸಂದರ್ಭದಲ್ಲಿ ಮಾಧ್ಯಮದವರ ಪ್ರಶ್ನೆ ಉತ್ತರಿಸದೆ ಕೃಷಿ ಇಲಾಖೆಯ ಕಚೇರಿಯಲ್ಲಿರುವ ಸಿಬ್ಬಂದಿ ಸ್ನೇಹಿತನೆಂದು ಸುಳ್ಳು ಹೇಳಿ ಅಲ್ಲಿಂದ ಕಾಲ್ಕಿತ್ತರು. ಅದಕ್ಕೂ ಮುನ್ನ ಪ್ರಶ್ನೆ ಮೇಲೆ ಪ್ರಶ್ನೆ ಕೇಳಿದ್ದಕ್ಕೆ ಅಂತಿಮವಾಗಿ ನಾನು ಅಂಚೆ ಸಿಬ್ಬಂದಿ ಎಂದು ಒಪ್ಪಿಕೊಂಡರು.

**ಸಿಐಡಿ ತನಿಖೆ ಸುಳಿಯಲ್ಲಿ ಸಚಿವ ಚಲುವರಾಯಸ್ವಾಮಿ:** ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಂತ್ರಿಯಾದ ಎರಡು ತಿಂಗಳಲ್ಲೇ ಎರಡೆರಡು ಸಿಐಡಿ ತನಿಖೆ ಎದುರಿಸುತ್ತಿದ್ದು, ಒಂದು ಪ್ರಕರಣದಲ್ಲಿ ಕ್ಲೀನ್ ಚೀಟ್ ಪಡೆದ ಬೆನ್ನಲ್ಲೇ ಮತ್ತೊಂದು ಪ್ರಕರಣ ವಿಚಾರಣೆ ನಡೆಯುತ್ತಿದೆ. ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಆತ್ಮಹತ್ಯೆ ಯತ್ನ ಕೇಸ್ ಬಳಿಕ ಲಂಚಕ್ಕಾಗಿ ಒತ್ತಡ ಪ್ರಕರಣದಲ್ಲಿ ಸಿಐಡಿ ತನಿಖೆ ನಡೆಸುತ್ತಿದ್ದು, ವರ್ಗಾವಣೆಯಿಂದ ಮನನೊಂದು ಆತ್ಮಹತ್ಯೆಗೆ ಯತ್ನಿಸಿದ್ದ ಚಾಲಕ ಜಗದೀಶ್ ಪ್ರಕರಣದಲ್ಲಿ ಚಲುವರಾಯಸ್ವಾಮಿ ಅವರು ರಾಜಕೀಯ ದ್ವೇಷಕ್ಕಾಗಿ ವರ್ಗಾವಣೆ ಮಾಡಿಸಿದ್ದರು ಆರೋಪ ಕೇಳಿ ಬಂದಿತ್ತು. ಆ ಪ್ರಕರಣದಲ್ಲಿ ಕೃಷಿ ಸಚಿವರಿಗೆ ಸಿಐಡಿ ಕ್ಲೀನ್‌ಚೀಟ್ ನೀಡಿತ್ತು. ಕ್ಲೀನ್ ಚಿಟ್ ಪಡೆದ 15 ದಿನಕ್ಕೆ ಲಂಚಕ್ಕಾಗಿ ಒತ್ತಡ ಪ್ರಕರಣವೂ ಸಿಐಡಿ ತನಿಖೆಗೆ ಕೊಟ್ಟಿದ್ದು, 7 ಮಂದಿ ಕೃಷಿ ಅಧಿಕಾರಿಗಳು ರಾಜ್ಯಪಾಲರಿಗೆ ದೂರು ನೀಡಿರುವ ಪ್ರಕರಣವೂ ಸಿಐಡಿ ತನಿಖೆಗೆ ಆದೇಶವಾಗಿತ್ತು. ಜಂಟಿ ನಿರ್ದೇಶಕರ ಮೂಲಕ ಲಂಚಕ್ಕಾಗಿ ಒತ್ತಡ ಹಾಕ್ತಿದ್ದಾರೆಂದು ಕೃಷಿ ಸಚಿವರ ವಿರುದ್ಧ ದೂರು ಕೇಳಿ ಬಂದಿತ್ತು.

## ಸಚಿವ ಚಲುವರಾಯಸ್ವಾಮಿ ವಿರುದ್ಧ 'PAYCS' ಅಭಿಯಾನ




ಮಂಡ್ಯ,ಆ.10– ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧ ಬಿಜೆಪಿ ಪಕ್ಷದ ಕಾರ್ಯಕರ್ತರು ಮಂಡ್ಯದಲ್ಲಿ 'ಪೇಸಿಎಸ್' ಅಭಿಯಾನ' ನಡೆಸಿದರು.

ನಗರದ ಜಯಚಾಮರಾಜೇಂದ್ರ ವೃತ್ತದಲ್ಲಿ ಸಚಿವ ಚಲುವರಾಯಸ್ವಾಮಿ ಭಾವಚಿತ್ರ ಇದ್ದ ಫ್ಲೆಕ್ಸ್‌ಗೆ ಪೇಸಿಎಸ್ ಅಭಿಯಾನದ ಪೋಸ್ಟರ್ ಅಂಟಿಸಿ ಸಚಿವರ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಹೆದ್ದಾರಿಯ ಮಧ್ಯ ಭಾಗದ ಕಲ್ಲುಗಳಿಗೂ ಪೋಸ್ಟರ್ ಅಂಟಿಸಿದ ಬಿಜೆಪಿ ಪಕ್ಷದ ಐವರು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು ಪೇಸಿಎಸ್ ಪೋಸ್ಟರ್‌ಗಳನ್ನು ಕಿತ್ತು ಹಾಕಿದರು.

ಬಿಜೆಪಿ ಕಾರ್ಯಕರ್ತರಾದ ಸಿ.ಟಿ.ಮಂಜುನಾಥ್, ಶಿವಕುಮಾರ್ ಆರಾಧ್ಯ, ಪ್ರಸನ್ನ, ಶಿವಕುಮಾರ್, ವಿನೋಬಾ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೃಷಿ ಇಲಾಖೆಯ ಅಧಿಕಾರಿಗಳ ಹೆಸರಿನಲ್ಲಿ ಸಚಿವ ಚಲುವರಾಯಸ್ವಾಮಿ ವಿರುದ್ಧ ರಾಜ್ಯಪಾಲರಿಗೆ ದೂರು ಸಲ್ಲಿಕೆಯಾಗಿತ್ತು. ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ರಾಜ್ಯಪಾಲರು ಪತ್ರವನ್ನು ಕಳುಹಿಸಿ ಕೊಟ್ಟಿದ್ದರು. ರಾಜ್ಯ ರಾಜಕಾರಣದಲ್ಲಿ ಸಂಚಲನ ಸೃಷ್ಟಿಸಿದ ಪ್ರಕರಣ ಕುರಿತು ಸಿಐಡಿ ಪ್ರಕರಣ ಚುರುಕುಗೊಂಡಿರುವ ಬೆನ್ನಲ್ಲೆ ಬಿಜೆಪಿ ಪಕ್ಷ ಸಚಿವರ ವಿರುದ್ಧ ಪೇಸಿಎಸ್ ಅಭಿಯಾನ ಆರಂಭಿಸಿದೆ. ವಿಧಾನಸಭೆ ಚುನಾವಣೆಗೂ ಮುನ್ನ ಬಿಜೆಪಿ ಸರ್ಕಾರದ ವಿರುದ್ಧ 40% ಕಮಿಷನ್ ಆರೋಪ ಮಾಡಿದ್ದ ಕಾಂಗ್ರೆಸ್ ಪೇಸಿಎಂ ಅಭಿಯಾನ ಮಾಡಿತ್ತು. ಇದೀಗ ಕಾಂಗ್ರೆಸ್ ಸರ್ಕಾರದ ಸಚಿವರ ವಿರುದ್ಧ ಇದೇ ಮಾದರಿಯ ಅಭಿಯಾನವನ್ನು ಬಿಜೆಪಿ ನಡೆಸಿದೆ.

# ನಾಗಮಂಗಲದಲ್ಲಿ ಕಾಂಗ್ರೆಸ್ ಪ್ರತಿಭಟನೆ



ನಾಗಮಂಗಲ, ಆ.10– ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧ ಅಧಿಕಾರಿಗಳ ಹೆಸರಿನಲ್ಲಿ ರಾಜ್ಯಪಾಲರಿಗೆ ಸುಳ್ಳು ದೂರು ನೀಡಿರುವವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಗುರುವಾರ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ, ಮಾಜಿ ಶಾಸಕ ಸುರೇಶ್‌ಗೌಡ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಪಟ್ಟಣದ ಟಿ.ಮರಿಯಪ್ಪ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸುವ ಮೂಲಕ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು. ಬಳಿಕ ಡಿವೈಎಸ್ಪಿ ಕಚೇರಿಗೆ ತೆರಳಿ ನಕಲಿ ಪತ್ರ ಸೃಷ್ಟಿಸಿದವರನ್ನು ಪತ್ತೆ ಹಚ್ಚಿ ಕಾನೂನು ಕ್ರಮಕ್ಕೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಎಂದು ಕೆಪಿಸಿಸಿ ಸದಸ್ಯ ಎಂ.ಪ್ರಸನ್ನ, ಒಕ್ಕಲಿಗರಲ್ಲಿ ಯಾರಾದರು ಪ್ರಬಲ ನಾಯಕನಾಗಿ ಹೊರಹೊಮ್ಮುತ್ತಿದ್ದಾನೆ ಎಂದರೆ ಅವನನ್ನು ಶತಾಯಗತಾಯ ಮಣಿಸುವುದೇ ದೇವೇಗೌಡರ ಮತ್ತು ಕುಮಾರಸ್ವಾಮಿಯವರ ಸಾಧನೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಒಕ್ಕಲಿಗರೆಂದರೆ ದೇವೇಗೌಡರ ಕುಟುಂಬ ಮಾತ್ರ ರಾಜ್ಯದಲ್ಲಿ ಅವರು ಮಾತ್ರವೇ ಒಕ್ಕಲಿಗ ಸಮುದಾಯದ ಹೊನ್ನ ಕಳಸ ಎಂಬ ಭ್ರಮೆಯಲ್ಲಿದ್ದಾರೆ. ದೇವೇಗೌಡರ ಕುಟುಂಬಕ್ಕೆ ಕೆಂಪೇಗೌಡರನ್ನಾಗಲಿ, ಕುವೆಂಪುರವರನ್ನಾಗಲಿ ಸ್ಮರಿಸುವ ಗುಣ ಇಲ್ಲ. ಮಂಡ್ಯ ಜಿಲ್ಲೆ ಕೈ ತಪ್ಪಿ ಹೋಗಿರುವ ಹತಾಶೆಯಲ್ಲಿ ಕುಮಾರಸ್ವಾಮಿ ಈ ರೀತಿ ಹೀನ ಕೆಲಸಕ್ಕೆ ಕೈ ಹಾಕಿರುವುದು ನಾಚಿಕೆಗೇಡಿನ ಸಂಗತಿ ಎಂದರು.


ಕಾಂಗ್ರೆಸ್ ಮುಖಂಡ ತಿಮ್ಮರಾಯಿಗೌಡ ಮಾತನಾಡಿ, ದೇವೇಗೌಡರ ಕುಟುಂಬ ಯಾರ ಬೆಳವಣಿಗೆಯನ್ನು ಸಹಿಸುವುದಿಲ್ಲ. ಪೂಜ್ಯ ಬಾಲಗಂಗಾಧರನಾಥ ಸ್ವಾಮೀಜಿಯವರಿಗೆ ತೊಂದರೆ ಕೊಟ್ಟ ಕುಟುಂಬ. ಸ್ವಾಮೀಜಿಯವರ ಡೈರಿ ಹೊರಬಂದರೆ ಇವರ ನಿಜ ಬಣ್ಣ ಬಯಲಾಗುತ್ತದೆ. ಮಂಡ್ಯ ಜಿಲ್ಲೆ ಜೆಡಿಎಸ್ ಭದ್ರಕೋಟೆ ಎಂದವರು ಮಂಡ್ಯ ಜಿಲ್ಲೆಯನ್ನು ಕೊಚ್ಚೆಗುಂಡಿಗಿಂತ ಕಡೆಯಾಗಿ ಮಾಡಿದ್ದಾರೆ. ಜನ ಬದಲಾವಣೆ ಬಯಸಿ ಕಾಂಗ್ರೆಸ್ ಗೆಲ್ಲಿಸಿದರೆ, ಅದನ್ನು ಸಹಿಸದ ಕುಮಾರಸ್ವಾಮಿ, ಚಲುವರಾಯಸ್ವಾಮಿಯವರ ಮೇಲೆ ಗೂಬೆ ಕೂರಿಸುವ ಒಂದೊಂದೆ ಯತ್ನ ಮಾಡುತ್ತಿದ್ದಾರೆ. ಇದಾವುದು ಫಲಿಸದು ಎಂದು ಅವರು ಹೇಳಿದರು.

ತೂಬಿನಕೆರೆ ಜವರೇಗೌಡ ಮಾತನಾಡಿ, ದೇವೇಗೌಡರ ಕುಟುಂಬಕ್ಕೆ ಪಕ್ಷ ಕಟ್ಟಿದವರು ನಂಬಿಕೆ ನಿಯತ್ತಿನಿಂದ ಇರುವವರು ಬೇಕಾಗಿಲ್ಲ. ಕತ್ತೆ ಕೆಲಸ ಮಾಡುವವರೇ ಅವರಿಗೆ ಬೇಕಿರುವವರು ಎಂದು ಕುಹಕವಾಡಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ.ರಾಜೇಶ್, ಮಾಜಿ ಅಧ್ಯಕ್ಷ ಹೆಚ್.ಟಿ.ಕೃಷ್ಣೇಗೌಡ, ತುರುಬನಹಳ್ಳಿ ರಾಜೇಗೌಡ, ತಟ್ಟಹಳ್ಳಿ ನರಸಿಂಹಮೂರ್ತಿ, ಗೀತಾ ದಾಸೇಗೌಡ ಸೇರಿದಂತೆ ಹಲವು ಮುಖಂಡರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ಕಾರಂಜಿಕೆರೆ ಬಳಿ ಸಂಚರಿಸುವ ವಾಹನ ಸವಾರರಿಗೆ ಅಪಾಯಕಾರಿಯಾಗಿರುವ ಮ್ಯಾನ್‌ಹೋಲ್‌ಗಳು!


ಮೈಸೂರು, ಆ.10(ಎಸ್‌ಬಿಡಿ)– ಮೈಸೂರಿನ ಕಾರಂಜಿ ಕೆರೆ ಬಳಿ ಸಂಚರಿಸುವವರಿಗೆ ಮ್ಯಾನ್‌ಹೋಲ್ ಸಮಸ್ಯೆ ಬಿಟ್ಟೂಬಿಡದಂತೆ ಕಾಡುತ್ತಿದೆ.



ಈ ಹಿಂದೆ ಮ್ಯಾನ್‌ಹೋಲ್ ಕುಸಿದು ಪರಿತಪಿಸಿದ್ದ ಸಾರ್ವಜನಿಕರಿಗೆ ಇದೀಗ ದುರಸ್ತಿಪಡಿಸಿರುವ ಮತ್ತೊಂದು ಮ್ಯಾನ್ ಹೋಲ್‌ನಿಂದ ಸಮಸ್ಯೆ ಎದುರಾಗಿದೆ. ಇಲ್ಲಿನ ತಂಡಿ ಸಡಕ್ ರಸ್ತೆ ಬಳಿ ದುರಸ್ತಿಪಡಿಸಿರುವ ಮ್ಯಾನ್‌ಹೋಲ್ ರಕ್ಷಣೆಗೆಂದು ಒಂದು ಬದಿಯಲ್ಲಿ ಥೇಟ್ ರಸ್ತೆ ಬಣ್ಣದ ಸಿಮೆಂಟ್ ರಿಂಗ್ ಮತ್ತೊಂದು ಕಡೆ ಸ್ಲಾಬ್ ಇಟ್ಟಿದ್ದಾರೆ. ಅಲ್ಲದೆ ಜಲ್ಲಿಕಲ್ಲುಗಳು ರಸ್ತೆಯಲ್ಲಿ ಹರಡಿವೆ. ಕಾಮಗಾರಿ ನಡೆಸಿದವರ ಬೇಜವಾಬ್ದಾರಿಯಿಂದ ಸಾರ್ವಜನಿಕರಿಗೆ ಸಂಚಕಾರ ಉಂಟಾಗಿದೆ. ಗುರುವಾರ ಸಂಜೆ ಮಳೆಯಾಗು ತ್ತಿದ್ದ ವೇಳೆ ಇಲ್ಲಿ ಅಪಘಾತ ಸಂಭವಿಸಿದೆ. ಸಿಮೆಂಟ್ ರಿಂಗ್ ಹಾಗೂ ಸ್ಲ್ಯಾಬ್‌ಗಳು ರಸ್ತೆ ಬಣ್ಣವನ್ನೇ ಹೋಲುವುದರಿಂದ ತಕ್ಷಣಕ್ಕೆ ಗುರುತಿಸಲಾಗದೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದು, ಸವಾರ ನೆಲಕ್ಕುರುಳಿದ್ದಾನೆ. ಹೇಗೋ ಸಾವರಿಸಿಕೊಂಡು ಹೋದ ಬಳಿಕ ಜೀಪ್ ಚಾಲಕನೂ ಸಿಮೆಂಟ್ ರಿಂಗ್‌ಗೆ ಡಿಕ್ಕಿ ಹೊಡೆಸಿ, ನಂತರ ಪಕ್ಕದಲ್ಲಿ ಮುಂದಕ್ಕೆ ಸಾಗಿದ್ದಾರೆ.

ದುರಸ್ತಿಯಾಗಿರುವ ಮ್ಯಾನ್‌ಹೋಲ್ ಕ್ಯೂರಿಂಗ್ ಆಗುವವವರೆಗೆ ಅದರ ಮೇಲೆ ವಾಹನಗಳು ಹಾದು ಹೋಗದಂತೆ ನೋಡಿಕೊಳ್ಳಬೇಕು. ಹಾಗಾಗಿ ಎರಡೂ ಬದಿಯಲ್ಲಿ ಸಿಮೆಂಟ್ ರಿಂಗ್‌ಗಳನ್ನು ಇಡಲಾಗಿದೆ. ಆದರೆ ವಾಹನ ಸಂಚಾರ ಹೆಚ್ಚಿರುವ ಈ ರಸ್ತೆಯಲ್ಲಿ ತಕ್ಷಣಕ್ಕೆ ಮ್ಯಾನ್‌ಹೋಲ್ ಪಕ್ಕ ಇಟ್ಟಿರುವ ಸಿಮೆಂಟ್ ರಿಂಗ್‌ಗಳು ಕಾಣಿಸುವುದಿಲ್ಲ. ಮಳೆ ಬರುವಾಗಲಂತೂ ಮತ್ತಷ್ಟು ಅಪಾಯ ಕಾರಿ. ಭಾರೀ ವಾಹನಗಳ ಹಿಂದೆ ಬರುವ ದ್ವಿಚಕ್ರ ವಾಹನ ಸವಾರರು ಇಲ್ಲಿ ಅಪಘಾತಕ್ಕೀಡಾಗುವುದು ನಿಶ್ಚಿತ. ಪಾಲಿಕೆ ಅಧಿಕಾರಿಗಳು ಮ್ಯಾನ್ ಹೋಲ್ ಸುರಕ್ಷತೆ ಜೊತೆಗೆ ವಾಹನ ಸವಾರರಿಗೆ ತೊಂದರೆಯಾಗದ ರೀತಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕಿತ್ತು. ಪ್ರತಿಫಲಿಸುವ ಬ್ಯಾರಿಕೇಡ್ ಅಳವಡಿಸಿ, ವಾಹನ ಸವಾರರಿಗೆ ಎಚ್ಚರಿಕೆ ನೀಡಬಹುದಿತ್ತು ಈ ಬಗ್ಗೆ ಮೇಯರ್ ಶಿವಕುಮಾರ್ ಅವರ ಗಮನಕ್ಕೆ ತಂದಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸೂಕ್ತ ಕ್ರಮಕ್ಕೆ ಸೂಚಿಸುವುದಾಗಿ ಭರವಸೆ ನೀಡಿದ್ದಾರೆ.

**2 ಬಾರಿ ನಿರ್ಮಾಣ:** ಬಂಡ್ ರಸ್ತೆಯಲ್ಲಿ ಮ್ಯಾನ್‌ಹೋಲ್ ಕುಸಿದು ಹೊಂಡವಾಗಿ, ಜೀವಹಾನಿಗೆ ಕಾದಿದ್ದರೂ ಯಾರೂ ತಲೆ ಕೆಡಿಸಿಕೊಂಡಿರಲಿಲ್ಲ. 'ಮೈಸೂರು ಮಿತ್ರ'ನ ಜೂ.29ರ ಸಂಚಿಕೆಯಲ್ಲಿ ಇಲ್ಲಿನ ಅಪಾಯದ ಬಗ್ಗೆ ಸಚಿತ್ರ ವರದಿ ಪ್ರಕಟವಾದ ಬಳಿಕ ಮ್ಯಾನ್‌ಹೋಲ್ ದುರಸ್ತಿಯಾಗಿತ್ತು. ಆದರೆ ಕೇವಲ 19 ದಿನಗಳಲ್ಲೇ ಕಾಮಗಾರಿ ಬಂಡವಾಳ ಬಯಲಾಗಿತ್ತು. ಮತ್ತೆ ಮ್ಯಾನ್ ಹೋಲ್ ಕುಸಿದು ಮತ್ತೆ ಅಪಾಯದ ಸ್ಥಿತಿ ನಿರ್ಮಾಣವಾಗಿತ್ತು. ಈ ಬಗ್ಗೆ ಮತ್ತೆ ವರದಿ ಪ್ರಕಟಿಸಿದ್ದರ ಹಿನ್ನೆಲೆಯಲ್ಲಿ ಸ್ವತಃ ಮೇಯರ್ ಶಿವಕುಮಾರ್ ಅವರು ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ, ಗುಣಮಟ್ಟದ ಕಾಮಗಾರಿ ನಡೆಸಿ, ಸೂಚನೆ ನೀಡಿದ್ದರಿಂದ ಮ್ಯಾನ್‌ಹೋಲ್ ಪುನರ್ ನಿರ್ಮಾಣ ಮಾಡಿದ್ದು ಇಲ್ಲಿ ಗಮನಾರ್ಹ.



## ಕೆಆರ್‌ಎಸ್ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 124.80 ಅಡಿ |
| ಗುರುವಾರ | 113.00 ಅಡಿ |
| ಒಳಹರಿವು | 4938 ಕ್ಯುಸೆಕ್ |
| ಹೊರಹರಿವು | 8053 ಕ್ಯುಸೆಕ್ |

## ಕಬಿನಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2284.00 ಅಡಿ |
| ಗುರುವಾರ | 2281.99 ಅಡಿ |
| ಒಳ ಹರಿವು | 4688 ಕ್ಯುಸೆಕ್ |
| ಹೊರ ಹರಿವು | 5857 ಕ್ಯುಸೆಕ್ |

## ಹಾರಂಗಿ ನೀರಿನ ಮಟ್ಟ



| | |
|---|---|
| ಗರಿಷ್ಠ ಮಟ್ಟ | 2859 ಅಡಿ |
| ಗುರುವಾರ | 2858.54 ಅಡಿ |
| ಒಳ ಹರಿವು | 1255 ಕ್ಯುಸೆಕ್ |
| ಹೊರ ಹರಿವು | 1891 ಕ್ಯುಸೆಕ್ |



## ಪಡಿತರ ಚೀಟಿ ತಿದ್ದುಪಡಿಗೆ ಅನುಮೋದನೆ

ಬೆಂಗಳೂರು, ಆ.10– ಪಡಿತರ ಚೀಟಿಯಲ್ಲಿನ ಫಲಾನುಭವಿಗಳ ಮಾಹಿತಿ ತಿದ್ದುಪಡಿ ಹಾಗೂ ಹೆಚ್ಚುವರಿ ಫಲಾನುಭವಿಗಳ ಹೆಸರನ್ನು ಸೇರ್ಪಡೆ ಮಾಡಲು ಸರ್ಕಾರ ಅನುಮೋದನೆ ನೀಡಿದೆ. ಆದರೆ ಯಾವುದೇ ಹೊಸ ಪಡಿತರ ಚೀಟಿಯನ್ನು ನೀಡಬಾರದು ಎಂದು ಆದೇಶದಲ್ಲಿ ತಿಳಿಸಲಾಗಿದೆ.





ಇತ್ತೀಚೆಗೆ ವರ್ಗಾವಣೆಯಾದ ಮೈಸೂರಿನ ಹೆಬ್ಬಾಳು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪ್ರಸಾದ್ ಅವರನ್ನು ಮಂಚೇಗೌಡನಕೊಪ್ಪಲು ಅಸೋಸಿಯೇಷನ್ ಅಧ್ಯಕ್ಷರಾದ ಡಿ. ರಾಮಚಂದ್ರು, ಪ್ರಧಾನ ಕಾರ್ಯದರ್ಶಿ ರವಿ, ಮುಖಂಡರಾದ ಕೃಷ್ಣ ಇತರರು ಗುರುವಾರ ಆತ್ಮೀಯವಾಗಿ ಅಭಿನಂದಿಸಿದರು.

# ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಸರಣಿ ಸಭೆ



ಮೈಸೂರು, ಆ.10(ಸಿಎನ್)–ಕೆಪಿಸಿಸಿ ಸೂಚನೆ ಮೇರೆಗೆ ಹಲವು ತಿಂಗಳುಗಳ ಬಳಿಕ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ಸರಣಿ ಕಾರ್ಯಕಾರಿಣಿ ಸಭೆಗಳನ್ನು ಆಯೋಜಿಸಲಾಯಿತು.

ಕಾಂಗ್ರೆಸ್ ಜಿಲ್ಲಾ ಘಟಕಗಳು ಹಾಗೂ ಜಿಲ್ಲೆಯ ಎನ್‌ಎಸ್‌ಯುಐ (ಭಾರತೀಯ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ) ಸಂಘಟನೆ, ಪಕ್ಷದಲ್ಲಿ ಸಕ್ರಿಯವಲ್ಲದ ಅಧ್ಯಕ್ಷ, ಉಪಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳಿಗೆ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಎಚ್ಚರಿಕೆ ನೀಡಿದರಲ್ಲದೇ, ಪಕ್ಷ ಸಂಘಟನೆ ಹಾಗೂ ಮುಂದಿನ ಲೋಕಸಭಾ ಚುನಾವಣೆಗೆ ಸಜ್ಜಾಗುವಂತೆ ತಾಕೀತು ಮಾಡಿದರು. ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಗುರುವಾರ ಮೂರನೇ ಕಾರ್ಯಕಾರಣಿ ಹಾಗೂ ಸರಣಿ ಸಭೆಗಳನ್ನು ಆಯೋಜಿಸುವ ಮೂಲಕ ಜಿಲ್ಲೆಯಲ್ಲಿ ಮತ್ತಷ್ಟು ಪಕ್ಷ ಬಲವರ್ಧನೆ ಕುರಿತು ಚರ್ಚೆ ನಡೆಸಲಾ ಯಿತು. ಸಭೆಯಲ್ಲಿ ಕಾಂಗ್ರೆಸ್ ಘಟಕಗಳಾದ ಜಿಲ್ಲಾ ಹಿಂದುಳಿದ ವರ್ಗ, ಜಿಲ್ಲಾ ಮಹಿಳಾ, ಜಿಲ್ಲಾ ನಗರ, ಎನ್‌ಎಸ್‌ಯುಐ ಮೈವಿವಿ ಹಾಗೂ ವಿವಿಧ ಘಟಕಗಳು ಭಾಗಿಯಾಗಿದ್ದವು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, 2023ರ ವಿಧಾನಸಭಾ ಚುನಾವಣೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಕಾಂಗ್ರೆಸ್ ಪಕ್ಷಕ್ಕೆ ಅಭೂತಪೂರ್ವ ಗೆಲುವು ಸಾಧಿಸಲು ಮಹಿಳಾ ಕಾರ್ಯಕರ್ತರು ಬಹಳ ಶ್ರಮ ವಹಿಸಿದ್ದು, ಅವರಿಗೆ ಜಿಲ್ಲಾ ಕಾಂಗ್ರೆಸ್‌ನ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ. ಮಹಿಳೆಯರಿಗೆ ಹಲವಾರು ವೈಯಕ್ತಿಕ ಸಮಸ್ಯೆಗಳು ಇವೆ. ಇದರ ನಡುವೆಯೂ ಪಕ್ಷಕ್ಕೆ ಕೆಲಸ ಮಾಡಿರುವುದು ನಮ್ಮ ಕಾಂಗ್ರೆಸ್ ಮಹಿಳಾ ಸಂಘಟನೆಯನ್ನು ಪ್ರದರ್ಶಿಸುತ್ತದೆ ಎಂದು ಹೇಳಿದರು.

ಮುಂಬರುವ ಪಂಚಾಯತಿ ಹಾಗೂ ಲೋಕಸಭೆ ಚುನಾವಣೆಯಲ್ಲಿ ಮಹಿಳೆಯರ ಪಾತ್ರ ಹೆಚ್ಚಾಗಿದ್ದು ಮಹಿಳಾ ಕಾಂಗ್ರೆಸ್ ಮತ್ತಷ್ಟು ಬಲಿಷ್ಠವಾಗಬೇಕು. ಸ್ವತಂತ್ರ ಭಾರತದಲ್ಲಿ ಕಾಂಗ್ರೆಸ್ ಪಕ್ಷವನ್ನು ಹೊರತುಪಡಿಸಿ ಮತ್ಯಾವ ಪಕ್ಷಗಳು ಕೂಡ ಮಹಿಳೆಯರಿಗೆ ಹೆಚ್ಚಾಗಿ ಪ್ರಾಮುಖ್ಯತೆ ನೀಡಿಲ್ಲ. ಇಂದಿರಾ ಗಾಂಧಿಯವರನ್ನು ಪ್ರಥಮ ಮಹಿಳಾ ಪ್ರಧಾನಮಂತ್ರಿಯಾಗಿ ಮಾಡಿರುವುದು ಕಾಂಗ್ರೆಸ್ ಪಕ್ಷ ಎಂದು ಇತಿಹಾಸವನ್ನು ಸ್ಮರಿಸಿದರು.

ಇದೇ ದಿನ ಜಿಲ್ಲಾ ಒಬಿಸಿ ಘಟಕ, ಜಿಲ್ಲಾ ಮೈನಾರಿಟಿ ವಿಭಾಗ, ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್, ಜಿಲ್ಲಾ ರೈತ ಘಟಕ ಹೀಗೆ ಸರಣಿ ಸಭೆಯನ್ನು ಬೆಳಗ್ಗೆ 10 ರಿಂದ ಸಂಜೆ 7ರ ತನಕ ನಿರಂತರವಾಗಿ ನಡೆಸಿ, ಮುಂಬರುವ ಚುನಾವಣೆಗೆ ಪೂರ್ವ ತಯಾರಿ ಬಗ್ಗೆ ಚರ್ಚಿಸಲಾಯಿತು.

ಬೆಳಗ್ಗೆ ಆರಂಭವಾಗಿ ಸಂಜೆ ಮುಕ್ತಾಯವಾದ ಸಭೆಗಳಲ್ಲಿ ಎಲ್ಲಾ ಡಿಸಿಸಿ ಘಟಕಗಳಿಗೂ ಬರುವಂತೆ ಸೂಚನೆ ನೀಡಿದ್ದರೂ, ಗೈರಾಗಿದ್ದವರ ವಿರುದ್ಧ ಡಿಸಿಸಿ ಅಧ್ಯಕ್ಷರು ಪ್ರಶ್ನೆಗಳ ಸುರಿಮಳೆಗೈದರು. ಇದಕ್ಕೆ ಸ್ಪಷ್ಟನೆ ನೀಡಿದ ಆಯಾ ಘಟಕಗಳ ಅಧ್ಯಕ್ಷರು, ರಜೆ ಇಲ್ಲ, ಕಾಲೇಜು, ಪರೀಕ್ಷೆ ಎಂದು ಹೇಳಿದಾಗ, ಸಬೂಬು ಹೇಳಬೇಡಿ ಎಂದು ಮತ್ತಷ್ಟು ರೇಗಿದ ಘಟನೆ ನಡೆಯಿತು.

ಸಭೆಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ಮೈಸೂರು ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ರಾಜ್ಯ ಮಹಿಳಾ ಕಾಂಗ್ರೆಸ್ ಪದಾಧಿಕಾರಿಗಳಾದ ಪುಷ್ಪವಲ್ಲಿ, ಸುಧಾ ಮಹದೇವಯ್ಯ, ಲೇಖ ವೆಂಕಟೇಶ್, ಶಾರದಾ ಸಂಪತ್ತು, ಬೃಂದಾ ಕೃಷ್ಣೇಗೌಡ ಹಾಗೂ ಜಿಲ್ಲೆಯ ಮಹಿಳಾ ಕಾಂಗ್ರೆಸ್‌ನ 8 ವಿಧಾನಸಭಾ ಕ್ಷೇತ್ರದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಇತರೆ ಪ್ರಮುಖ ಮಹಿಳಾ ಪದಾಧಿಕಾರಿಗಳು ಸೇರಿದಂತೆ ಮತ್ತಿತರರಿದ್ದರು.

ಒಂದನೇ ಪುಟದಿಂದ

## ಅಧಿಕಾರಿಗಳಿಗೆ ಕಡ್ಡಾಯ ನಿವೃತ್ತಿ

ನೀಡಲಾಗಿದೆ ಎಂದು ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ. ಇನ್ನು ಲೋಕಾಯುಕ್ತರ ಬಲೆಗೆ ಬಿದ್ದಿದ್ದ ರಾಮನಗರ ಜಿಲ್ಲಾ ಆಸ್ಪತ್ರೆ ಸ್ತ್ರೀ ರೋಗ ತಜ್ಞೆ ಡಾ.ಉಷಾ ಕದರಮಂಡಲಗಿ, ಇಂದಿರಾನಗರ ಆಸ್ಪತ್ರೆಯ ಸ್ತ್ರೀ ರೋಗ ತಜ್ಞೆ ಡಾ. ಎಸ್.ಟಿ.ನಾಗಮಣಿ ಅವರಿಗೂ ಕಡ್ಡಾಯ ನಿವೃತ್ತಿ ದಂಡನೆಗೆ ಸಂಪುಟ ನಿರ್ಣಯ ಕೈಗೊಂಡಿದೆ ಎಂದು ಸಚಿವರು ಹೇಳಿದ್ದಾರೆ. ಅಲ್ಲದೆ, ಪೋಕ್ಸೋ ಜೈಲು ಶಿಕ್ಷೆಗೆ ಗುರಿಯಾಗಿರುವ ಹೂವಿನಹಡಗಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ಎನ್ ಹಳ್ಳಿಗುಡಿ ಅವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಲು ನಿರ್ಣಯ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

**ಸಂಚಾರಿ ಆರೋಗ್ಯ ಘಟಕ:** ಎಸ್.ಸಿ., ಎಸ್.ಟಿ. ಮೀಸಲು ಕ್ಷೇತ್ರಗಳಲ್ಲಿ 20 ಸಂಚಾರಿ ಆರೋಗ್ಯ ಘಟಕಗಳ ಸ್ಥಾಪನೆಗೆ 20.07 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಏರೋ ಸ್ಪೇಸ್ ಉತ್ಪಾದನೆ ಹಾಗೂ ರಕ್ಷಣಾ ಉತ್ಕೃಷ್ಟತಾ ಕೇಂದ್ರದ ಸ್ಥಾಪನೆಗೂ ಅನುಮೋದನೆ ದೊರಕಿದೆ. ಸೈಬರ್ ಭದ್ರತಾ ನೀತಿ ಸೇರಿದಂತೆ ಕ್ರಮ ತೆಗೆದುಕೊಳ್ಳಲು ಕೇಂದ್ರದ ಉಪಯೋಗ ಪಡೆಯುವುದು ಹಾಗೂ ಇದರ ಪರಿಷ್ಕೃತ ವೆಚ್ಚ 391 ಕೋಟಿ ರೂಪಾಯಿ ಬಿಡುಗಡೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದರು.

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆವರಣದಲ್ಲಿ 325 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣಕ್ಕೆ ಸಂಪುಟದಲ್ಲಿ ಚರ್ಚೆ ನಡೆದಿದ್ದು, ಆಸ್ಪತ್ರೆ ಕಟ್ಟಡದ ಪರಿಷ್ಕೃತ ವೆಚ್ಚ 187.90 ಕೋಟಿ ರೂಪಾಯಿ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

**ಸಿಟಿ, ಎಂಆರ್‌ಐ ಸ್ಕ್ಯಾನ್ ಅಳವಡಿಕೆ:** ಮೈಸೂರು, ಬೆಂಗಳೂರಿನ ಕೆ.ಸಿ.ಜನರಲ್, ಸಿ.ವಿ.ರಾಮನ್‌ನಗರ ಸಾರ್ವಜನಿಕ ಆಸ್ಪತ್ರೆ, ಚಿತ್ರದುರ್ಗ, ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗಳಲ್ಲಿ ಸಿಟಿ ಸ್ಕ್ಯಾನ್ ಯಂತ್ರಗಳನ್ನು ಅಳವಡಿಸಲು ಸಭೆ ಸಮ್ಮತಿಸಿದೆ. ಮೈಸೂರು, ದಾವಣಗೆರೆ, ಸಿ.ವಿ.ರಾಮನ್ ನಗರ, ಕೆ.ಸಿ.ಜನರಲ್ ಆಸ್ಪತ್ರೆ, ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆ, ಜಯನಗರದ ಸಾರ್ವಜನಿಕ ಆಸ್ಪತ್ರೆ, ಚಿಕ್ಕಮಗಳೂರು, ಬಾಗಲಕೋಟೆ, ಧಾರವಾಡ, ಹಾವೇರಿ, ರಾಮನಗರ, ಯಾದಗಿರಿ, , ಉಡುಪಿ, ವಿಜಯನಗರ, ಚಿಕ್ಕೋಡಿ, ಅರಸೀಕೆರೆ ಆಸ್ಪತ್ರೆಗಳಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಎಂಆರ್‌ಐ ಯಂತ್ರಗಳನ್ನು ಅಳವಡಿಸಲಾಗುತ್ತದೆ. ಇದಕ್ಕೆ 47.41 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ ಎಂದು ತಿಳಿಸಿದರು.

**ಸಾರಿಗೆ ಬಸ್‌ನಲ್ಲಿ ಮತ್ತಷ್ಟು ಸುರಕ್ಷೆ:** ಕೆಎಸ್‌ಆರ್‌ಟಿಸಿ ಸೇರಿದಂತೆ ಸಾರಿಗೆ ಸಂಸ್ಥೆಗಳಲ್ಲಿ ಪ್ರಯಾಣಿಕರ ಕೇಂದ್ರೀಕೃತ ಮಾಹಿತಿ, ಬಸ್ ಸಂಚಾರದ ಕರಾರುವಕ್ಕು ಮಾಹಿತಿ ನೀಡಲು 34.74 ಕೋಟಿ ರೂ. ವೆಚ್ಚದಲ್ಲಿ ವೈಕಲ್ ಟ್ರಾಕಿಂಗ್ ಮತ್ತು ಪ್ಯಾನಿಕ್ ಬಟನ್ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುತ್ತದೆ ಎಂದು ಹೇಳಿದರು. ಬೆಂಗಳೂರಿನ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ 1600 ಕೋಟಿ ರೂ. ಅನ್ನು ನಬಾರ್ಡ್‌ನಿಂದ ಸಾಲ ಪಡೆಯಲು ಸರ್ಕಾರದ ಖಾತ್ರಿಗೆ ಘಟನೋತ್ತರ ಸಹಮತಿಸಲಾಗಿದೆ. ಜೊತೆಗೆ ಶೇ. 1 ರಷ್ಟು ಭದ್ರತಾ ಶುಲ್ಕವನ್ನು ಕಡಿಮೆ ಮಾಡಲು ಚರ್ಚೆ ನಡೆಸಲಾಗಿದೆ. ಅಂತಿಮವಾಗಿ ನಿರ್ಧಾರ ತೆಗೆದುಕೊಳ್ಳಲು ಮುಖ್ಯಮಂತ್ರಿಯವರಿಗೆ ಅಧಿಕಾರ ನೀಡಲಾಗಿದೆ. ಅಂಗನವಾಡಿಯಲ್ಲಿ ಪೌಷ್ಠಿಕ ಆಹಾರ ತಯಾರಿಸಲು ತಾಳೆ ಎಣ್ಣೆ ಬದಲು ಸೂರ್ಯಕಾಂತಿ ಎಣ್ಣೆ ಬಳಕೆಗೆ ತೀರ್ಮಾನಿಸಿದ್ದು, ಹೆಚ್ಚುವರಿ 9.9 ಕೋಟಿ ರೂ. ವೆಚ್ಚವಾಗಲಿದೆ. ಬಿಬಿಎಂಪಿ ಕಾಯ್ದೆಯಲ್ಲಿನ ಅಂಶಗಳನ್ನು ಇತರೆ ಪಾಲಿಕೆಗಳಿಗೂ ವಿಸ್ತರಿಸಲು ಪರಿಶೀಲಿಸಿ ವರದಿ ನೀಡಲು ಸಂಪುಟ ಉಪಸಮಿತಿ ರಚನೆ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿಗೆ ನೀಡಲಾಗಿದೆ ಎಂದರು.

## ಡಿ.ಕೆ.ಶಿವಕುಮಾರ್ ಮೇಲಿನ ಕೇಸ್ ಕ್ಲೋಸ್!

ಮಾತನಾಡಿದ ಅವರು, ವಿಧಾನಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕರೂ ಆಗಿರುವ ಕಾಂಗ್ರೆಸ್ ಶಾಸಕ ಅಶೋಕ್ ಪಟ್ಟಣ ಅವರ ಅರ್ಜಿಯನ್ನು ಆಧರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ (ಅಂದಿನ ವಿರೋಧ ಪಕ್ಷದ ನಾಯಕ), ಡಿ.ಕೆ.ಸುರೇಶ್ (ಬೆಂಗಳೂರು ಗ್ರಾಮಾಂತರ ಸಂಸದ) ಅವರು ಪಕ್ಷದ ಸಮಾವೇಶವನ್ನು ಆಯೋಜಿಸುವ ಮೂಲಕ ಕೋವಿಡ್–19 ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಪ್ರಕರಣಗಳಿಗೆ ಸಂಬಂಧಿಸಿವೆ. ನಮ್ಮ ನೀರು, ನಮ್ಮ ಹಕ್ಕು ಎಂಬ ಘೋಷದೊಂದಿಗೆ ಆರಂಭದಲ್ಲಿ ರಾಮನಗರ ಜಿಲ್ಲೆಯ ಕನಕಪುರದ ಕಾವೇರಿ ಮತ್ತು ಅರ್ಕಾವತಿ ನದಿಗಳ ಸಂಗಮದಲ್ಲಿ 2022ರ ಜನವರಿ 9ರಂದು ಪ್ರಾರಂಭವಾದ ಮೆರವಣಿಗೆ ಜನವರಿ 19ರಂದು ಬಸವನಗುಡಿಯಲ್ಲಿ ಮುಕ್ತಾಯಗೊಳಿಸಲು ನಿರ್ಧರಿಸಲಾಗಿತ್ತು. ಆದರೆ ಕೋವಿಡ್–19 ಪ್ರಕರಣಗಳ ಹೆಚ್ಚಳದಿಂದಾಗಿ ಕೋವಿಡ್ ನಿರ್ಬಂಧಗಳ ಉಲ್ಲಂಘನೆಯ ಕುರಿತಂತೆ ಕರ್ನಾಟಕ ಹೈಕೋರ್ಟ್ ಮಧ್ಯಪ್ರವೇಶಿಸಿ ಪಾದಯಾತ್ರೆಯನ್ನು ನಿಲ್ಲಿಸುವಂತೆ ಆದೇಶಿಸಿತ್ತು. ಈ ಹಿನ್ನೆಲೆಯಲ್ಲಿ ಜನವರಿ 13ರಂದು ಪಾದಯಾತ್ರೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಯಿತು. ಅಲ್ಲದೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಹಲವು ಕಾಂಗ್ರೆಸ್ ನಾಯಕರಿಗೂ ಕೊರೊನಾ ಸೋಂಕು ತಗುಲಿತ್ತು. ಫೆಬ್ರವರಿ ಅಂತ್ಯದಲ್ಲಿ ಪಕ್ಷವು ಮತ್ತೆ ಪಾದಯಾತ್ರೆಯನ್ನು ಪುನರಾರಂಭಿಸಿತು. ಮಾರ್ಚ್ 3ರಂದು ಬಸವನಗುಡಿಯ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಮುಕ್ತಾಯವಾಯಿತು.




## 'ಮ್ಯಾಟ್ನಿ'ಯಲ್ಲೊಂದು ಸಂಜೆ ಹಾಡು!

ಮನೋಹರ್ ಕಾಂಪಲ್ಲಿ ಅವರ ನಿರ್ದೇಶನದ, 'ಅಯೋಗ್ಯ' ಖ್ಯಾತಿಯ ನೀನಾಸಂ ಸತೀಶ್ ಹಾಗೂ ರಚಿತಾ ರಾಮ್ ಅಭಿನಯದ ಮತ್ತೊಂದು ಚಿತ್ರ 'ಮ್ಯಾಟ್ನಿ'. ಈ ಚಿತ್ರದ "ಸಂಜೆ ಮೇಲೆ ಸುಮ್ನೆ, ಫೋನು ಮಾಡ್ಲ ನಿಂಗೆ' ಎಂಬ ರೊಮ್ಯಾಂಟಿಕ್ ಹಾಡಿನ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತ ಮತ್ತು ಸಾಹಿತ್ಯವಿರುವ ಈ ಹಾಡಿಗೆ ಗಾಯಕ ವಿಜಯ್‌ಪ್ರಕಾಶ್ ದನಿಯಾಗಿದ್ದಾರೆ.

ನನ್ ಕೆರಿಯರ್‌ನಲ್ಲೇ ನೆನಪಲ್ಲುಳಿಯುವಂಥ ಅದ್ಭುತವಾದ ಹಾಡಿದು. ಕಲಾನಿರ್ದೇಶನ, ನೃತ್ಯನಿರ್ದೇಶನ, ಛಾಯಾಗ್ರಹಣ ಎಲ್ಲವೂ ಚೆನ್ನಾಗಿದೆ ಎಂದು ಮಾತು ಪ್ರಾರಂಭಿಸಿದ ನಾಯಕ ನೀನಾಸಂ ಸತೀಶ್, ಒಬ್ಬ ಪ್ರೇಕ್ಷಕನಾಗಿ ನೋಡಿದಾಗ ಈ ಹಾಡು ಬಹಳ ಚೆನ್ನಾಗಿದೆ ಎಂದೆನಿಸುತ್ತದೆ. ನಿರ್ದೇಶಕ ಮನೋಹರ್ ಅವರು ಬಂದು ಈ ಕಥೆ ಹೇಳಿದಾಗ ತಕ್ಷಣ ಒಪ್ಪಿಕೊಂಡೆ. ಬಹಳ ಚೆನ್ನಾಗಿ ಕಥೆ ಮಾಡಿಕೊಂಡಿದ್ದಾರೆ. "ಅಯೋಗ್ಯ" ನಂತರ ನಾನು ಮತ್ತು ರಚಿತಾ ಒಟ್ಟಿಗೆ ಅಭಿನಯಿಸಿರುವ ಚಿತ್ರವಿದು. ಕಥೆ ಕೇಳಿದಾಗ, ಈ ಕಥೆಗೆ ರಚಿತಾ ರಾಮ್ ಅವರೇ ಸೂಕ್ತ ಅನಿಸಿತು. ನಂತರ ಮತ್ತೊಬ್ಬ ನಾಯಕಿಯಾಗಿ ಅದಿತಿ ಚಿತ್ರತಂಡ ಸೇರಿದರು. ಈಗಾಗಲೇ ರಚಿತಾರಾಮ್ ಅವರು ಈ ಚಿತ್ರದಲ್ಲಿದ್ದಾರೆ. ಒಬ್ಬರು ಇರುವಾಗ ಅದಿತಿ ಒಪ್ಪುತ್ತಾರಾ ಎಂಬ ಗೊಂದಲವಿತ್ತು. ಅವರು ಒಂದೇ ಮಾತಿಗೆ ಒಪ್ಪಿಕೊಂಡರು. ನಾಗಭೂಷಣ್, ಶಿವರಾಜ್ ಕೆ.ಆರ್.ಪೇಟೆ, ಪೂರ್ಣ ಎಲ್ಲರೂ ಚೆನ್ನಾಗಿ ಮಾಡಿದ್ದಾರೆ. ಮುಂದೆ ನನ್ನ ಹಾಗೂ ಅದಿತಿ ಅವರ ಇನ್ನೊಂದು ಹಾಡು ಸದ್ಯದಲ್ಲೇ ಬಿಡುಗಡೆಯಾಗಲಿದೆ. ಚಿತ್ರದಲ್ಲಿ ನಾಲ್ಕು ಹಾಡುಗಳಿವೆ. ಸೆಪ್ಟೆಂಬರ್‌ನಲ್ಲಿ ಚಿತ್ರ ಬಿಡುಗಡೆಯಾಗಲಿದೆ ಎಂದು ತಿಳಿಸಿದರು. ನಾಯಕಿ ರಚಿತರಾಮ್ ಮಾತನಾಡಿ ಈ ಹಾಡಿನ ಚಿತ್ರೀಕರಣದಲ್ಲೇ ಇದು ಹಿಟ್ ಸಾಂಗ್ ಆಗುತ್ತೆ ಎನಿಸಿತ್ತು. ಅದರಂತೆ ಹಾಡು ಬಹಳ ಚೆನ್ನಾಗಿ ಮೂಡಿಬಂದಿದೆ. ಸಾಹಿತ್ಯವೂ ಚೆನ್ನಾಗಿದೆ. ಸಂತು ನೃತ್ಯನಿರ್ದೇಶನ ಮಾಡಿದ್ದಾರೆ. ತುಂಬಾ ಎಂಜಾಯ್ ಮಾಡಿಕೊಂಡು ಚಿತ್ರೀಕರಣ ಮಾಡಿದ್ದೇವೆ. ಅದರಲ್ಲೂ ಒಂದು ಸೆಟ್‌ನಲ್ಲಿ ಚಿತ್ರೀಕರಣ ಮಾಡಿದ್ದು, ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಚಿತ್ರೀಕರಣ ಮಾಡಿದ ಹಾಗನಿಸಿತು. ಅದ್ಭುತವಾದ ತಾರಾಗಣ ಚಿತ್ರದಲ್ಲಿದೆ. ನನಗೂ ಹೊಸ ಶೇಡ್ ಇರುವ ಒಳ್ಳೆಯ ಪಾತ್ರವಿದೆ. ಟ್ರೈಲರ್‌ನಲ್ಲಿ ನನ್ನ ಪಾತ್ರದ ಬಗ್ಗೆ ಗೊತ್ತಾಗುತ್ತದೆ ಎಂದರು. ಮತ್ತೊಬ್ಬ ನಾಯಕಿ ಅದಿತಿ ಪ್ರಭುದೇವ ಮಾತನಾಡಿ ಒಂದು ಚಿತ್ರಕ್ಕೆ ಹಾಡುಗಳು ಇನ್ವಿಟೇಷನ್ ಎನ್ನುತ್ತಾರೆ. ಅದೇ ರೀತಿ ನಮ್ಮ ಚಿತ್ರದ ಅದ್ಭುತ ಹಾಡನ್ನು ಬಿಡುಗಡೆ ಮಾಡುವ ಮೂಲಕ ಪ್ರೇಕ್ಷಕರನ್ನು ಚಿತ್ರವೀಕ್ಷಣೆಗೆ ಆಹ್ವಾನಿಸುತ್ತಿದ್ದೇವೆ. ಸತೀಶ್ ಹಾಗೂ ರಚಿತಾರಾಮ್ ಅಭಿನಯದ ಈ ಹಾಡು ಜೊತೆಗೆ ನನ್ನ ಪಾತ್ರ ಕೂಡ ಚೆನ್ನಾಗಿದೆ ಎಂದು ತಿಳಿಸಿದರು. ಚಿತ್ರದ




## ಪ್ರೀತಿ, ಪ್ರೇಮ, ಸಂಸಾರವೇ 'ಖುಷಿ' ಹೈಲೈಟ್

ವಿಜಯ್ ದೇವರಕೊಂಡ ಹಾಗೂ ಸಮಂತಾ ಅಭಿನಯದ 'ಖುಷಿ' ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಬುಧವಾರ ಸಂಜೆ ಹೈದರಾಬಾದ್‌ನಲ್ಲಿ ಅದ್ದೂರಿಯಾಗಿ ನೆರವೇರಿತು. ರೊಮ್ಯಾಂಟಿಕ್ ಎಂಟರ್‌ಟೈನರ್ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಶಿವನಿರ್ವಾಣ ಅವರು ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆಯಡಿ 'ಖುಷಿ' ಕನ್ನಡ, ತೆಲುಗು, ತಮಿಳು ಸೇರಿದಂತೆ ಐದು ಭಾಷೆಗಳಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿದೆ. ಸಾಮಾನ್ಯವಾಗಿ ಮಾಸ್ ಕಂಟೆಂಟ್ ಹೊಂದಿದ ಚಿತ್ರಗಳು ಪ್ಯಾನ್ ಇಂಡಿಯಾ ಲೆವೆಲ್‌ನಲ್ಲಿ ಬಿಡುಗಡೆಯಾಗುತ್ತವೆ. ಆದರೆ ಮೊದಲ ಬಾರಿಗೆ ನವಿರು ಪ್ರೇಮಕಥಾನಕ ಒಳಗೊಂಡ 'ಖುಷಿ' ಚಿತ್ರವು 5 ಭಾಷೆಗಳಲ್ಲಿ ನಿರ್ಮಾಣವಾಗಿದೆ.

ನಟ ವಿಜಯ್ ದೇವರಕೊಂಡ ಮಾತನಾಡುತ್ತಾ, ಇದೊಂದು ಕ್ಯೂಟ್ ಲವ್‌ಸ್ಟೋರಿ. ಪ್ರೀತಿ ಪ್ರೇಮ, ಮದುವೆ, ಸಂಬಂಧಗಳ ಬಗ್ಗೆ ನಮ್ಮ ಸಿನಿಮಾ ಹೇಳುತ್ತದೆ. ಮನುಷ್ಯನ ಭಾವನೆಗಳು ಎಲ್ಲಾ ಕಡೆ ಒಂದೇ ಆಗಿರುತ್ತದೆ. ಹಾಗಾಗಿ ನಮ್ಮ ಚಿತ್ರವು ಎಲ್ಲಾ ಭಾಗದ ಜನರಿಗೂ ತಲುಪುತ್ತದೆ ಎಂಬ ನಂಬಿಕೆಯಿದೆ ಎಂದರು. ನಂತರ ಮಾತನಾಡಿದ ನಿರ್ದೇಶಕರು, ಈ ಸಿನಿಮಾ ಎರಡು ವರ್ಷಗಳ ಪಯಣ. ನನ್ನ ನಿರ್ದೇಶನದ ನಾಲ್ಕನೇ ಚಿತ್ರ ಮೊದಲ ಚಿತ್ರ ಒಟಿಟಿಯಲ್ಲಿ ಬಿಡುಗಡೆಯಾಗಿತ್ತು. ಖುಷಿ ಚಿತ್ರಕ್ಕೆ ಸಿಗುತ್ತಿರುವ ಪ್ರೋತ್ಸಾಹ ಸಂಭ್ರಮ ನೋಡಿದಾಗ ಮೊದಲ ಚಿತ್ರದಲ್ಲಿ ಆ ಸಂಭ್ರಮವನ್ನು ಮಿಸ್ ಮಾಡಿಕೊಂಡಿದ್ದೆ ಅನಿಸಿದೆ. ಕಳೆದ ವರ್ಷ ಏಪ್ರಿಲ್‌ನಲ್ಲಿ ಕಾಶ್ಮೀರದಲ್ಲಿ ಆರಾಧ್ಯ ಆರಾಧ್ಯ ಹಾಡನ್ನು ಚಿತ್ರೀಕರಿಸಿದ್ದೇವೆ ಎಂದರು. ಚಿತ್ರದಲ್ಲಿ ವಿಜಯ್ ದೇವರಕೊಂಡ, ಸಮಂತಾ, ಜಯರಾಮ್, ಸಚಿನ್ ಖೇಡೇಕರ್, ಮೋಸಾನಿ ಮುರಳಿ ಶರ್ಮಾ, ಲಕ್ಷ್ಮಿ ಆಲಿ, ಶರ್ಣ್ಯ ಪೊನ್‌ವಣ್ಣನ್, ರೋಹಿಣಿ, ವೆನ್ನೆಲಾಕಿಶೋರ್, ರಾಹುಲ್ ರಾಮಕೃಷ್ಣ, ಶ್ರೀಕಾಂತ್ ಅಯ್ಯಂಗಾರ್, ಶರಣ್ಯ, ಪ್ರದೀಪ್ ಇತರರು ಅಭಿನಯಿಸಿದ್ದಾರೆ. ಖುಷಿ ಚಿತ್ರಕ್ಕೆ ಹೇಶಮ್ ಅಬ್ದುಲ್ ವಹಾಬ್ ಅವರು ಸಂಗೀತ ನೀಡಿದ್ದು, ಹಾಡುಗಳು ಈಗಾಗಲೇ ಹಿಟ್ ಲಿಸ್ಟ್ ಸೇರಿವೆ. ಜಿ.ಮುರಳಿ ಛಾಯಾಗ್ರಹಣದಲ್ಲಿ ಖುಷಿ ಸುಂದರವಾಗಿ ಮೂಡಿ ಬಂದಿದೆ. ಈ ಚಿತ್ರದ ಪ್ರೀ ರಿಲೀಸ್ ಇವೆಂಟ್ ಆ.15ರಂದು ದೊಡ್ಡಮಟ್ಟದಲ್ಲಿ ನಡೆಯಲಿದೆ. ನಾಯಕಿ ಸಮಂತಾ ಕಾರ್ಯಕ್ರಮದಲ್ಲಿ ಹಾಜರಿರಲಿಲ್ಲ.





## ಹಾರರ್ 'ತಾಯ್ತ'ದಲ್ಲಿ ಶಿವನ ಹಾಡು...

ಇತ್ತೀಚೆಗೆ ಕನ್ನಡ ಚಿತ್ರರಂಗದಲ್ಲಿ ಹಾರರ್ ಕಂಟೆಂಟ್ ಚಿತ್ರಗಳೇ ಹೆಚ್ಚು ಸದ್ದು ಮಾಡುತ್ತಿವೆ. ಅಂಥಾ ಚಿತ್ರಗಳಲ್ಲಿ 'ತಾಯ್ತ' ಕೂಡ ಒಂದು. ಕಥೆ ಬರೆದು ಶಾಹಿದ್ ಅವರು ನಿರ್ಮಾಣ ಮಾಡಿರುವ ಈ ಚಿತ್ರಕ್ಕೆ ಲಯಕೋಕಿಲಾ ಚಿತ್ರಕಥೆ ಬರೆದು, ಆಕ್ಷನ್‌ಕಟ್ ಹೇಳಿದ್ದಾರೆ. ಈ ಚಿತ್ರದ ಹಾಡುಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು. ಚಿತ್ರದ 4 ಹಾಡುಗಳಿಗೆ ನಿರ್ದೇಶಕರೇ ಸಂಗೀತ ನೀಡಿದ್ದಾರೆ. ಮೂವರು ಧರ್ಮಗುರುಗಳು ಹಾಗೂ ಸಂಗೀತ ನಿರ್ದೇಶಕ ಸಾಧುಕೋಕಿಲ ಆಡಿಯೋ ರಿಲೀಸ್ ಮಾಡಿ, ಚಿತ್ರತಂಡಕ್ಕೆ ಶುಭ ಹಾರೈಸಿದರು.

ಲಯಕೋಕಿಲಾ ಮಾತನಾಡುತ್ತಾ, 'ತಾಯ್ತ' ಟೈಟಲ್‌ನಷ್ಟೇ ಪವರ್‌ಫುಲ್ ಕಥೆ ಹೊಂದಿದೆ. ರಾಮ್ ನಾರಾಯಣ ಬರೆದ ಶಿವನೇ ಕಾಪಾಡು... ಹಾಡನ್ನು ಬಿಡುಗಡೆ ಮಾಡಿದ್ದೇವೆ, ಪ್ರೇಮಕಥೆಯ ಜೊತೆ ಹಾರರ್, ಥ್ರಿಲ್ಲರ್, ಕಾಮಿಡಿಯಂಥ ಎಲ್ಲ ಮನರಂಜನಾತ್ಮಕ ಅಂಶಗಳೂ ಚಿತ್ರದಲ್ಲಿದೆ. ರಿಯಾನ್, ಹರ್ಷಿಕಾ ಪೂಣಚ್ಚ ಚಿತ್ರದ ನಾಯಕ, ನಾಯಕಿಯ ಪಾತ್ರ ಮಾಡಿದ್ದಾರೆ. ಶೋಭರಾಜ್ ಅಲ್ಲದೆ ನಾನೂ ಚಿತ್ರದಲ್ಲಿ ಅಭಿನಯಿಸಿದ್ದೇನೆ. ಜೊತೆಗೆ ಸಂಗೀತವನ್ನೂ ಮಾಡಿದ್ದೇನೆ. ಸಹನಿರ್ಮಾಪಕ ಸಂತೋಷ್ ಅವರು ಮುಳುಗುತ್ತಿದ್ದ ಹಡಗಿಗೆ ಆಸರೆಯಂತೆ ಬಂದರು, ಅಂದುಕೊಂಡದ್ದಕ್ಕಿಂತ ಖರ್ಚು ಜಾಸ್ತಿನೇ ಆಯ್ತು ಎಂದು ಹೇಳಿದರು. ನಾಯಕ ರಿಯಾನ್ ಮಾತನಾಡಿ ನನ್ನ ಮೊದಲ ಚಿತ್ರವಿದು, ಈ ಕಥೆ ನನಗೆ ತುಂಬಾ ಇಷ್ಟವಾಯಿತು ಎಂದರು. ನಾಯಕಿ ಹರ್ಷಿಕಾ ಪೂಣಚ್ಚ ಮಾತನಾಡುತ್ತಾ ನಾನು ಖುಷಿ ಎಂಬ ಕಾಲೇಜು ವಿದ್ಯಾರ್ಥಿನಿಯ ಪಾತ್ರದಲ್ಲಿ ನಟಿಸಿದ್ದೇನೆ. ನಾನು ಅಭಿನಯಿಸಿರುವ ಮೊದಲ ಹಾರರ್ ಚಿತ್ರವಿದು. ಕಾಲೇಜ್ ವಿದ್ಯಾರ್ಥಿಗಳು ಪ್ರವಾಸಕ್ಕೆಂದು ಒಂದು ಸ್ಥಳಕ್ಕೆ ಹೋದಾಗ ಅಲ್ಲಿ ಏನೇನೆಲ್ಲಾ ಘಟನೆಗಳು ನಡೆಯುತ್ತವೆ ಎನ್ನುವುದೇ 'ತಾಯ್ತ' ಚಿತ್ರದ ಕಥೆ ಎಂದು ತಿಳಿಸಿದರು. ದೆವ್ವದ ಪಾತ್ರ ಮಾಡಿರುವ ನಟಿ ರೋಜಾ ಮಾತನಾಡುತ್ತಾ, ನನಗೆ ದೆವ್ವ, ಭೂತ ಅಂದ್ರೆ ಭಯ... ಆದರೆ ಚಿತ್ರದಲ್ಲಿ ದೆವ್ವದ ಪಾತ್ರವನ್ನೇ ಮಾಡಿದ್ದೇನೆ. ನಾವು ಶೂಟಿಂಗ್ ಮಾಡಿದ ಮನೆಯಲ್ಲಿಯೇ ಅದರಲ್ಲಿ ವಾಸವಿದ್ದ ಇಡೀ ಕುಟುಂಬ ಸೂಸೈಡ್ ಮಾಡಿಕೊಂಡಿತ್ತು ಎಂಬ ವಿಷಯವನ್ನು ನಿರ್ದೇಶಕರು ನಮಗೆ ಕೊನೆಯವರೆಗೆ ಹೇಳೇ ಇರಲಿಲ್ಲ ಎಂದು ಶೂಟಿಂಗ್ ಅನುಭವ ಹಂಚಿಕೊಂಡರು. ಈ ಚಿತ್ರಕ್ಕೆ ಚಿಕ್ಕಮಗಳೂರು, ಬೇಲೂರು ಸುತ್ತಮುತ್ತ ಹೆಚ್ಚಾಗಿ ಮಲೆನಾಡ ಪ್ರದೇಶಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ.

## ಸಿನಿಪದಬಂಧ-486



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______



ವಿಜೇತರು: ಜ್ಯೋತಿ ಎಂ. #223, EWS ಹುಡ್ಕೋ 3ನೇ ಹಂತ ಬನ್ನಿಮಂಟಪ, ಮೈಸೂರು-570022

### ಎಡದಿಂದ ಬಲಕ್ಕೆ

| | | |
|---|---|---|
| 1. | ಪ್ರಭಾಕರ್,ಜಯಂತಿ,ಶಂಕರ್ ನಾಗ್, ಭವ್ಯ ಅಭಿನಯದ ಚಿತ್ರ | 5 |
| 5. | ಈ ನಟಿ ಹುಗಿದಿಟ್ಟ ಸಂಪತ್ತು ಹೊಂದಿದ್ದಾಳೆ | 5 |
| 6. | ನೀರ್ ದೋಸೆ ಚಿತ್ರದ ನಾಯಕಿ | 4 |
| 9. | "ಹುಟ್ಟಿದೋರು ಯಾರೂ ಸಾಯ್ದೆ ಹೋದ್ರೆ ಹೆಂಗೆ ಹೇಳ್ರಣ್ಣ.....", ಗೀತೆಯ ಚಿತ್ರ | 5 |
| 11. | ಪ್ರೀತಿಯೊಂದಿಗಿನ ಹಾಡಿನ ಆರಂಭ | 5 |
| 13. | ಪ್ರಭಾಕರ್ ಅಭಿನಯದ "ತಾಯಿ ನಾಡು" | 4 |
| 16. | ಕ್ರೇಜಿ ಸ್ಟಾರ್ ರವಿಚಂದ್ರನ್ ಕೈಲಾಸವಾಸಿ | 5 |
| 17. | ವಿಷ್ಣುವಿನ ಹತ್ತು ವೇಷ | 5 |

### ಮೇಲಿನಿಂದ ಕೆಳಕ್ಕೆ

| | | |
|---|---|---|
| 1. | ಶಿವರಾಜ್ ಕುಮಾರ್ - ಸೀಮಾ ಅಭಿನಯಕ್ಕೆ ಎಂ. ಎಸ್. ರಾಜಶೇಖರ್ ನಿರ್ದೇಶಕ | 8 |
| 2. | ಪ್ರಭಾಕರ್ ಭೇಧಿಸಿದ ಕಮಲಾಕಾರದ ಯುದ್ಧ ಕಲೆ! | 4 |
| 3. | ಕಿವಿಯಲ್ಲಿ ಉಸುರಿದ ಮೆಲ್ಲನೆಯ ನುಡಿ | 4 |
| 4. | ಶಬರಿಮಲೆ ಸ್ವಾಮಿ _ _ _ | 3 |
| 5. | ಸಂಜಯ್-ಅರ್ಚನಾ ಅಭಿನಯದಲ್ಲಿ ಮಾಲಾಶ್ರೀ ಕೈಗೊಂಡ ಕ್ರಮ | 3 |
| 7. | ರಾಘವೇಂದ್ರ ರಾಜ್ ಕುಮಾರ್ ಸೋಲಿಲ್ಲದ ಹಮ್ಮೀರ | 8 |
| 8. | ರಮೇಶ್, ಬಿ.ಸಿ.ಪಾಟೀಲ್ ಅಭಿನಯದ ಚಿತ್ರ | 2 |
| 10. | ಎಕ್ಸ್ ಕ್ಯೂಸ್ ಮಿಯ ನಟಿ | 2 |
| 12. | ರಾಜಕುಮಾರ್ ಅಭಿನಯಕ್ಕೆ ಎಂ.ಆರ್.ವಿಠಲ್ ನಿರ್ದೇಶನವಿದೆ | 4 |
| 13. | ಮಾಲತಿ ಜೊತೆ ಬಂದವನು | 3 |
| 14. | ಹೆಂಡತಿಯ ಅಪ್ಪ ಸೇನೆಯವನು | 4 |
| 15. | ಈ ಚಿತ್ರಕ್ಕೆ ನಡುಕ ಉಂಟಾಗಿದೆ | 3 |



ಉಮ್ಮತ್ತೂರು ಇಂದುಶೇಖರ್
ಮೊ.9880820462

### ಸಿನಿ ಪದಬಂಧ 485ರ ಉತ್ತರ

| | | | | | | | | | | |
|---|---|---|---|---|---|---|---|---|---|---|
| ಸ | ತ್ವ | ಪ | ರೀ | ಕ್ಷೆ | | | ನ | | ನ | |
| ಕ | | ಕ್ಷಾಂ | | | ಸುಂ | ಟ | ರ | ಗಾ | ಳಿ | |
| ಲ | | ತ | | | ದ | | ಸಿಂ | | ನಿ | |
| ಕ | | ರ | ಣ | ಭೇ | ರಿ | | ಹ | | | ಸೋ |
| ಲಾ | | | | | | | | ಮೌ | | ಲಿ |
| ವ | ಸಂ | ತ | ಗೀ | ತ | | ಮಾ | ತಿ | ನ | ಮ | ಲ್ಲ |
| ಲ್ಲ | | ರ್ಣ | | | | | | | | ದ |
| ಭ | | | ತ್ರ | | ಚ | ಕ್ರ | ವ್ಯೂ | ಹ | | ಸ |
| | ಚಾ | | ಕ್ಷೇ | | ಪ್ಪಾ | | | ರಿ | | ರ |
| | ಮುಂ | ಗಾ | ರು | ಮ | ಳೆ | | | ನಾ | | ದಾ |
| | ಡಿ | | ಕು | | | ಅ | ತಿ | ಮ | ಧು | ರ |

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

## ಫುಟ್‌ಬಾಲ್ ಹಿನ್ನೆಲೆಯ 'ಡ್ಯೂಡ್'ಗೆ ಚಾಲನೆ

ಕ್ರೀಡೆಗೆ ಸಂಬಂಧಪಟ್ಟಂತೆ ಬೆರಳೆಣಿಕೆಯಷ್ಟು ಚಿತ್ರಗಳು ಬಂದಿವೆ. ಈಗ ಫುಟ್ಬಾಲ್ ಕ್ರೀಡೆಯ ಹಿನ್ನೆಲೆಯಲ್ಲಿ ಮಹಿಳಾ ಪ್ರದಾನ ಕಥೆಯ ಚಿತ್ರವೊಂದು ಇತ್ತೀಚೆಗೆ ಸೆಟ್ಟೇರಿದೆ. ಅದರ ಹೆಸರು 'ಡ್ಯೂಡ್'. ತೇಜ್ ಈ ಚಿತ್ರಕ್ಕೆ ಆಕ್ಷನ್‌ಕಟ್ ಹೇಳುತ್ತಿದ್ದಾರೆ, ರಾಘವೇಂದ್ರ ರಾಜಕುಮಾರ್ ಅತಿಥಿ ಪಾತ್ರ ಮಾಡುತ್ತಿರುವ ಈ ಚಿತ್ರದಲ್ಲಿ 12 ಜನ ನಾಯಕಿಯರಿದ್ದು, ಇವರೆಲ್ಲ ಫುಟ್‌ಬಾಲ್ ಪ್ಲೇಯರ್‌ಗಳಾಗಿ ನಟಿಸುತ್ತಿದ್ದಾರೆ. ನಿರ್ದೇಶಕ ತೇಜ್ ಮಾತನಾಡುತ್ತಾ, ಸ್ಪೋರ್ಟ್ಸ್‌ಗೆ ಸಂಬಂಧಪಟ್ಟಂತೆ ಮಹಿಳಾ ಫುಟ್ಬಾಲ್ ಆಟಗಾರ್ತಿಯರ ಸುತ್ತ ನಡೆಯುವ ಕಥೆಯನ್ನು ಈ ಚಿತ್ರದಲ್ಲಿ ಹೇಳುತ್ತಿದ್ದೇನೆ. ರಾಘಣ್ಣ ಅಪ್ಪ-ಮಗಳ ಬಾಂಧವ್ಯದ ಟ್ರ್ಯಾಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ರಂಗಾಯಣ ರಘು ಫುಟ್ಬಾಲ್ ಕೋಚ್ ಆಗಿ ನಟಿಸುತ್ತಿದ್ದಾರೆ. ಸ್ಪರ್ಶ ರೇಖಾ, ವಿಜಯ ಚೆಂಡೂರ್, ಸಂದೀಪ್ ಮಲಾನಿ, ಪ್ರವೀಣ್ ನಾಯಕ್ ಕೂಡ ಚಿತ್ರದಲ್ಲಿದ್ದಾರೆ ಎಂದು ವಿವರಿಸಿದರು. ಶಶಿಧರ್ ಅವರು ಈ ಚಿತ್ರದ ಕ್ರಿಯೇಟಿವ್ ಹೆಡ್ ಆಗಿದ್ದಾರೆ. ಪ್ರೇಮ್ ಅವರ ಕ್ಯಾಮರಾ ವರ್ಕ್, ಎಮಿಲ್ ಅವರ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ನಿರ್ದೇಶಕ ತೇಜ್ ಕೂಡ ಈ ಚಿತ್ರದಲ್ಲಿ ನೊಂದ ಪ್ರೇಮಿಯಾಗಿ ಕಾಣಿಸಿಕೊಳ್ಳುತ್ತಿದ್ದು, ಚಿತ್ರದ ಪ್ರತಿ ಪಾತ್ರಗಳ ಬದುಕು ಒಂದೊಂದು ರೀತಿ ಇದ್ದು, ಬದುಕಿನ ಗೆಲುವಿಗಾಗಿ ಅವರೆಲ್ಲ ಪಡುವ ಶ್ರಮದ ಸುತ್ತಾ ಚಿತ್ರಕಥೆ ಸಾಗಲಿದೆ ಎಂದರು.

ಮೈಸೂರು ಮಿತ್ರ ಶುಕ್ರವಾರ 11 ಆಗಸ್ಟ್ 2023

# ವಿರಾಜಪೇಟೆ ವ್ಯಾಪ್ತಿಯಲ್ಲಿ ಬೀಡುಬಿಟ್ಟಿದ್ದ ಆನೆಗಳನ್ನು ಕಾಡಿಗೆ ಓಡಿಸಿದ ಸಿಬ್ಬಂದಿ



ಮಡಿಕೇರಿ, ಆ.10– ವಿರಾಜಪೇಟೆ ಅರಣ್ಯ ವಲಯದ ವ್ಯಾಪ್ತಿಯ ಚೆಯ್ಯಂಡಾಣೆ, ನರಿಯಂದಡ, ಕೊಕೇರಿ, ಚೇಲಾವರ, ಕರಡ, ಅರಪಟ್ಟು, ಪೊದವಾಡ ಹಾಗೂ ಮರಂದೋಡ ಗ್ರಾಮಗಳ ತೋಟಗಳಲ್ಲಿ ಬೀಡುಬಿಟ್ಟು, ಕೃಷಿ ಫಸಲು ಧ್ವಂಸಗೊಳಿಸುವುದರ ಜತೆಗೆ ಕಾಫಿ ಗಿಡಗಳನ್ನು ತುಳಿದು ನಾಶಪಡಿಸುತ್ತಿದ್ದ ಕಾಡಾನೆಗಳ ಹಿಂಡನ್ನು ಕಾಡಿಗಟ್ಟಲಾಯಿತು.

ಕಾಡಾನೆ ಕಾಡಿಗಟ್ಟುವ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿಗಳು 7 ಕಾಡಾನೆಗಳ ಹಿಂಡನ್ನು ಎನ್.ಡಿ. ಅಯ್ಯಪ್ಪ ಎಸ್ಟೇಟ್‌ನಿಂದ ಬಲಿಯಾತ್ರ ಬೆಟ್ಟಕ್ಕೆ ಓಡಿಸಲು ಸಫಲರಾಗಿದ್ದಾರೆ. ಕಾಡಾನೆ ಓಡಿಸುವ ಸಂದರ್ಭ ಸಿಬ್ಬಂದಿಗಳನ್ನೇ ಬೆನ್ನಟ್ಟಿಸಿದ ಪ್ರಸಂಗ ಕೂಡ ನಡೆಯಿತು. ಕಾರ್ಯಾಚರಣೆಯಲ್ಲಿ ವಿರಾಜಪೇಟೆ, ಅಮ್ಮತ್ತಿ ಅರಣ್ಯ ವಲಯ ಹಾಗೂ ಆನೆ ಕ್ಷಿಪ್ರ ಕಾರ್ಯಪಡೆಯ ತಂಡಗಳು ಜಂಟಿಯಾಗಿ 2 ದಿನ ಕಾರ್ಯಚರಣೆ ನಡೆಸಿದರು.

ಒಟ್ಟು 30ಕ್ಕೂ ಹೆಚ್ಚು ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಆನೆಗಳನ್ನು ಕಾಡಿಗಟ್ಟಲು ಅರಣ್ಯ ಇಲಾಖೆ ಹರ ಸಾಹಸ ಪಡಬೇಕಾಯಿತು. ಇನ್ನು 3 ಅಥವಾ 4 ಕಾಡಾನೆ ತೋಟಗಳಲ್ಲಿ ಬೀಡು ಬಿಟ್ಟಿದ್ದು, ಅದನ್ನು ಕೂಡ ಕಾಡಿಗಟ್ಟಲಾಗುವುದು ಹಾಗೂ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕಳ್ಳಿರ ದೇವಯ್ಯ ಮಾಹಿತಿ ನೀಡಿದರು.

ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಂ.ಶರಣಬಸಪ್ಪ, ಮಾರ್ಗದರ್ಶನದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎ.ನೆಹರು, ವಿರಾಜಪೇಟೆ ವಲಯ ಅರಣ್ಯಾಧಿಕಾರಿ ಕಳ್ಳಿರ ದೇವಯ್ಯ ನೇತೃತ್ವದಲ್ಲಿ ಫಾರೆಸ್ಟರ್‌ಗಳಾದ ಅನಿಲ್, ಆನಂದ್, ಅರಣ್ಯ ಆನೆ ಕ್ಷಿಪ್ರ ಕಾರ್ಯಪಡೆ ತಂಡ, ಕೆದಮುಳ್ಳೂರು ಹಾಗೂ ಚೆಯ್ಯಂಡಾಣೆ ಕ್ಯಾಂಪ್ ಸಿಬ್ಬಂದಿಗಳು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

## ಕೆಲವೆಡೆ ಮದ್ಯ ಮಾರಾಟ ನಿಷೇಧ

ಮಡಿಕೇರಿ, ಆ.10– ಜಿಲ್ಲೆಯ ವಿವಿದೆಡೆ ಆ.12, 13 ಮತ್ತು 14 ರಂದು ನಡೆಯಲಿರುವ ಅಖಂಡ ಭಾರತ ಸಂಕಲ್ಪ ದಿನದ ಪ್ರಯುಕ್ತ ಪಂಜಿನ ಮೆರವಣಿಗೆ ಹಾಗೂ ಸಭಾ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಸಾರ್ವಜನಿಕ ಹಿತಾಸಕ್ತಿಯಿಂದ ಮತ್ತು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಮದ್ಯ ಮಾರಾಟವನ್ನು ನಿಷೇಧಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶಿಸಿದ್ದಾರೆ. ಆ.11 ರ ಮಧ್ಯರಾತ್ರಿ 12 ಗಂಟೆಯಿಂದ ಆ.13 ರ ಬೆಳಗ್ಗೆ 6 ಗಂಟೆಯವರೆಗೆ ಮಾದಾಪುರ ಹಾಗೂ ಸುತ್ತಮುತ್ತಲಿನ 10 ಕಿ.ಮೀ. ವ್ಯಾಪ್ತಿಯಲ್ಲಿ, ಆ.12 ರಂದು ಮಧ್ಯರಾತ್ರಿ 12 ಗಂಟೆಯಿಂದ ಆ.13ರ ಮಧ್ಯರಾತ್ರಿ 12 ಗಂಟೆಯವರೆಗೆ ಶನಿವಾರಸಂತೆ ಹಾಗೂ ಕೊಡ್ಲಿಪೇಟೆ ಪಟ್ಟಣ ವ್ಯಾಪ್ತಿಯ ಸುತ್ತಮುತ್ತಲಿನ 10 ಕಿ.ಮೀ. ಹಾಗೂ ಆ.14 ರ ಬೆಳಗ್ಗೆ 6 ಗಂಟೆಯಿಂದ ಆ.14 ರ ಮಧ್ಯರಾತ್ರಿ 12 ಗಂಟೆಯವರೆಗೆ ಕುಶಾಲನಗರ ಹಾಗೂ ಸುತ್ತಮುತ್ತಲಿನ 10 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಮದ್ಯದ ಅಂಗಡಿ, ಬಾರ್, ಹೋಟೆಲ್, ರೆಸ್ಟೋರೆಂಟ್ ಮತ್ತು ಕ್ಲಬ್‌ಗಳಲ್ಲಿ ಎಲ್ಲಾ ವಿಧದ ಮದ್ಯ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಿ ಆದೇಶ ಹೊರಡಿಸಿದ್ದಾರೆ.

# ಯಾವುದೇ ಅಡ್ಡಿಯಿಲ್ಲದೆ ಅರಣ್ಯದಂಚಿನ ಗ್ರಾಮಸ್ಥರಿಗೆ ಮೂಲ ಸೌಲಭ್ಯ ಕಲ್ಪಿಸಿಕೊಡಿ

### ವಿರಾಜಪೇಟೆ ಶಾಸಕ ಪೊನ್ನಣ್ಣ ಜನಸ್ಪಂದನಾ ಸಭೆಯಲ್ಲಿ ಸೂಚನೆ

### ಗ್ರಾಮಸ್ಥರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಸೂಚಿಸಿದ ಶಾಸಕರು



ಮಡಿಕೇರಿ, ಆ.10– ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಗ್ರಾಮಸ್ಥರಿಗೆ ವಿದ್ಯುತ್ ಸೇರಿದಂತೆ ಮೂಲ ಸೌಲಭ್ಯಗಳನ್ನು ಯಾವುದೇ ಅಡ್ಡಿ ಇಲ್ಲದೆ ಪೂರೈಸಬೇಕೆಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಚೆಂಬು ಗ್ರಾ.ಪಂ ಸಭಾಂಗಣದಲ್ಲಿ ನಡೆದ ಜನಸ್ಪಂದನ ಸಭೆ ಮತ್ತು ಶಾಸಕರ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸ್ಥಳೀಯ ಗ್ರಾಮಸ್ಥರ ಸಮಸ್ಯೆಗಳನ್ನು ಆಲಿಸಿದ ಶಾಸಕರು ಸ್ಥಳದಲ್ಲೇ ಬಹುತೇಕ ಅಹವಾಲುಗಳಿಗೆ ಪರಿಹಾರ ಸೂಚಿಸಿದರು. ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಅರಣ್ಯದಂಚಿನಲ್ಲಿ ವಾಸಿಸುತ್ತಿರುವ ಗ್ರಾಮಸ್ಥರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಅರಣ್ಯ ಇಲಾಖೆ ಅಡ್ಡಿಪಡಿಸಬಾರದು. ಬಕ್ಷಿ ಕುಟುಂಬಗಳಿಗೆ ವಿದ್ಯುತ್ ನೀಡಲು ಚೆಸ್ಕಾಂ ಇಲಾಖೆ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು. ಆನೆ ಹಾವಳಿ ತೀವ್ರಗೊಂಡಿರುವ ಭಾಗದಲ್ಲಿ ಅರಣ್ಯ ಅಧಿಕಾರಿಗಳು ಸೋಲಾರ್ ಬೇಲಿ ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದು ಎ.ಎಸ್.ಪೊನ್ನಣ್ಣ ತಿಳಿಸಿದರು. ಅರಣ್ಯ ಹಕ್ಕು ಪತ್ರದ ಬಗ್ಗೆ ಈಗಾಗಲೇ ಅರಣ್ಯ ಸಚಿವರು ಹಲವು ಜಿಲ್ಲೆಯ ಪ್ರತಿನಿಧಿಗಳೊಂದಿಗೆ ಚರ್ಚಿಸಿದ್ದು, ಮುಂದಿನ ದಿನಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಒತ್ತಡ ಹೇರುವುದಾಗಿ ಭರವಸೆ ನೀಡಿದರು.

ಕ್ರೀಡಾಂಗಣದ ಬೇಡಿಕೆ ಕುರಿತು ಅಧಿಕಾರಿಯೊಂದಿಗೆ ಚರ್ಚಿಸಿದ ಶಾಸಕರು ಕ್ರೀಡಾಂಗಣಕ್ಕೆ ಸ್ಥಳ ಇರುವುದನ್ನು ಖಾತರಿಪಡಿಸಿ ಯೋಜನೆಯನ್ನು ಅನುಷ್ಠಾನಗೊಳಿಸುವಂತೆ ಸೂಚಿಸಿದರು. ಅಡಕೆಯ ಹಳದಿ ರೋಗದ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಪರ್ಯಾಯ ಬೆಳೆಯ ಬಗ್ಗೆ ಕಾರ್ಯ ಯೋಜನೆ ರೂಪಿಸಲಾಗುವುದು ಎಂದರು. ಮೊಬೈಲ್ ನೆಟ್‌ವರ್ಕ್ ಸಮಸ್ಯೆಗೆ ಸ್ಪಂದಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಸಣ್ಣ ನೀರಾವರಿ ಇಲಾಖೆಯ ವತಿಯಿಂದ ಅಗತ್ಯವಿರುವ ಸ್ಥಳಗಳಲ್ಲಿ ತಡೆಗೋಡೆ ನಿರ್ಮಿಸಬೇಕು ಎಂದು ಪೊನ್ನಣ್ಣ ತಿಳಿಸಿದರು. ಸಭೆಗೂ ಮೊದಲು ಅವರು ಮಾರ್ಪಡ್ಕ ಸೇತುವೆ ಪರಿಶೀಲಿಸಿ ನಂತರ ಊರುಬೈಲು ಶಾಲೆಯಲ್ಲಿ ಸ್ಮಾರ್ಟ್‌ಕ್ಲಾಸ್ ಉದ್ಘಾಟಿಸಿದರು.

ಕಂದಾಯ ಹಕ್ಕುಪತ್ರ ಸಮಸ್ಯೆ ಬಗ್ಗೆ ರಘುನಾಥ್ ಬಾಲಂಬಿ, ಅರಣ್ಯ ಇಲಾಖೆಯ ಹಕ್ಕುಪತ್ರ ಸಮಸ್ಯೆ ಬಂಗಾರಕೋಡಿ ವೆಂಕಟರಮಣ, ಆನೆ ಹಾವಳಿ ಹೊದ್ದಟ್ಟಿ ಉದಯಕುಮಾರ್, ವಿದ್ಯುತ್ ಸಮಸ್ಯೆ ಕುರಿತು ಯಶೋಧ, ಸುಸಜ್ಜಿತ ಕ್ರೀಡಾಂಗಣ ಒದಗಿಸುವ ಬಗ್ಗೆ ಗರುಡ ಯುವಕ ಮಂಡಲದ ಸದಸ್ಯರು, ನೆಟ್ವರ್ಕ್ ಸಮಸ್ಯೆ ಬಗ್ಗೆ ಪಕೀರ ಮರ್ದಾಳ, ಜಲಜೀವನ್ ಸಮಸ್ಯೆ ಬಗ್ಗೆ ರವಿರಾಜ್ ಹೊಸೂರು, ಅಡಕೆಯ ಹಳದಿ ರೋಗದ ಬಗ್ಗೆ ನವೀನ ರಾಮಕಜೆ, ವಿದ್ಯಾರ್ಥಿಗಳಿಗೆ ವಸತಿ ನಿಲಯ ಬೇಡಿಕೆ ಬಗ್ಗೆ ಗಣಪಯ್ಯ ಗುಂಡಿಮಜಲ್ ಸೇರಿದಂತೆ ಹಲವರು ಬೇಡಿಕೆಗಳನ್ನು ಶಾಸಕರ ಮುಂದಿಟ್ಟರು.

ತಹಶೀಲ್ದಾರ್ ಕಿರಣ್ ಗೌರಯ್ಯ, ತಾ.ಪಂ ಕಾರ್ಯನಿರ್ವಹಣಾಧಿಕಾರಿ ಶೇಖರ್, ಗ್ರಾ.ಪಂ ಸದಸ್ಯ ಗಿರೀಶ್ ಹೊಸೂರು, ಸೂರಜ್ ಹೊಸೂರು, ಸೇರಿದಂತೆ ಗ್ರಾ.ಪಂ. ಸದಸ್ಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮಹದೇವ ಪ್ರಭು ಉಪಸ್ಥಿತರಿದ್ದರು.

# ಮಡಿಕೇರಿ ಕೋಟೆ ನವೀಕರಣ ಕಾಮಗಾರಿ ವೀಕ್ಷಿಸಿದ ಡಿಸಿ



ಮಡಿಕೇರಿ, ಆ.10– ನಗರದ ಕೋಟೆಯಲ್ಲಿ ನಡೆಯುತ್ತಿರುವ ನವೀಕರಣ ಕಾಮಗಾರಿಯನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ ಗುರುವಾರ ಪರಿಶೀಲಿಸಿದರು.

ಕೋಟೆಯ ನೆಲ ಮಹಡಿ ಮತ್ತು ಮೊದಲ ಮಹಡಿ ಕಾಮಗಾರಿ ವೀಕ್ಷಿಸಿದರು. ಹಾಗೆಯೇ ಕೋಟೆಯ ಸುತ್ತಮುತ್ತಲಿನ ಎಲ್ಲಾ ಕಡೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರು ನಗರದ ಕೋಟೆಯು ಹೃದಯ ಭಾಗದಲ್ಲಿದ್ದು, ಜಿಲ್ಲಾ ಕೇಂದ್ರ ಮಡಿಕೇರಿಯ ಕೋಟೆಯನ್ನು ಮತ್ತಷ್ಟು ಅಭಿವೃದ್ಧಿಗೊಳಿಸಬೇಕು ಎಂದರು.

ಸರ್ಕಾರ ನಗರದ ಕೋಟೆ ಅಭಿವೃದ್ಧಿಗೆ 10.76 ಕೋಟಿ ರೂ ಬಿಡುಗಡೆ ಮಾಡಿದ್ದು, ಕೋಟೆ ನವೀಕರಣ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಪುರಾತತ್ವ ಇಲಾಖೆಯ ಬಿಪಿನ್‌ಚಂದ್ರ ನೇಗಿ ಅವರು ಚಾವಣಿ ಕೆಲಸ ಪೂರ್ಣಗೊಂಡಿದ್ದು, ಪ್ಲಾಸ್ಟಿಂಗ್ ಕಾರ್ಯ ಪೂರ್ಣಗೊಳ್ಳುವ ಹಂತದಲ್ಲಿದೆ. ಪಾಲಿಶ್ ಕೆಲಸ ಜೊತೆಗೆ ಸುಣ್ಣ ಬಣ್ಣ ಕೆಲಸ ಭರದಿಂದ ಸಾಗಿದ್ದು, ಡಿಸೆಂಬರ್ ವೇಳೆಗೆ ಕೋಟೆಯ ನವೀಕರಣ ಕಾಮಗಾರಿ ಕೆಲಸ ಪೂರ್ಣಗೊಳ್ಳಲಿದೆ ಎಂದು ಮಾಹಿತಿ ನೀಡಿದರು. ಪುರಾತತ್ವ ಇಲಾಖೆಯ ಸೋಮ್ಲ ನಾಯಕ್, ಸುನಿಲ್ ಕುಮಾರ್, ಇತರರು ಕೋಟೆ ನವೀಕರಣ ಕಾಮಗಾರಿ ಸಂಬಂಧಿಸಿದಂತೆ ಹಲವು ಮಾಹಿತಿ ನೀಡಿದರು.

**ಸ್ಥಳ ಪರಿಶೀಲನೆ:** ಇದೇ ಆಗಸ್ಟ್ 15 ರಂದು ನಡೆಯುವ ಸ್ವಾತಂತ್ರ್ಯ ದಿನಾಚರಣೆಯನ್ನು ನಗರದ ಕೋಟೆ ಆವರಣದಲ್ಲಿ ಹಮ್ಮಿಕೊಂಡಿರುವ ಹಿನ್ನೆಲೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ಗುರುವಾರ ಭೇಟಿ ನೀಡಿ ಸ್ಥಳ ಪರಿಶೀಲಿಸಿದರು.

ಡಿವೈಎಸ್‌ಪಿ ಜಗದೀಶ್, ಸಿಪಿಐ ಅನೂಪ್ ಮಾದಪ್ಪ, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ವೈ.ಎಸ್.ಸಿದ್ದೇಗೌಡ, ಪಂಚಾಯತ್ ರಾಜ್ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಸುರೇಶ್ ಕುಮಾರ್, ಲೋಕೋಪಯೋಗಿ ಇಲಾಖೆ ಎಇಇ ಗಿರೀಶ್, ಸಹಾಯಕ ಎಂಜಿನಿಯರ್ ಸತೀಶ್, ಪೊಲೀಸ್ ಇಲಾಖೆಯ ಆರ್‌ಎಸ್‌ಐ ರಾಕೇಶ್, ಪಿಎಸ್‌ಐ ಶ್ರೀನಿವಾಸ್ ಇತರರು ಇದ್ದರು.

# ಆದಿವಾಸಿಗಳ ಜಾಗದಲ್ಲಿ ಕಂಪನಿಯೊಂದರಿಂದ ಬೇಲಿ

### ಆದಿವಾಸಿ ಸಂಘರ್ಷ ಮೋರ್ಚಾದಿಂದ ಪ್ರತಿಭಟನೆ, ಬೇಲಿ ತೆರವಿಗೆ ಆಗ್ರಹ



ವಿರಾಜಪೇಟೆ, ಆ.10– ವಿರಾಜಪೇಟೆ ತಾಲೂಕಿನ ಕೆದಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾರಿ ಕಾಡು ಪ್ರದೇಶದಲ್ಲಿ ಆದಿವಾಸಿಗಳಿಗೆ ವಾಸದ ಮನೆ ನಿರ್ಮಾಣಕ್ಕೆಂದು ಮೀಸಲಿರಿಸಿದ್ದ ಜಾಗದಲ್ಲಿ ಕಂಪನಿಯೊಂದು ಬೇಲಿ ಹಾಕುತಿದ್ದು, ಅದನ್ನು ಕೂಡಲೇ ತೆರವು ಗೊಳಿಸುವಂತೆ ಆಗ್ರಹಿಸಿ ಆದಿವಾಸಿ ಸಂಘರ್ಷ ಮೋರ್ಚಾ ವತಿಯಿಂದ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿ ತಹಸೀಲ್ದಾರ್ ರಾಮಚಂದ್ರ ಅವರಿಗೆ ಮನವಿ ಸಲ್ಲಿಸಲಾಯಿತು.

ಸಂಘಟನೆಯ ಮುಖಂಡ ಎಂ.ಕೆ.ಮೋಹನ್ ಮಾತನಾಡಿ, ಮಣಿಪುರದಲ್ಲಿ ಬುಡಕಟ್ಟು ಆದಿವಾಸಿಗಳ ವಿರುದ್ಧ ಹೆಚ್ಚುತ್ತಿರುವ ದೌರ್ಜನ್ಯಗಳನ್ನು ನಿಲ್ಲಿಸಲು–ಆದಿವಾಸಿಗಳನ್ನು ರಕ್ಷಿಸಲು ಕೇಂದ್ರ ಸರಕಾರ ವಿಫಲವಾಗಿದೆ ಎಂದು ದೂರಿ ತಾಲೂಕಿನ ಕೆದಮುಳ್ಳೂರು ಪಂಚಾಯಿತಿಯ ಬಾರಿ ಕಾಡುವಿನಲ್ಲಿ ಸರಕಾರ ಆದಿವಾಸಿ ಬಡ ಕಾರ್ಮಿಕರಿಗೆಂದು ಮನೆ ನಿರ್ಮಾಣ ಮಾಡಲು ಕಾದಿರಿಸಿದ್ದ ಜಾಗದಲ್ಲಿ ಉಳ್ಳವರೆ ಜಾಗವನ್ನು ಕಬಳಿಸುತ್ತಿರುವುದು ಸರಿಯಲ್ಲ ಎಂದರು.

ಕಳೆದ ಆರು ವರ್ಷಗಳಿಂದಲು ಹೋರಾಟ ನಡೆಸುತ್ತಿದ್ದೇವೆ ಆದರೂ ಸಮಸ್ಯೆಗಳು ಬಗೆಹರಿದಿಲ್ಲ. ಕೂಡಲೇ ಸಂಬಂದಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಆದಿವಾಸಿ ಸಂಘರ್ಷ ಮೋರ್ಚಾದ ಜಿಲ್ಲಾ ಕಾರ್ಯದರ್ಶಿ ಗೌರಿ ಮಾತನಾಡಿ ಬಾರಿ ಕಾಡುವಿನಲ್ಲಿ ಸರಕಾರ ಈಗಾಗಲೇ ಕೆಲವು ಮನೆಗಳನ್ನು ನಿರ್ಮಾಣ ಮಾಡಿದೆ. ಆದರೆ ನಿವಾಸಿಗಳಿಗೆ ಶೌಚಾಲಯಗಳಿಲ್ಲ, ಸೋಲಾರ್ ದೀಪ ಮತ್ತು ಕುಡಿಯುವ ನೀರಿನ ಸೌಲಭ್ಯ ಸೇರಿದಂತೆ ಮೂಲ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಂಘಟನೆಯ ಬೆಂಗಳೂರು ವಕೀಲರಾದ ಮೈತ್ರೀ, ವಿರಾಜಪೇಟೆ ತಾಲೂಕು ಸಂಘಟನೆಯ ರವಿ, ಸುಬ್ಬ, ಮುತ್ತ ಹಾಗೂ ಸದಸ್ಯರು ಭಾಗವಹಿಸಿದ್ದರು.

ಮನವಿ ಸ್ವಿಕರಿಸಿದ ತಹಸೀಲ್ದಾರ್ ಹೆಚ್.ಎನ್.ರಾಮಚಂದ್ರ ಅವರು ಮಾತನಾಡಿ ಈ ಸಂಬಂಧ ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳುವುದಾಗಿ ಪ್ರತಿಭಟನಾನಿರತರಿಗೆ ತಿಳಿಸಿದರು. ಇದಕ್ಕೂ ಮೊದಲು ಪ್ರತಿಭಟನಕಾರರು ತಾಲೂಕು ಮೈದಾನದಿಂದ ತಾಲೂಕು ಕಚೇರಿ ವರೆಗೆ ಮೆರವಣಿಗೆ ನಡೆಸಿದರು.

## ಆ.15, ಚಾ.ನಗರದಲ್ಲಿ 77ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ



ಚಾಮರಾಜನಗರ, ಆ.10– ಜಿಲ್ಲಾಡಳಿತದ ವತಿಯಿಂದ 77ನೇ ಸ್ವಾತಂತ್ರೋತ್ಸವ ದಿನಾಚರಣೆ ಕಾರ್ಯಕ್ರಮವನ್ನು ಆಗಸ್ಟ್ 15ರಂದು ಬೆಳಿಗ್ಗೆ 9 ಗಂಟೆಗೆ ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ವೆಂಕಟೇಶ್ ಅವರು ಧ್ವಜಾರೋಹಣ ನೇರವೇರಿಸಿ, ಸ್ವಾತಂತ್ರೋತ್ಸವದ ಸಂದೇಶ ನೀಡುವರು. ಶಾಸಕರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಧ್ಯಕ್ಷತೆ ವಹಿಸುವರು.

ಲೋಕಸಭಾ ಸದಸ್ಯ ವಿ. ಶ್ರೀನಿವಾಸಪ್ರಸಾದ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಹೆಚ್.ಎಂ. ಗಣೇಶ್ ಪ್ರಸಾದ್, ಮರಿತಿಬ್ಬೇಗೌಡ, ಸಿ.ಎನ್. ಮಂಜೇಗೌಡ, ಡಾ. ಡಿ. ತಿಮ್ಮಯ್ಯ, ಮಧು. ಜಿ. ಮಾದೇಗೌಡ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

# ಬಿ.ರಾಚಯ್ಯ ಅವರಿಗೆ ಜನ ಕಲ್ಯಾಣವೇ ಧ್ಯೇಯ

### ಚಾ.ನಗರದಲ್ಲಿ ಬಿ. ರಾಚಯ್ಯನವರ ಅರ್ಥಪೂರ್ಣ ಜನ್ಮ ದಿನಾಚರಣೆ



ಚಾಮರಾಜನಗರ, ಆ.10– ಮಾಜಿ ರಾಜ್ಯಪಾಲರಾದ ಬಿ. ರಾಚಯ್ಯ ಅವರಿಗೆ ಜನ ಕಲ್ಯಾಣವೇ ಧ್ಯೇಯವಾಗಿತ್ತು ಎಂದು ಮೈಸೂರು ವಿಶ್ವ ವಿದ್ಯಾಲಯದ ಗಾಂಧಿ ಅಧ್ಯಯನ ಕೇಂದ್ರದ ಮಾಜಿ ನಿರ್ದೇಶಕ ಪ್ರೊ.ಎಸ್. ಶಿವರಾಜಪ್ಪ ಅಭಿಪ್ರಾಯಪಟ್ಟರು.

ನಗರದ ಡಾ.ರಾಜ್‌ಕುಮಾರ್ ಕಲಾ ಮಂದಿರದಲ್ಲಿ ಗುರುವಾರ ಬಿ. ರಾಚಯ್ಯ ಪ್ರತಿಷ್ಠಾನ ಆಯೋಜಿಸಿದ್ದ ಬಿ. ರಾಚಯ್ಯ ಅವರ 101ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಿ.ರಾಚಯ್ಯ ಅವರು ಸುಧೀರ್ಘವಾಗಿ ರಾಜಕಾರಣದಲ್ಲಿ ಇದ್ದರೂ ಸಹ ಅಂದು ಸ್ವಂತಕ್ಕೆ ಏನೂ ಮಾಡಿಕೊಳ್ಳಲಿಲ್ಲ. ಅವರು ಎಲ್ಲಾ ಶ್ರಮವನ್ನು ಜನರ ಕಲ್ಯಾಣಕ್ಕೆ ಮುಡಿಪಾಗಿಟ್ಟಿದ್ದರು. ಬಿ. ರಾಚಯ್ಯ ಅವರಿಗೆ ಆತ್ಮ ಕಲ್ಯಾಣದೊಂದಿಗೆ ಜನ ಕಲ್ಯಾಣವೇ ಅವರ ಧ್ಯೇಯವಾಗಿತ್ತು ಎಂದರೆ ತಪ್ಪಾಗಲಾರದು ಎಂದರು.

ಬಿ. ರಾಚಯ್ಯ ಅವರ ಚಿಂತನೆ, ಪರಿಶ್ರಮ, ಸಾಧನೆ, ಅವರು ಮಾಡುವ ಅಭಿವೃದ್ಧಿ ಕೆಲಸಗಳು ಈಗ ಸದ್ದು ಮಾಡುತ್ತಿವೆ. ಅವರು ಅಧಿಕಾರ ಇದೆ ಎಂದು ಬೀಗುತ್ತಿರಲಿಲ್ಲ. ಅಹಂಕಾರ ಇರಲಿಲ್ಲ. ಪ್ರತಿಯೊಬ್ಬರನ್ನು ಕೂರಿಸಿಕೊಂಡೇ ಮಾತನಾಡುತ್ತಿದ್ದರು. ತ್ಯಾಗ, ಸೇವೆ, ಸಹಬಾಳ್ವೆ, ಸಾಮರಸ್ಯ ಅವರ ಬದುಕಿನ ಉದ್ದಕ್ಕೂ ಇತ್ತು. ಅವರ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ. ಇದನ್ನು ಅವರ ಪುತ್ರರಾದ ಎ.ಆರ್. ಕೃಷ್ಣಮೂರ್ತಿ ಹಾಗೂ ಬಾಲರಾಜು ಮುಂದುವರಿಸುತ್ತಿದ್ದಾರೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ವಿಧಾನ ಪರಿಷತ್ ಮಾಜಿ ಸಭಾಪತಿ ಎ.ಆರ್. ಸುದರ್ಶನ್ ಮಾತನಾಡಿ, ಬಿ. ರಾಚಯ್ಯ ಅವರು ಮುಖ್ಯಮಂತ್ರಿ ಮತ್ತು ಹಣಕಾಸು ಇಲಾಖೆಯನ್ನು ಹೊರತುಪಡಿಸಿ ಇನ್ನೆಲ್ಲಾ ಇಲಾಖೆಯ ಜವಾಬ್ದಾರಿಯನ್ನು ಹೊತ್ತು ಉತ್ತಮವಾಗಿ ಕೆಲಸ ನಿರ್ವಹಿಸಿದ್ದರು. ಅವರು ರಾಜ್ಯಪಾಲರಾಗಿಯೂ ಕೆಲಸ ಮಾಡಿದ್ದಾರೆ ಎಂಬುದು ನಮ್ಮೆಲ್ಲರ ಹೆಗ್ಗಳಿಕೆ ಆಗಿದೆ ಎಂದರು.

ಬಿ. ರಾಚಯ್ಯ ಅವರು ಶೋಷಿತರು ಹಾಗೂ ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಜಿಲ್ಲೆಯಲ್ಲಿ ಆ ಕೆಲಸದಲ್ಲಿಯೇ ಎರಡು ಸೇತುವೆಗಳನ್ನು ನಿರ್ಮಿಸುವುದರ ಜೊತೆಗೆ 16 ಗ್ರಾಮಗಳನ್ನು ನಿರ್ಮಾಣ ಮಾಡಿದ್ದಾರೆ. ಇದು ಅವರಿಗಿದ್ದ ಬದ್ಧತೆಯನ್ನು ತೋರಿಸುತ್ತದೆ. ಚಾಮರಾಜನಗರ ಜಿಲ್ಲೆ ಹಾಗೂ ರಾಜ್ಯದ ಅಭಿವೃದ್ಧಿಯಲ್ಲಿ ರಾಚಯ್ಯ ಅವರ ಕೊಡುಗೆ ಇದ್ದೆ ಇದೆ ಎಂದರು.


ಬಿ.ರಾಚಯ್ಯ ಅವರು ಸಚಿವರಾಗಿ, ಶಾಸಕರಾಗಿ, ರಾಜ್ಯಪಾಲರಾಗಿ ಉತ್ತಮವಾಗಿ ಕೆಲಸ ನಿರ್ವಹಿಸಿದ್ದಾರೆ. ಅವರ ಸಾಧನೆ ಅಪಾರವಾಗಿದೆ. ಅಂತಹವರಿಗೆ ಮುಖ್ಯಮಂತ್ರಿ ಆಗುವ ಅವಕಾಶ ದೊರೆಯಲಿಲ್ಲ. ಅವರೊಬ್ಬ ಅಪರೂಪದ ರಾಜಕಾರಣಿ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬಿ.ರಾಚಯ್ಯ ಅವರ ಪುತ್ರರೂ ಆದ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ನಮ್ಮ ತಂದೆಗೆ ಗೌರವ ಕೊಡುವ ಉದ್ದೇಶದಿಂದ ಮೌಲ್ಯಯುತ ರಾಜಕಾರಣವನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಈಗಿನ ರಾಜಕಾರಣವೇ ಬೇರೆ. ಬಿ.ರಾಚಯ್ಯ ಅವರ ಕಾಲದಲ್ಲಿ ಇದ್ದ ರಾಜಕಾರಣವೇ ಬೇರೆ. ಸಾಕಷ್ಟು ವ್ಯತ್ಯಾಸಗಳಿವೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ಎಸ್. ಜಯಣ್ಣ ಆರ್. ನರೇಂದ್ರ, ಜಿ.ಎನ್. ನಂಜುಂಡಸ್ವಾಮಿ, ಮಾಜಿ ಸಂಸದರಾದ ಎಂ.ಶಿವಣ್ಣ, ಎ. ಸಿದ್ದರಾಜು, ನಗರಸಭೆ ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ, ಬಿ. ರಾಚಯ್ಯ ಪ್ರತಿಷ್ಠಾನದ ಕಾರ್ಯದರ್ಶಿ ಆರ್. ಬಾಲರಾಜು, ಚಾಮುಲ್ ನಿರ್ದೇಶಕ ನಂಜುಂಡಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಶಿವಕುಮಾರ್, ಕೇತಮ್ಮ ಯೋಗೇಶ್, ಕೊಪ್ಪಾಳಿ ಮಹದೇವನಾಯಕ, ಮುಖಂಡರಾದ ಪಿ. ಮರಿಸ್ವಾಮಿ, ಬಿ.ಕೆ. ರವಿಕುಮಾರ್, ಹೊಂಗನೂರು ಚಂದ್ರು, ಎ.ಎಸ್. ಗುರುಸ್ವಾಮಿ, ಲಕ್ಷ್ಮಿನರಸಿಂಹ, ಭಾಗ್ಯಮ್ಮ, ಪ್ರೊ. ನಂಜಯ್ಯ ಇತರರು ಇದ್ದರು. ಇದೇ ವೇಳೆ ಜಾನಪದ ಗಾಯಕ ಡಾ. ಮಳವಳ್ಳಿ ಮಹದೇವಸ್ವಾಮಿ ಅವರನ್ನು ಗೌರವಿಸಲಾಯಿತು. ಈ ವೇಳೆ ಅವರು ಇತ್ತೀಚೆಗೆ ವ್ಯಾಪಕವಾಗಿ ವೈರಲ್ ಆದ ಅನ್ಯಾಯಕಾರಿ ಬ್ರಹ್ಮ ಸುಂದರನಾ... ಹಾಡನ್ನು ಹಾಡಿದರು.

## ಆಲೂರಿನ ಚಿರಶಾಂತಿ ಧಾಮದಲ್ಲಿ ರಾಚಯ್ಯನವರ ಜನ್ಮ ದಿನಾಚರಣೆ

### ವಿ.ಆರ್. ಸುದರ್ಶನ್‌ರಿಂದ ಪುಷ್ಪ ನಮನ



ಚಾಮರಾಜನಗರ, ಆ.10– ಮಾಜಿ ರಾಜ್ಯಪಾಲರಾದ ದಿ. ಬಿ. ರಾಚಯ್ಯನವರ 101ನೇ ಜನ್ಮ ದಿನಾಚರಣೆಯನ್ನು ಬಿ. ರಾಚಯ್ಯನವರ ಪ್ರತಿಷ್ಠಾನದಿಂದ ತಾಲೂಕಿನ ಆಲೂರು ಗ್ರಾಮದ ಚಿರಶಾಂತಿ ಧಾಮದಲ್ಲಿ ಪೂಜೆ ಸಲ್ಲಿಸಲಾಯಿತು.

ಬೆಳಗ್ಗೆ ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್. ಸುದರ್ಶನ್ ಅವರು ರಾಚಯ್ಯ ಅವರು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ಬಳಿಕ ಆಲೂರಿನ ಚಿರಶಾಂತಿಧಾಮದಲ್ಲಿ ರಾಚಯ್ಯನವರ ಪುತ್ರರಾದ ಶಾಸಕ ಎ.ಆರ್.ಕೃಷ್ಣಮೂರ್ತಿ, ಜಿ.ಪಂ. ಮಾಜಿ ಸದಸ್ಯ ಆರ್. ಬಾಲರಾಜು ಹಾಗೂ ಕುಟುಂಬಸ್ಥರು ಪೂಜಾ ಕಾರ್ಯಕ್ರಮ ನೆರವೇರಿಸಿದರು. ಆಲೂರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಆಗಮಿಸಿದರು. ಅನ್ನಸಂತರ್ಪಣೆ ನಡೆಯಿತು. ಈ ಸಂದರ್ಭದಲ್ಲಿ ಎಪಿಎಂಸಿ ನಿರ್ದೇಶಕ ಆಲೂರು ಪ್ರದೀಪ್, ತಾ.ಪಂ. ಮಾಜಿ ಅಧ್ಯಕ್ಷ ಆರ್. ಮಹದೇವ್, ಮುಖಂಡರಾದ ಕಂದಹಳ್ಳಿ ನಂಜುಂಡಸ್ವಾಮಿ, ಆಲೂರು ಪ್ರವೀಣ್, ಚಿನ್ನಮುತ್ತು, ಗ್ರಾಪಂ ಮಾಜಿ ಅಧ್ಯಕ್ಷ ಮಹ ದೇವಯ್ಯ, ಎ.ಎಸ್. ಮಲ್ಲಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ತೋಟೇಶ್, ಹೊಂಗನೂರು ಚಂದ್ರು, ಅರಕಲವಾಡಿ ಗುರುಸ್ವಾಮಿ, ಕುಮರವಾಡಿ ರೇವಣ್ಣ, ಆಲೂರು ಬಾಬು ಹೊಂಗನೂರು ಪುಟ್ಟಸ್ವಾಮಿ, ಸಾಹಿತಿಗಳಾದ ಸೋಮಶೇಖರ ಬಿಸಲ್ವಾಡಿ, ಎಸ್. ಲಕ್ಷ್ಮಿನರಸಿಂಹ, ಸಿ. ಮಹದೇವ್, ಮಂಜುಳಾ ಕೃಷ್ಣಮೂರ್ತಿ, ಶ್ರೀವರ್ಧನ್, ಹೊಂಗನೂರು ಚೇತನ್ ಇತರರು ಇದ್ದರು.

# ಚಿನ್ನ, ನಗದು ಕಳವು ಮಾಡಿದ್ದವನ ಬಂಧನ

### ಘಟನೆ ನಡೆದ 14 ದಿನಗಳಲ್ಲೇ ಆರೋಪಿ ಸೆರೆ



ಹನೂರು, ಆ.10– ತಾಲೂಕಿನ ನಾಲ್ ರೋಡ್ ಗ್ರಾಮದ ಚಿನ್ನಮ್ಮ ಅವರ ಮನೆಯಲ್ಲಿ ಚಿನ್ನ ಹಾಗೂ ನಗದು ಕಳ್ಳತನ ಮಾಡಿದ್ದ ಆರೋಪಿಯನ್ನು ರಾಮಪುರ ಪೊಲೀಸರು ಬಂಧಿಸಿದ್ದಾರೆ. ತಾಲೂಕಿನ ನಾಲ್ ರೋಡ್ ಗ್ರಾಮದ ಕುಮಾರ್ (37) ಬಂಧಿತ ಆರೋಪಿ.

ನಾಲ್ ರೋಡ್ ಗ್ರಾಮದ ಚಿನ್ನಮ್ಮ ಜು.23 ರಂದು ತಮಿಳುನಾಡಿಗೆ ಕಾರ್ಯನಿಮಿತ್ತ ತೆರಳಿದ್ದರು. ಜು.27ರಂದು ಗ್ರಾಮಕ್ಕೆ ಆಗಮಿಸಿದಾಗ ಮನೆಯಲ್ಲಿ ಚಿನ್ನ ಹಾಗೂ ನಗದು ಕಳುವಾಗಿರುವುದು ತಿಳಿದು, ಅದೇ ದಿನ ರಾಮಪುರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೋ ಹಾಗೂ ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್ಪಿ ಸೋಮೇಗೌಡ ಅವರ ಮಾರ್ಗದರ್ಶನದಲ್ಲಿ ರಾಮಪುರ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಸಂತೋಷ್ ಕಶ್ಯಪ್ ನೇತೃತ್ವದಲ್ಲಿ ವಿಶೇಷ ತಂಡ ರಚನೆ ಮಾಡಲಾಗಿತ್ತು.

ಆ.10ರಂದು ಪರಾರಿಯಾಗಿದ್ದ ಕಳ್ಳನನ್ನು ಬಂಧಿಸಿ ಬಂಧಿತನಿಂದ 150 ಗ್ರಾಂ ಚಿನ್ನ ಹಾಗೂ ಆರು ಲಕ್ಷ ರೂ. ನಗದನ್ನು ವಶಪಡಿಸಿಕೊಂಡು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣ ನಡೆದ 14 ದಿನಗಳಲ್ಲಿ ಆರೋಪಿಯನ್ನು ಬಂಧಿಸಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಕಾರ್ಯಾಚರಣೆಯಲ್ಲಿ ರಾಮಪುರ ಪಿಎಸ್‌ಐ ರಾಧಾ, ಎಎಸ್‌ಐ ಗುರುಸ್ವಾಮಿ, ಅಪರಾಧ ವಿಭಾಗದ ಮುಖ್ಯಪೇದೆಗಳಾದ ಸಿದ್ದೇಶ್ ಕುಮಾರ್, ನಾಗೇಂದ್ರ, ಗಿರೀಶ್, ಮಂಜು ಲಿಯಾಖತ್ ಅಲಿ ಖಾನ್, ಪರಶುರಾಮ್ ಪೇದೆಗಳಾದ ಮಹೇಂದ್ರ ಬಿರಾದಾರ್ ಪಾಲ್ಗೊಂಡಿದ್ದರು.

## ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಆ.10– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಆ.12ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ದೊಡ್ಡರಾಯಪೇಟೆ ಮತ್ತು ಚಂದಕವಾಡಿ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಚಾಮರಾಜನಗರ ಟೌನ್–1, ಕೋಡಿಮೋಳೆ, ರಾಮಸಮುದ್ರ, ಮಾದಾಪುರ, ಕಾಗಲವಾಡಿ, ಸೋಮವಾರಪೇಟೆ ಟೌನ್–2, ಹರದನಹಳ್ಳಿ, ಬೇಡರಪುರ, ಟಿ.ಕೆ ಮೋಳೆ, ಶಿವಪುರ, ಗೂಳಿಪುರ ಎನ್.ಜೆ.ವೈ ಹಾಗೂ ಹಿರಿಕೆರೆ, ಕಾಳಿಕಾಂಬ ಕಾಲೋನಿ, ಚಂದಕವಾಡಿ, ರೇಚಂಬಳ್ಳಿ, ಮಲ್ಲೇದೇವನಹಳ್ಳಿ, ನವೋದಯ, ಹೊಂಡರಬಾಳು, ಜ್ಯೋತಿಗೌಡನಪುರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಹಾನಿಗೀಡಾದ ಮನೆ, ಶಾಲೆ ಅಂಗನವಾಡಿ ಕಟ್ಟಡಗಳ ಶೀಘ್ರ ದುರಸ್ತಿಗೆ ಡಿಸಿ ಸೂಚನೆ



ಚಾಮರಾಜನಗರ, ಆ.10– ಪ್ರಕೃತಿ ವಿಕೋಪದಿಂದ ಹಾನಿಯಾಗಿರುವ ಮನೆ, ಶಾಲೆ, ಅಂಗನವಾಡಿ ಕೊಠಡಿಗಳ ದುರಸ್ತಿ ನಿರ್ಮಾಣ ಕಾರ್ಯವನ್ನು ಶೀಘ್ರ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪಾನಾಗ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ರಾಜ್ಯ ವಿಪತ್ತು ಸ್ಪಂದನ ನಿಧಿ ಅನುದಾನದಡಿ ಈಗಾಗಲೇ ಆರ್ಥಿಕ ನೆರವು ನೀಡಿರುವ ಮನೆಗಳ ದುರಸ್ತಿ ನಿರ್ಮಾಣ ಕಾರ್ಯವನ್ನು ಶೀಘ್ರವಾಗಿ ಪೂರ್ಣ ಮಾಡಬೇಕು. ಶಿಥಿಲವಾಗಿರುವ ಅಂಗನವಾಡಿ, ಶಾಲೆ ಕೊಠಡಿಗಳನ್ನೂ ಕೂಡಲೇ ದುರಸ್ತಿ ಮಾಡಬೇಕು. ಈಗಾಗಲೇ ನೀಡಿರುವ ಪಟ್ಟಿ ಹಾಗೂ ಬಿಡುಗಡೆ ಯಾಗಿರುವ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿ ಕೈಗೊಂಡಿರಬೇಕು. ಯಾವುದೇ ಕೆಲಸವನ್ನು ಬಾಕಿ ಉಳಿಸಿ ಕೊಳ್ಳದೇ ನಿಗದಿತ ಅವಧಿಯೊಳಗೆ ಮುಗಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿಪಂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಎಸ್. ಪೂವಿತಾ ಅವರು ಮಾತನಾಡಿ, ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯನ್ನು ತಾಲೂಕು ಹಂತದಲ್ಲಿಯೂ ಕರೆಯಬೇಕು. ಇದರಿಂದ ಪ್ರಕೃತಿ ವಿಕೋಪಗಳನ್ನು ಪರಿಣಾಮಕಾರಿಯಾಗಿ ತಡೆಯಲು, ಮುನ್ನೆಚ್ಚರಿಕೆ ವಹಿಸಲು ಸಹಾಯಕವಾಗಲಿದೆ. ಸಮಸ್ಯೆಗಳು ಉಲ್ಬಣಿಸದಂತೆ ನೋಡಿ ಕೊಳ್ಳಲು ಅನುಕೂಲವಾಗುತ್ತದೆ ಎಂದರು. ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಮಹೇಶ್, ತಹಸೀಲ್ದಾರರು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಸಹಾಯಧನಕ್ಕೆ ಅರ್ಜಿ ಆಹ್ವಾನ

ಮೈಸೂರು,ಆ.10– ಮೀನುಗಾರಿಕೆ ಇಲಾಖೆಯ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ.40 ರಷ್ಟು ಸಹಾಯ ಧನ ಮತ್ತು ಪರಿಶಿಷ್ಟ ಜಾತಿ, ಪಂಗಡ ಹಾಗೂ ಮಹಿಳಾ ಫಲಾನುಭವಿಗಳಿಗೆ ಘಟಕ ವೆಚ್ಚದ ಶೇ.60 ರಷ್ಟು ಸಹಾಯಧನ ನೀಡಲಾಗುವುದು.

ಅರ್ಜಿ ನಮೂನೆಯನ್ನು ಸಂಬಂಧಿಸಿದ ತಾಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗಳಿಂದ ಪಡೆದು ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಆಗಸ್ಟ್ 22ರೊಳಗೆ ಕಛೇರಿಯ ವೇಳೆಯಲ್ಲಿ ಸಂಬಂಧಪಟ್ಟ ತಾಲೂಕು ಮಟ್ಟದ ಮೀನುಗಾರಿಕೆ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೀನುಗಾರಿಕೆ ಉಪನಿರ್ದೇಶಕರು, ಮೈಸೂರು ಜಿಲ್ಲೆ, ದೂ.ಸಂ: 9448425462, ಮೀನುಗಾರಿಕೆ ಸಹಾಯಕ ನಿರ್ದೇಶಕರು ಮೈಸೂರು, ದೂ.ಸಂ: 9448273093, ಮೀನುಗಾರಿಕೆ ಸಹಾಯಕ ನಿರ್ದೇಶಕರು ಟಿ.ನರಸೀಪುರ, ದೂ.ಸಂ: 9164562927, ಮೀನುಗಾರಿಕೆ ಸಹಾಯಕ ನಿರ್ದೇಶಕರು ನಂಜನಗೂಡು, ದೂ.ಸಂ: 9731357199, ಮೀನುಗಾರಿಕೆ ಸಹಾಯಕ ನಿರ್ದೇಶಕರು ಹೆಚ್.ಡಿ.ಕೋಟೆ, ದೂ.ಸಂ: 9448502697, ಮೀನುಗಾರಿಕೆ ಸಹಾಯಕ ನಿರ್ದೇಶಕರು, ಪಿರಿಯಾಪಟ್ಟಣ, ದೂ.ಸಂ: 7019596308, ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹುಣಸೂರು, ದೂ.ಸಂ: 6362269792, ಮೀನುಗಾರಿಕೆ ಸಹಾಯಕ ನಿರ್ದೇಶಕರು ಕೆ.ಆರ್.ನಗರ, ದೂ.ಸಂ:7829028415 ಇವರನ್ನು ಸಂಪರ್ಕಿಸಬಹುದಾಗಿದೆ ಎಂದು ಮೈಸೂರು ಜಿಲ್ಲೆ ಮೀನುಗಾರಿಕೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಒಂದನೇ ಪುಟದಿಂದ

## ವಿಶ್ವಾಸಮತ ಗೆದ್ದ ಮೋದಿ

ಪ್ರಧಾನಿ ಮೋದಿ ಅವರು, ಪ್ರತಿಪಕ್ಷಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಈ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ಪ್ರತಿಪಕ್ಷಗಳ ಸದಸ್ಯರು ಮಣಿಪುರ, ಮಣಿಪುರ ಎಂದು ಘೋಷಣೆ ಕೂಗುತ್ತಾ ಕಲಾಪದಿಂದ ಹೊರನಡೆದರು. ಅವರು ಮಾತನಾಡಲು ಬಯಸುತ್ತಾರೆ. ಆದರೆ ಕೇಳಲು ಬಯಸುವುದಿಲ್ಲ. ಪ್ರತಿಪಕ್ಷಗಳು ಮಣಿಪುರದ ಬಗ್ಗೆ ಚರ್ಚಿಸಲು ಆಸಕ್ತಿ ಹೊಂದಿದ್ದರೆ, ನಾವು ಪ್ರತ್ಯೇಕವಾಗಿ ವಿವರವಾದ ಚರ್ಚೆ ನಡೆಸಬಹುದಿತ್ತು ಎಂದು ಮೋದಿ ಹೇಳಿದರು. ಪ್ರತಿಪಕ್ಷಗಳು ಜುಲೈ 26 ರಂದು ಮೋದಿ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದ್ದು, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಅದನ್ನು ಅಂಗೀಕರಿಸಿ, ಚರ್ಚೆಗೆ ಅವಕಾಶ ನೀಡಿದ್ದರು. ಮೋದಿಯವರು ಅವಿಶ್ವಾಸ ನಿರ್ಣಯವನ್ನು ಎದುರಿಸುತ್ತಿರುವುದು ಇದು ಎರಡನೇ ಬಾರಿ.

## ಹಳೆ ಕಟ್ಟಡದ ಮೇಲಿನ ಪ್ಲಾಸ್ಟರ್ ಇದ್ದಂತೆ

ಎಂದು ಪ್ರಧಾನಿ ಮೋದಿ ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು. ಕೇವಲ ಪಕ್ಷದ ಬಗ್ಗೆ ಯೋಚಿಸುತ್ತಾರೆ, ದೇಶದ ಬಗ್ಗೆ ಯೋಚಿ ಸಲ್ಲ. ದೇಶಕ್ಕೆ ಜೈಕಾರ ಹಾಕೋದನ್ನು ಇವರು ಸಹಿಸುವುದಿಲ್ಲ. ನಾಲ್ಕು ದಿಕ್ಕುಗಳಲ್ಲೂ ದೇಶದ ಬಗ್ಗೆ ಜೈಕಾರ ಹಾಕುತ್ತಿದ್ದಾರೆ. ಆದರೆ ವಿಪಕ್ಷ ಸದಸ್ಯರು ಕಪ್ಪು ಬಟ್ಟೆ ಧರಿಸಿ ಸಂಸತ್‌ಗೆ ಆಗಮಿಸಿದ್ದಾರೆ ಎಂದರು. 2028ರಲ್ಲೂ ನನ್ನ ವಿರುದ್ಧ ಮತ್ತೊಂದು ಅವಿಶ್ವಾಸ ನಿರ್ಣಯ ಮಂಡಿಸುತ್ತಾರೆ ಎಂದು ಪ್ರತಿಪಕ್ಷಗಳ ಅವಿಶ್ವಾಸ ನಿರ್ಣಯದ ಬಗ್ಗೆ ಪ್ರಧಾನಿ ಮೋದಿ ವ್ಯಂಗ್ಯವಾಡಿದರು. ಈ ವೇಳೆ ಪ್ರತಿಪಕ್ಷಗಳ ಸದಸ್ಯರು ಮಣಿಪುರ ಹಿಂಸಾಚಾರದ ಬಗ್ಗೆ ಮಾತನಾಡುವಂತೆ ಒತ್ತಾಯಿಸಿ, ಮಣಿಪುರ, ಮಣಿಪುರ ಎಂದು ಘೋಷಣೆ ಕೂಗಿದರು. ಪ್ರತಿಪಕ್ಷಗಳ ಘೋಷಣೆಗಳ ನಡುವೆಯೇ ಮಾತು ಮುಂದುವರೆಸಿದ ಮೋದಿ, ನಮ್ಮ ಗಮನವು ದೇಶದ ಅಭಿವೃದ್ಧಿಯತ್ತ ಇರಬೇಕು. ಇದು ಇಂದಿನ ಅಗತ್ಯವಾಗಿದೆ. ನಮ್ಮ ಯುವಕರು ಕನಸುಗಳನ್ನು ನನಸಾಗಿಸುವ ಶಕ್ತಿ ಹೊಂದಿದ್ದಾರೆ. ನಾವು ಭ್ರಷ್ಟಾಚಾರ ಮುಕ್ತ ಸರ್ಕಾರ, ದೇಶದ ಯುವಕರಿಗೆ ಅವಕಾಶಗಳು ಮತ್ತು ಆಕಾಂಕ್ಷೆಗಳನ್ನು ನೀಡಿದ್ದೇವೆ ಎಂದರು. ನಾವು ಭಾರತದ ಕೀರ್ತಿಯನ್ನು ಎತ್ತರಕ್ಕೆ ಕೊಂಡೊಯ್ದಿದ್ದೇವೆ. ಆದರೆ ಜಗತ್ತಿನಲ್ಲಿ ನಮ್ಮ ದೇಶದ ಘನತೆಗೆ ಕಳಂಕ ತರಲು ಕೆಲವರು ಪ್ರಯತ್ನಿಸುತ್ತಿದ್ದಾರೆ. ಇಂದು ಭಾರತದ ಮೇಲೆ ವಿಶ್ವದ ನಂಬಿಕೆ ಹೆಚ್ಚುತ್ತಿದೆ ಎಂದು ಹೇಳಿದ್ದಾರೆ.

## ಅಧೀರ್ ರಂಜನ್ ಚೌಧರಿ ಅಮಾನತು!

ಅನುಮೋದನೆ ನೀಡಲಾಗಿದೆ. ಅಧೀರ್ ರಂಜನ್ ಚೌಧರಿ ಅವರು ಸಂಸತ್ತಿನ ಕಲಾಪದಲ್ಲಿ ನಿರಂತರವಾಗಿ ಅಡ್ಡಿಪಡಿಸುತ್ತಿದ್ದಾರೆ. ಅಲ್ಲದೆ ದೇಶದ ಇಮೇಜ್‌ಗೆ ಅಪಖ್ಯಾತಿ ತಂದಿದ್ದಾರೆ ಎಂದು ಪ್ರಹ್ಲಾದ್ ಜೋಶಿ ತಮ್ಮ ನಿರ್ಣಯದಲ್ಲಿ ಆರೋಪಿಸಿದರು. ಸವಲತ್ತುಗಳ ಸಮಿತಿಯು ಈ ವಿಷಯದ ಬಗ್ಗೆ ತನ್ನ ವರದಿಯನ್ನು ಸಲ್ಲಿಸುವವರೆಗೆ ಅವರನ್ನು ಅಮಾನತುಗೊಳಿಸಲಾಗುತ್ತದೆ.

ಪ್ರಸ್ತಾವನೆಯನ್ನು ಮಂಡಿಸಿದ ಸಂಸದೀಯ ವ್ಯವಹಾರಗಳ ಸಚಿವರು, ಇದು ಅಭ್ಯಾಸವಾಗಿ ಹೋಗಿದೆ. ಪದೇ ಪದೆ ಎಚ್ಚರಿಕೆ ನೀಡಿದರೂ ಅವರು ತಮ್ಮನ್ನು ತಾವು ಸುಧಾರಿಸಿಕೊಳ್ಳಲಿಲ್ಲ. ಅವರು ಯಾವಾಗಲೂ ತಮ್ಮ ಚರ್ಚೆಗಳಲ್ಲಿ ಆಧಾರರಹಿತ ಆರೋಪಗಳನ್ನು ಮಾಡುತ್ತಾರೆ. ಅವರು ದೇಶ ಮತ್ತು ಅದರ ಚಿತ್ರಣವನ್ನು ಅವಮಾನಿಸುತ್ತಾರೆ. ಅಲ್ಲದೆ ಎಂದಿಗೂ ಕ್ಷಮೆ ಕೇಳುವುದಿಲ್ಲ ಎಂದರು. ಬುಧವಾರ ಲೋಕಸಭೆಯಲ್ಲಿ ಗೃಹ ಸಚಿವ ಅಮಿತ್ ಶಾ ಮಾತನಾಡುತ್ತಿದ್ದಾಗಲೂ ಚೌಧರಿ ಇದೇ ರೀತಿ ವರ್ತಿಸಿದ್ದರು ಎಂದು ಸಚಿವರು ಹೇಳಿದ್ದಾರೆ. ಜೋಶಿ ನಂತರ ಅಧೀರ್ ಅವರ ಪ್ರಕರಣವನ್ನು ವಿಶೇಷಾಧಿಕಾರಗಳ ಸಮಿತಿಗೆ ಉಲ್ಲೇಖಿಸುವ ಪ್ರಸ್ತಾಪವನ್ನು ಮಂಡಿಸಿದರು. ಸಮಿತಿಯು ತನ್ನ ವರದಿಯನ್ನು ಸಲ್ಲಿಸುವವರೆಗೆ ಅಧೀರ್ ಅವರನ್ನು ಅಮಾನತುಗೊಳಿಸಬೇಕೆಂದು ಒತ್ತಾಯಿಸಿದರು. ಪ್ರಸ್ತಾವನೆಯನ್ನು ಸಂಸತ್ತು ಅಂಗೀಕರಿಸಿತು.

## ಗತವೈಭವ ಮರುಕಳಿಸಲಿ

ನೀಡುವುದಿಲ್ಲ ಎಂಬ ಮಾಧ್ಯಮದವರ ಪ್ರಶ್ನೆಗೆ, ಮೊದಲು ಬಿಜೆಪಿ ಸರ್ಕಾರವಿತ್ತು. ಈಗ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ. ಕ್ರೀಡಾಪಟುಗಳಿಗೆ ಸೂಕ್ತ ಸಮಯದಲ್ಲಿ ನಗದು ಬಹುಮಾನ ತಲುಪಿಸುತ್ತೇವೆ ಎಂದರು.

**ಪೂರ್ವ ಸಿದ್ಧತೆಯಾಗಬೇಕು:** ಕ್ರೀಡಾ ಇಲಾಖೆ ಆಯುಕ್ತ ಶಶಿಕುಮಾರ್ ಮಾತನಾಡಿ, ತಾಲೂಕು ಮತ್ತು ಜಿಲ್ಲಾ ಮಟ್ಟದಿಂದ ಆಯ್ಕೆಯಾಗಿ ರಾಜ್ಯಮಟ್ಟದ ದಸರಾ ಕ್ರೀಡಾಕೂಟಕ್ಕೆ ಸುಮಾರು 5 ಸಾವಿರ ಸ್ಪರ್ಧಿಗಳು ಆಯ್ಕೆಯಾಗಿ ಬರುವುದರಿಂದ ಎಲ್ಲರಿಗೂ ವಸತಿ ವ್ಯವಸ್ಥೆ ಕಲ್ಪಿಸಲು ಸಿದ್ಧತೆಯಾಗಬೇಕಾಗಿದೆ. ಈ ಕುರಿತು ಜಿಲ್ಲಾಡಳಿತ ನೀಡಿರುವ ಸಲಹೆ ಉತ್ತಮವಾಗಿದೆ ಎಂದರು.

**7 ಕೋಟಿ ರೂ.ಅನುದಾನ ಅವಶ್ಯ:** ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯ್ಕ್ ಮಾತನಾಡಿ, ಕ್ರೀಡಾಪಟುಗಳಿಗೆ ಸುಮಾರು 2500 ರೂಂಗಳು ಬೇಕಾಗುತ್ತದೆ. ಅದಕ್ಕಾಗಿ ಸೂಕ್ತ ಸ್ಥಳಗಳನ್ನು ಗುರ್ತಿಸಲಾಗುವುದು. ಕಳೆದ ಬಾರಿ 5 ಕೋಟಿ ಅನುದಾನ ನೀಡಲಾಗಿತ್ತು. ಸಮವಸ್ತ್ರ, ಊಟದ ವ್ಯವಸ್ಥೆ ಸೇರಿದಂತೆ ವ್ಯವಸ್ಥಿತವಾಗಿ ಕ್ರೀಡಾ ದಸರಾ ನಡೆಸಲು 7 ಕೋಟಿ ಅನುದಾನದ ಅವಶ್ಯವಿದ್ದು, ಪೂರ್ಣ ಪ್ರಮಾಣದಲ್ಲಿ ಅನುದಾನ ನೀಡಬೇಕು ಎಂದು ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಸಚಿವರು, ಅನುದಾನ ಸಂಬಂಧ ಮುಖ್ಯಮಂತ್ರಿಗಳೊಂದಿಗೆ ಮಾತನಾಡಿ ಅಂತಿಮಗೊಳಿಸಲಾಗುವುದು ಎಂದರು.

**ಉಸ್ತುವಾರಿ ಸಚಿವರ ಸಭೆಯಲ್ಲಿ ಚರ್ಚೆ:** ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಮುಂದಿನ ವಾರ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದ್ದು, ಕ್ರೀಡಾ ದಸರಾ ಕುರಿತು ಚರ್ಚಿಸಲಾಗುವುದು. ಪೂರ್ವ ಸಿದ್ಧತೆ ಸೇರಿದಂತೆ ಖರ್ಚುವೆಚ್ಚಗಳ ಪೂರ್ಣ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು. ಶಾಸಕ ಅನಿಲ್ ಚಿಕ್ಕಮಾದು, ಕ್ರೀಡಾ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಗೃಹಲಕ್ಷ್ಮಿ ಯೋಜನೆಗೆ ಚಾಲನೆ

ರಾಜ್ಯದ ನಾನಾ ಕಡೆ ಅನೇಕ ಹೆಣ್ಣು ಮಕ್ಕಳು ಗೃಹಲಕ್ಷ್ಮಿ ಯೋಜನೆಯ ಹಣ ಖಾತೆಗೆ ಬರುವ ದಿನ ಮನೆಯ ಮುಂದೆ ರಂಗೋಲಿ ಹಾಕಿ ಸಂಭ್ರಮ ಆಚರಣೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಪಕ್ಷಾತೀತವಾಗಿ ಎಲ್ಲರೂ ಗೃಹಲಕ್ಷ್ಮಿಯನ್ನು ಆಹ್ವಾನ ಮಾಡಿಕೊಳ್ಳಬೇಕು ಎಂದರು. ಗುತ್ತಿಗೆದಾರರು ದೊಡ್ಡ ಮಟ್ಟದ ಹೋರಾಟಕ್ಕೆ ಸಜ್ಜಾಗಿದ್ದಾರೆ ಎಂಬ ಪತ್ರಕರ್ತರ ಪ್ರಶ್ನೆಗೆ ಅವರಿಗೆ ಆಲ್ ದಿ ಬೆಸ್ಟ್, ಒಳ್ಳೆಯದಾಗಲಿ, ಈ ಹೋರಾಟದ ಹಿಂದೆ ಇರುವವರಿಗೂ ಒಳ್ಳೆಯದಾಗಲಿ. ಆದರೆ ನ್ಯಾಯ ಏನಿದೆಯೊ ಅದರಂತೆ ನಾವು ನಡೆಯಲಿದ್ದೇವೆ ಎಂದು ಉತ್ತರಿಸಿದರು.

## ದೆಹಲಿ ಸ್ವಾತಂತ್ರ್ಯೋತ್ಸವದ ಆಹ್ವಾನಿತ

ಹಾಗೂ ಕೇಂದ್ರ ಸರ್ಕಾರಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು. ಸ್ವಾತಂತ್ರ್ಯೋತ್ಸವದ ಅಂಗವಾಗಿ ಮಂಡ್ಯ ಜಿಲ್ಲೆಯ ರೈತ ವಿರೂಪಾಕ್ಷಪ್ಪ ಅವರನ್ನು ಆಯ್ಕೆ ಮಾಡಿದ್ದಾರೆ. ಇವರನ್ನು ಕಳುಹಿಸಿ ಕೊಡುವಂತೆ ಪ್ರಧಾನಮಂತ್ರಿಗಳ ಕಾರ್ಯಾಲಯದಿಂದ ಸೂಚನೆ ಬಂದಿದೆ. ಹೀಗಾಗಿ ಕೃಷಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ವಿರೂಪಾಕ್ಷಪ್ಪ ಅವರ ಜೊತೆ ಒಬ್ಬ ಅಧಿಕಾರಿಯನ್ನೂ ಕಳುಹಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ಹೇಳಿದರು. ಎ ನಾಗತಿಹಳ್ಳಿ ಗ್ರಾಮದಲ್ಲಿ 4 ಎಕರೆ 10 ಗುಂಟೆ ಜಮೀನು ಹೊಂದಿರುವ ವಿರೂಪಾಕ್ಷಪ್ಪ, ಪೂರ್ಣ ಜಮೀನಿನಲ್ಲಿ ಸಾವಯವ ಕೃಷಿ ಹಾಗೂ ಉನ್ನತ ಸಾಂದ್ರ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಜೊತೆಗೆ ಕೃಷಿ ಬೆಳೆ, ರಾಗಿ, ಜೋಳ ಹಾಗೂ ತೋಟಗಾರಿಕೆ ಬೆಳೆಯನ್ನು ಬೆಳೆಯುತ್ತಿದ್ದಾರೆ.

ಜೊತೆಗೆ ಮಾಡಾಗಲ ಮತ್ತು ಡ್ರಾಗನ್ ಫ್ರೂಟ್ ಗಿಡಗಳನ್ನು ಬೆಳೆದಿದ್ದು, ಏಲಕ್ಕಿ ಬೆಳೆಯನ್ನು ಬೆಳೆದಿದ್ದಾರೆ. ಇನ್ನು 2022ರಲ್ಲಿ ತೋಟಗಾರಿಕೆ ಇಲಾಖೆ, ಕೃಷಿ ಇಲಾಖೆ ಸಹಯೋಗದಲ್ಲಿ ಜಮೀನಿನಲ್ಲಿಯೇ ಪ್ರಾತ್ಯಕ್ಷತೆ ಕೂಡ ನಡೆದಿದೆ. ಸಾವಯವ ಕೃಷಿ ಬಗ್ಗೆ ಆಕಾಶವಾಣಿಯಲ್ಲಿ ಕಾರ್ಯಕ್ರಮ ಸಹಾ ನೀಡಿದ್ದಾರೆ. ಸಾವಿರಾರು ರೈತರು ಇವರ ಜಮೀನಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡಿದ್ದಾರೆ. ಇಷ್ಟೆಲ್ಲ ಸಾಧನೆ ಮಾಡಿರುವ ಇವರ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಮಾಹಿತಿ ಕಳುಹಿಸಿ ಕೊಟ್ಟಿತ್ತು. ಈ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ಕಾರ್ಯಾಲಯ ಇವರನ್ನು ಗುರುತಿಸಿ 77ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮಕ್ಕೆ ಆಹ್ವಾನ ನೀಡಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ನಾಮಮಂಗಲದ ಕೃಷಿ ಅಧಿಕಾರಿ ಯೋಗರಾಜ್ ಅವರಿಗೆ ಇವರನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗಿ ಕರೆದುಕೊಂಡು ಬರುವ ಜವಾಬ್ದಾರಿ ನೀಡಿದೆ.

# ಜೈವಿಕ ಇಂಧನ ಬಳಕೆಗೆ ಗಂಭೀರ ಪ್ರಯತ್ನ ಅಗತ್ಯ

### ಎಸ್‌ಐಆರ್‌ಡಿ ಉಪನಿರ್ದೇಶಕ ಕೆ.ಎಸ್.ಮನೋಜ್ ಕುಮಾರ್ ಅಭಿಮತ



ಮೈಸೂರಿನ ಎನ್‌ಐಇ ಕಾಲೇಜಿನ ಗೋಲ್ಡನ್ ಜ್ಯುಬಿಲಿ ಕಾಂಪ್ಲೆಕ್ಸ್ ಎದುರು ಗುರುವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಜೈವಿಕ ಇಂಧನ ದಿನಾಚರಣೆಯಲ್ಲಿ ಎಸ್‌ಐಆರ್‌ಡಿ ಉಪನಿರ್ದೇಶಕ ಕೆ.ಎಸ್.ಮನೋಜ್ ಕುಮಾರ್ ವಾಹನವೊಂದಕ್ಕೆ ಜೈವಿಕ ಇಂಧನ ತುಂಬಿಸಿದರು.

ಮೈಸೂರು,ಆ.10(ಪಿಎಂ)– ಪ್ರಸ್ತುತ ನಮ್ಮ ಚಟುವಟಿಕೆಗಳಲ್ಲಿ ಸುಸ್ಥಿರತೆ ಕಾಯ್ದುಕೊಳ್ಳಲು ಆದ್ಯತೆ ನೀಡಬೇಕಿದ್ದು, ಅದರಲ್ಲಿ ಜೈವಿಕ ಇಂಧನ ಬಳಕೆ ಕೂಡ ಒಂದಾಗಿದೆ. ಜೈವಿಕ ಇಂಧನ ಹಾಗೂ ಅನಿಲ ಬಳಕೆಗೆ ಗಂಭೀರ ಪ್ರಯತ್ನ ಅತ್ಯಗತ್ಯವಾಗಿದೆ ಎಂದು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ (ಎಸ್‌ಐಆರ್‌ಡಿ) ಉಪನಿರ್ದೇಶಕ (ತರಬೇತಿ) ಕೆ.ಎಸ್. ಮನೋಜ್ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರಿನ ಎನ್‌ಐಇ ಕಾಲೇಜಿನ ಗೋಲ್ಡನ್ ಜ್ಯುಬಿಲಿ ಕಾಂಪ್ಲೆಕ್ಸ್ ಎದುರು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಮೈಸೂರು ಜಿಲ್ಲಾ ಪಂಚಾಯಿತಿ ಹಾಗೂ ಎನ್‌ಐಇ ಕಾಲೇಜಿನ ನವೀಕರಿಸಬಹುದಾದ ಶಕ್ತಿ ಹಾಗೂ ಸುಸ್ಥಿರ ತಂತ್ರಜ್ಞಾನಗಳ ಕೇಂದ್ರದ (ಎನ್‌ಐಇ -ಕ್ರೆಸ್ಟ್) ಸಂಯುಕ್ತಾಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಜೈವಿಕ ಇಂಧನ ದಿನಾಚರಣೆ (ಪ್ರತಿ ವರ್ಷ ಆಗಸ್ಟ್ 10) ಉದ್ಘಾಟಿಸಿ ಮಾತನಾಡಿದರು.

ನೆಪಮಾತ್ರಕ್ಕೆ ಜೈವಿಕ ಇಂಧನ ದಿನ ಆಚರಿಸಿದರೆ ಸಾಲದು. ಕೇವಲ ಅರಿವಿನ ಕಾರ್ಯಕ್ರಮಕ್ಕೆ ಸೀಮಿತವಾಗದೇ ಇದರ ಬಳಕೆಗೆ ಆದ್ಯತೆ ನೀಡಬೇಕು. ಮುಂದಿನ ದಿನಗಳಲ್ಲಿ ಸುಸ್ಥಿರ ಶಕ್ತಿಗಳ ಬಳಕೆಗೆ ಆದ್ಯತೆ ನೀಡಬೇಕಿದೆ. ಈ ನಿಟ್ಟಿನಲ್ಲಿ ಮಕ್ಕಳಲ್ಲಿ ಪರಿಸರ ಸ್ನೇಹಿ ಚಟುವಟಿಕೆ ಬಗ್ಗೆ ಅರಿವು ಮೂಡಿಸಬೇಕು. ಸಾಮಾಜಮುಖಿ ಚಿಂತನೆಯನ್ನೂ ಅವರಲ್ಲಿ ಬಿತ್ತಬೇಕು. ಇಂದು ತಂತ್ರಜ್ಞಾನದ ಭರಾಟೆಯಲ್ಲಿ ಪ್ರಕೃತಿ ಬಗೆಗಿನ ಕಾಳಜಿ ಮರೆಯುತ್ತಿದ್ದೇವೆ. ನಮ್ಮ ಚಟುವಟಿಕೆಗಳು ಪರಿಸರ ಸ್ನೇಹಿ ಮತ್ತು ಸಮಾಜಮುಖಿಯಾಗಬೇಕು ಎಂದು ಸಲಹೆ ನೀಡಿದರು.

**ಜೈವಿಕ ಇಂಧನ ಪಾರ್ಕ್ ನಿರ್ಮಿಸಿ:** ಹುಣಸೂರಿನ ಡೀಡ್ ಸಂಸ್ಥೆ (ಎನ್‌ಜಿಓ) ನಿರ್ದೇಶಕ ಡಾ.ಶ್ರೀಕಾಂತ್ ಮಾತನಾಡಿ, ಈ ಹಿಂದೆ ಹಳ್ಳಿಗಳಲ್ಲಿ ವಿವಿಧ ಹಣ್ಣಿನ ಮರಗಳ ತೋಪುಗಳು ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದವು. ಅದೀಗ ಕಡಿಮೆಯಾಗಿವೆ. ಅದೇ ರೀತಿಯಲ್ಲಿ ಪ್ರತಿ ಊರಿನಲ್ಲಿ ಜೈವಿಕ ಇಂಧನ ಪಾರ್ಕ್‌ಗಳನ್ನು (ಜೈವಿಕ ಇಂಧನ ಉತ್ಪಾದನೆಗೆ ಅಗತ್ಯವಿರುವ ಮರಗಳನ್ನು ಬೆಳೆಸುವ ತೋಪುಗಳು) ನಿರ್ಮಾಣ ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕ್ರಮ ವಹಿಸಬೇಕು. ಇದರಿಂದ ಜೈವಿಕ ಇಂಧನ ಉತ್ಪಾದನೆಗೆ ದೊಡ್ಡ ಸಂಪನ್ಮೂಲ ಲಭ್ಯವಾಗಲಿದೆ ಎಂದು ತಿಳಿಸಿದರು.

ಅರಣ್ಯ ಇಲಾಖೆ ಸಾಮಾಜಿಕ ಅರಣ್ಯ ವಿಭಾಗ ಎಸಿಎಫ್ ನಾಗರಾಜ್ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ವಿಭಾಗದ ಮೂಲಕವೂ ರಸ್ತೆ ಬದಿ, ಗುಡ್ಡಗಾಡು ಪ್ರದೇಶದಲ್ಲಿ ಹೆಚ್ಚಾಗಿ ಹೊಂಗೆ, ಬೇವು, ಸಿಮರೂಬ, ಹಿಪ್ಪೆ ಸಸ್ಯಗಳನ್ನು ನೆಡುತ್ತಿದ್ದೇವೆ. ಜೊತೆಗೆ ಅಮೃತ ಸರೋವರ ಎಂಬ ಕಾರ್ಯಕ್ರಮದಡಿಯಲ್ಲಿಯೂ ಈ ಸಸ್ಯಗಳನ್ನು ಹೆಚ್ಚಾಗಿ ನೆಡಲಾಗುತ್ತಿದೆ. ಸರ್ಕಾರದ ನಿಯಮದಂತೆ 10ರಿಂದ 15ರಷ್ಟು ಜೈವಿಕ ಇಂಧನದ ಮೂಲಗಳಾದ ಈ ಸಸ್ಯಗಳನ್ನು ನೆಡಲಾಗುತ್ತಿದೆ. ರೈತರಿಗೂ ಈ ಸಸ್ಯಗಳನ್ನು ಬೆಳೆಸಲು ಕೃಷಿ ಅರಣ್ಯ ಕಾರ್ಯಕ್ರಮದಡಿ ಉತ್ತೇಜನ ನೀಡಲಾಗುತ್ತಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಜೈವಿಕ ಇಂಧನ ದಿನಾಚರಣೆ ಪ್ರಯುಕ್ತ 100ಕ್ಕೂ ಹೆಚ್ಚು ಹೊಂಗೆ, ಬೇವು, ಸಿಮರೂಬ, ಹಿಪ್ಪೆ ಗಿಡಗಳನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಹಾಗೂ ಗಣ್ಯರಿಗೆ ವಿತರಣೆ ಮಾಡಲಾಯಿತು. ವಾಹನಗಳಿಗೆ ಜೈವಿಕ ಇಂಧನ ತುಂಬಲಾಯಿತು. ಇದೇ ಆವರಣದ ಗಿಡ ಮರಗಳಿಗೆ ಜೈವಿಕ ಗೊಬ್ಬರ ಹಾಕಲಾಯಿತು.

ಮೈಸೂರು ಜಿಲ್ಲಾ ಪಂಚಾಯಿತಿಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಹಿರಿಯ ಯೋಜನಾ ಅಭಿಯಂತರ ಸೈಯದ್ ಮುರ್ತುಜಾ ಅಲಿ, ಎನ್‌ಐಇ ಕಾಲೇಜಿನ ಉಪ ಪ್ರಾಂಶುಪಾಲ ಡಾ.ಗಣೇಶ್ ಪ್ರಸಾದ್, ಎನ್‌ಐಇ ಕ್ರೆಸ್ಟ್‌ನ ನಿರ್ದೇಶಕ ಎಸ್.ಶಾಮ್‌ಸುಂದರ್, ರಚನಾ ಎನರ್ ಕೇರ್ ಗ್ರೂಪ್‌ನ ಪಿಆರ್‌ಓ ಬಿ.ಎನ್. ಶೇಖರ್ ಮತ್ತಿತರರು ಹಾಜರಿದ್ದರು.

### ಜೈವಿಕ ಇಂಧನ ಉತ್ತೇಜಿಸಿದರೆ ದೇಶ ಇಂಧನದಲ್ಲಿ ಸ್ವಾವಲಂಬನೆ

ಮೈಸೂರು,ಆ.10(ಪಿಎಂ)– ದೇಶವು ಶೇ.80ರಷ್ಟು ಕಚ್ಚಾತೈಲ ಆಮದು ಮಾಡಿಕೊಳ್ಳುತ್ತಿದೆ. ಜೈವಿಕ ಇಂಧನ ಉತ್ಪಾದನೆ ಮತ್ತು ಬಳಕೆಗೆ ಉತ್ತೇಜನ ನೀಡುವ ಮೂಲಕ ಇಂಧನದಲ್ಲಿ ದೇಶ ಸ್ವಾವಲಂಬನೆ ಸಾಧಿಸಬಹುದು ಎಂದು ಎನ್‌ಐಇ ಕ್ರೆಸ್ಟ್‌ನ ನಿರ್ದೇಶಕ ಎಸ್.ಶಾಮ್‌ಸುಂದರ್ ತಿಳಿಸಿದರು.

ಜೈವಿಕ ಇಂಧನಕ್ಕೆ ಉತ್ತೇಜಿಸಿದರೆ ಕಚ್ಚಾತೈಲ ಆಮದು ಕಡಿಮೆ ಮಾಡಬಹುದು. ಇದರಿಂದ ತಾಪಮಾನ ನಿಯಂತ್ರಿಸಬಹುದು. ಮೈಸೂರು ನಗರದಲ್ಲಿ ದಿನಕ್ಕೆ 400 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ. ಇದರಲ್ಲಿ ಶೇ.80ರಷ್ಟು ಹಸಿ ತ್ಯಾಜ್ಯವಾಗಿದೆ. ಈ ಹಸಿ ತ್ಯಾಜ್ಯ ಬಳಸಿಕೊಂಡು ಜೈವಿಕ ಅನಿಲ ಉತ್ಪಾದನೆ ಮಾಡಬಹುದು. ಅದಕ್ಕೆ ಅಗತ್ಯವಿರುವ ತಂತ್ರಜ್ಞಾನ ನಮ್ಮ ಎನ್‌ಐಇನಲ್ಲಿ ಲಭ್ಯವಿದೆ ಎಂದರು.

ಜರ್ಮನಿಯ ರೂಡಾಲ್ಫ್ ಡೀಸೆಲ್ ಎಂಬ ವಿಜ್ಞಾನಿ ಆಟೋಮೊಬೈಲ್ ಇಂಜಿನ್ ಆವಿಷ್ಕಾರ ಮಾಡಿದಾಗ ಅವರು ಅದಕ್ಕೆ ಜೈವಿಕ ಇಂಧನ ಬಳಿಸಿ ಚಲಿಸುವಂತೆ ಮಾಡಿದರು. ಹಾಗಾಗಿ ಮೊಟ್ಟಮೊದಲ ಇಂಜಿನ್ ಜೈವಿಕ ಇಂಧನದಲ್ಲೇ ಚಲಿಸಿತು. ನಂತರದಲ್ಲಿ ಯಥೇಚ್ಛವಾಗಿ ತೈಲ ನಿಕ್ಷೇಪ ಸಿಕ್ಕಾಗ ಇಂಜಿನ್‌ಗಳನ್ನು ಪೆಟ್ರೋಲ್, ಡೀಸೆಲ್‌ಗೆ ತಕ್ಕಂತೆ ವಿನ್ಯಾಸ ಮಾಡಲಾಯಿತು ಎಂದು ಹೇಳಿದರು.

## ಗ್ರಂಥಾಲಯ, ಕ್ರೀಡಾ ಕೊಠಡಿ ಉದ್ಘಾಟನೆ



ಮೈಸೂರು, ಆ.10(ಜಿಎ)–ವಿನೂತನ ಗ್ರಂಥಾಲಯ ಮತ್ತು ಕ್ರೀಡಾ ಕೊಠಡಿಯನ್ನು ಮೈಸೂರು ವಾರಿಯರ್ಸ್ ತಂಡದ ಮಾಲೀಕ ಅರ್ಜುನ್ ರಂಗ ಮತ್ತು ತಂಡದ ನಾಯಕ ಕರುಣ್ ನಾಯರ್ ಗುರುವಾರ ಉದ್ಘಾಟಿಸಿದರು.

ಮೈಸೂರಿನ ಜಾಕಿ ಕ್ವಾರ್ಟರ್ಸ್‌ನಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಎನ್ ಆರ್ ಗ್ರೂಪ್ ಒಡೆತನದ ಸೈಕಲ್ ಪ್ಯೂರ್ ಅಗರಬತ್ತಿ ಮತ್ತು ಕಲಿಸು ಫೌಂಡೇಷನ್ ಸಹಯೋಗದೊಂದಿಗೆ ನಿರ್ಮಾಣವಾಗಿರುವ ಗ್ರಂಥಾಲಯ ಮತ್ತು ಕ್ರೀಡಾ ಕೊಠಡಿಯನ್ನು ಲೋಕಾರ್ಪಣೆ ಮಾಡಿದರು.

ನಂತರ ಅರ್ಜುನ್ ರಂಗ ಮಾತನಾಡಿ, ಎನ್‌ಆರ್ ಗ್ರೂಪ್‌ನ ಸೈಕಲ್ ಪ್ಯೂರ್ ಅಗರಬತ್ತಿ ಮಾಲೀಕತ್ವದ ಮೈಸೂರು ವಾರಿಯರ್ಸ್ ತಂಡ ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ನಲ್ಲಿ ಅಗ್ರಶ್ರೇಯಾಂಕದ ತಂಡವಾಗಿದ್ದು, ಮೈಸೂರು ವಾರಿಯರ್ಸ್ ಆಟಗಾರರು ಬಾರಿಸುವ ಪ್ರತಿ ಯೊಂದು ಸಿಕ್ಸರ್ ಮತ್ತು ಬೌಂಡರಿಗಳಿಗೆ ಹಣವನ್ನು ನೀಡುತ್ತಿದ್ದು, ಆ ಹಣವನ್ನು ಸಮಾಜಮುಖಿ ಕೆಲಸಗಳಿಗೆ ಬಳಸಲಾಗುತ್ತಿದೆ. ಅದರಂತೆ ಕಲಿಸು ಫೌಂಡೇಷನ್‌ಗೆ ಈ ಹಣ ನೀಡಿದ್ದು, ಅವರು ಅದ್ಭುತವಾಗಿ ಗ್ರಂಥಾಲಯ ಮತ್ತು ಕ್ರೀಡಾ ಕೊಠಡಿಯನ್ನು ನಿರ್ಮಾಣ ಮಾಡಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ಬಾರಿ ಕೆಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಲು ಮೈಸೂರು ವಾರಿಯರ್ಸ್ ತಂಡ ಸರ್ವ ಸನ್ನದ್ಧವಾಗಿದ್ದು, ಎಲ್ಲರೂ ತಂಡಕ್ಕೆ ಬೆಂಬಲ ನೀಡುವ ಮೂಲಕ ಪ್ರೋತ್ಸಾಹಿಸಿ ಎಂದರು.

ಮೈಸೂರು ವಾರಿಯರ್ಸ್ ತಂಡದ ನಾಯಕ ಕರುಣ್ ನಾಯರ್ ಮಾತನಾಡಿ, ಆಟಗಾರರ ಆಯ್ಕೆ ಪ್ರಕ್ರಿಯೆ ಉತ್ತಮವಾಗಿ ನಡೆದಿದ್ದು, ತಂಡ ಈಗ ಅದ್ಭುತವಾಗಿದೆ. ಈ ಬಾರಿ ಮಹಾರಾಜ ಟ್ರೋಫಿಯನ್ನು ಮೈಸೂರಿಗೆ ತರುವ ಗುರಿಯನ್ನು ಹೊಂದಿದ್ದೇವೆ ಎಂದರು. ಕಾರ್ಯಕ್ರಮದಲ್ಲಿ ಕಲಿಸು ಫೌಂಡೇಶನ್‌ನ ಸಂಸ್ಥಾಪಕ ಮತ್ತು ಸಿಇಓ ಎಂ.ಎಂ. ನಿಖಿಲೇಶ್, ಮುಖ್ಯ ಶಿಕ್ಷಕ ಬೋರೆರಾಜು, ಮಾಜಿ ಮುಖ್ಯಶಿಕ್ಷಕ ಸತೀಶ್ ಮತ್ತು ಮೈಸೂರು ವಾರಿಯರ್ಸ್ ತಂಡದ ಆಟಗಾರರು ಉಪಸ್ಥಿತರಿದ್ದರು.

## ಸಂತ್ರಸ್ತರಿಗೆ ಆರ್ಥಿಕ ನೆರವು ನೀಡಲು ಫ್ಯಾಷನ್ ಶೋ ಆಯೋಜನೆ



ಮೈಸೂರು,ಆ.10(ಎಂಟಿವೈ)– ಮೂತ್ರಪಿಂಡದ ಸಮಸ್ಯೆ ತುತ್ತಾಗಿರುವ ರೋಗಿಯೊಬ್ಬರ ಚಿಕಿತ್ಸೆಗೆ ಆರ್ಥಿಕ ನೆರವು ನೀಡುವ ನಿಟ್ಟಿನಲ್ಲಿ ಆ.27ರಂದು ಮೈಸೂರಲ್ಲಿ ಮೂರು ವಿಭಾಗ ದಲ್ಲಿ 'ಫ್ಯಾಷನ್ ಶೋ' ಏರ್ಪಡಿಸಲಾಗಿದೆ ಎಂದು ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಐಸಿರಿ ಸಂಸ್ಥೆಯ ಅಧ್ಯಕ್ಷೆ ಸೌಹಾರ್ದಿನಿ ಎನ್. ರಾಜ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಐಸಿರಿ ಸಂಸ್ಥೆಯು ಆರ್‌ಕೆ ಯುನಿವರ್ಸ್ ಕೂರ್ಗ್ ಸಂಸ್ಥೆಯ ಸಹಕಾರದೊಂದಿಗೆ ಆ.27ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೂ ಫ್ಯಾಷನ್ ಶೋ ನಡೆಯಲಿದೆ. 'ಮಿಸ್ ಮೈಸೂರು (10ರಿಂದ 30ವರ್ಷ), ಮಿಸ್ಟರ್ ಮೈಸೂರು (10–30ವರ್ಷ), ಮಿಸಸ್ ಮೈಸೂರು (30–60ವರ್ಷ) ವಿಭಾಗದಲ್ಲಿ ಸ್ಪರ್ಧೆ ಇದೆ. ರೂಪದರ್ಶಿಗಳು, ಉದಯೋನ್ಮುಖ ಮಾಡೆಲ್‌ಗಳು ಸೇರಿದಂತೆ ಆಸಕ್ತರು ಪಾಲ್ಗೊಳ್ಳಬಹುದಾಗಿದೆ. ಸ್ಪರ್ಧಿಗಳು ಪಾಶ್ಚಿಮಾತ್ಯ ಹಾಗೂ ಸಾಂಪ್ರದಾಯಿಕ ಉಡುಪಿನಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದು ವಿವರಿಸಿದರು.

ಈ ಸ್ಪರ್ಧೆಯಲ್ಲಿ ಸಂಗ್ರಹವಾಗುವ ಮೊತ್ತವನ್ನು ಮೂತ್ರಪಿಂಡದ ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ ಒಬ್ಬರಿಗೆ ಮೂತ್ರಪಿಂಡ ಕಸಿಗಾಗಿ ನೀಡಲಾಗುತ್ತದೆ. ಮೂತ್ರಪಿಂಡ ಕಸಿಗಾಗಿ ರೋಗಿಗೆ 1.10 ಲಕ್ಷ ರೂ., ಅಗತ್ಯವಿದ್ದು, ಅದಕ್ಕಾಗಿ ನೆರವು ನೀಡಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಆಸಕ್ತರು ಆ.20ರೊಳಗೆ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ. ಮೊ.ಸಂಖ್ಯೆ 9632755969, 9480085060 ಸಂಪರ್ಕಿಸಬಹುದಾಗಿದೆ'. ಕಾರ್ಯಕ್ರಮದಲ್ಲಿ ಎಬೊಟ್ ಇಂಡಿಯಾ ಸಂಸ್ಥೆಯಿಂದ ಥೈರಾಯ್ಡ್ ಚೆಕ್‌ಅಪ್ ನಡೆಸಲಾಗುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ಐಸಿರಿ ಸಂಸ್ಥೆಯ ಕಾರ್ಯದರ್ಶಿ ರಾಧಾ ವಿನಯ್, ಖಜಾಂಚಿ ಎಸ್. ಶೋಭಾರಾಣಿ ಇದ್ದರು.

## ಜೆಎಸ್‌ಎಸ್ ಫಾರ್ಮಸಿ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಮಾವೇಶ




ಮೈಸೂರು,ಆ.10(ಎಂಟಿವೈ)– ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಮಾವೇಶ ಆ. 12ರಂದು ಬೆಳಗ್ಗೆ 10ಕ್ಕೆ ಕಾಲೇಜು ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ವಿವಿಧೆಡೆ ಸಾಧನೆ ಮಾಡಿರುವ 450 ಹಳೆ ವಿದ್ಯಾರ್ಥಿಗಳು ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಪ್ರಾಚಾರ್ಯ ಡಾ.ಟಿ.ಎಂ.ಪ್ರಮೋದ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1973ರಲ್ಲಿ ಸ್ಥಾಪನೆಗೊಂಡ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಾವಿರಾರು ವಿದ್ಯಾರ್ಥಿಗಳನ್ನು ಸಮಾಜಕ್ಕೆ ಕೊಡುಗೆ ನೀಡಿದೆ. ಸುವರ್ಣ ಮಹೋತ್ಸವದ ಸಂಭ್ರಮದಲ್ಲಿರುವ ನಮ್ಮ ಸಂಸ್ಥೆಯಲ್ಲಿ ವಿವಿಧ ಕಾರ್ಯಕ್ರಮ ನಡೆಸಲು ಉದ್ದೇಶಿಸಲಾಗಿದೆ. ಅದರ ಭಾಗವಾಗಿ ಹಳೆ ವಿದ್ಯಾರ್ಥಿಗಳನ್ನು ಆಹ್ವಾನಿಸಿ ಸಮಾವೇಶ ಆಯೋಜಿಸಲಾಗಿದೆ. ಆ.12ರಂದು 10ಕ್ಕೆ ನಡೆಯುವ ಕಾರ್ಯಕ್ರಮದ ಸಾನ್ನಿಧ್ಯವನ್ನು ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಉಪ ಮೇಯರ್ ಡಾ.ಜಿ.ರೂಪಾ, ಜೆಎಸ್‌ಎಸ್ ವಿವಿಯ ಸಮಕುಲಾದಿಪತಿ ಡಾ.ಬಿ.ಸುರೇಶ್, ಕುಲಪತಿ ಡಾ.ಸುರಿಂದರ್ ಸಿಂಗ್, ಕುಲಸಚಿವ ಡಾ.ಬಿ.ಮಂಜುನಾಥ್ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದಲ್ಲಿ ಸಾಧಕ ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಹಾಲಿ ವಿದ್ಯಾರ್ಥಿಗಳಿಗೆ ಹಳೆ ವಿದ್ಯಾರ್ಥಿಗಳಿಂದ ಮಾರ್ಗದರ್ಶನ ಮಾಡಿಸಲಾಗುತ್ತಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಬಿ.ಆರ್. ಪ್ರಶಾಂತ್‌ಕುಮಾರ್, ಸೀಮಾ ಮೆಹ್ದಿ, ಎಚ್.ವಿ. ಗಂಗಾಧರಪ್ಪ ಇದ್ದರು.



ಯುವ ಸಬಲೀಕರಣ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ಬಿ.ನಾಗೇಂದ್ರ ಅವರು ಗುರುವಾರ ಮೈಸೂರು ಸುತ್ತೂರು ಶಾಖಾ ಮಠದಲ್ಲಿ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಆಶೀರ್ವಾದ ಪಡೆದುಕೊಂಡರು. ಈ ವೇಳೆ ಶಾಸಕರಾದ ಅನಿಲ್ ಚಿಕ್ಕಮಾದು, ಕೆ.ಹರೀಶ್‌ಗೌಡ ಮತ್ತು ಪಾಲಿಕೆ ಸದಸ್ಯರು ಸೇರಿದಂತೆ ಮುಖಂಡರು ಸಾಥ್ ನೀಡಿದರು.

# ನಮ್ಮ ಕ್ಲಿನಿಕ್‌ಗಳ ಸಮಯ ಬದಲಾವಣೆ; ಮ.12ರಿಂದ 8ರವರೆಗೆ ಸೇವೆ

### ಅತಿ ಶೀಘ್ರದಲ್ಲೇ ಸರ್ಕಾರದಿಂದ ಸುತ್ತೋಲೆ ಬರುವ ನಿರೀಕ್ಷೆ, ಜಿಲ್ಲೆಯಲ್ಲಿ 11 ಕ್ಲಿನಿಕ್‌ಗಳು

ಮೈಸೂರು, ಆ.10(ಜಿಎ)–ನಮ್ಮ ಕ್ಲಿನಿಕ್‌ಗಳನ್ನು ಸಂಜೆ ಕ್ಲಿನಿಕ್ ಮಾದರಿಯಲ್ಲಿ ಸಮಯ ಬದಲಾಯಿಸಲು ನಿರ್ಧರಿಸಲಾಗಿದ್ದು, ಸರ್ಕಾರದ ಸುತ್ತೋಲೆ ಬಂದ ತಕ್ಷಣ ಮೈಸೂರಿನಲ್ಲಿಯೂ ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ನಮ್ಮ ಕ್ಲಿನಿಕ್ ಕಾರ್ಯ ನಿರ್ವಹಿಸುತ್ತವೆ.

ಮೈಸೂರು ಜಿಲ್ಲೆಯಲ್ಲಿರುವ ಎಚ್‌ಡಿ ಕೋಟೆ, ಹೂಟಗಳ್ಳಿ, ಕೆಆರ್ ನಗರ, ಶ್ರೀರಾಂಪುರ ಮತ್ತು ಟಿ.ನರಸೀಪುರ, ಯರಗನಹಳ್ಳಿ ಸೇರಿದಂತೆ 11 ಕ್ಲಿನಿಕ್‌ಗಳಲ್ಲಿ ಉಚಿತ ಚಿಕಿತ್ಸೆ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಸಮಯ ವಿಸ್ತರಿಸಿದರೆ, ಮತ್ತಷ್ಟು ಜನರು ಇದರ ಉಪಯೋಗ ಪಡೆದುಕೊಳ್ಳಲಿದ್ದಾರೆ.

ರಾಜ್ಯದಲ್ಲಿ ಒಟ್ಟು 415 ನಮ್ಮ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಇವುಗಳಲ್ಲಿ ಶೇ.25 ರಷ್ಟು ಕ್ಲಿನಿಕ್‌ಗಳನ್ನು ಪ್ರಾಯೋಗಿಕ ಹಂತದಲ್ಲಿ ಸಂಜೆ ಕ್ಲಿನಿಕ್‌ಗಳಾಗಿ ಸಮಯ ಬದಲಾವಣೆ ಮಾಡಲಾಗುತ್ತಿದೆ. ಇವುಗಳು ಯಶಸ್ವಿಯಾದರೆ ರಾಜ್ಯಾದ್ಯಂತ ಎಲ್ಲಾ ನಮ್ಮ ಕ್ಲಿನಿಕ್‌ಗಳ ಸಮಯವನ್ನು ಬದಲಾವಣೆ ಮಾಡಲು ಆರೋಗ್ಯ ಇಲಾಖೆ ಚಿಂತನೆ ನಡೆಸಿತ್ತು.



ನಗರ ಪ್ರದೇಶಗಳ ಬಡವರು ಹಾಗೂ ಜನಸಾಮಾನ್ಯರಿಗೆ ಉತ್ತಮ ಆರೋಗ್ಯ ಸೇವೆಯನ್ನು ನಮ್ಮ ಕ್ಲಿನಿಕ್‌ಗಳ ಮೂಲಕ ಸೇವೆ ಒದಗಿಸಿ ಹೊಸ ಕಾಯಕಲ್ಪ ನೀಡಲು ಯೋಜನೆ ರೂಪಿಸಲಾಗುತ್ತಿದೆ.

ಪ್ರಸ್ತುತ ನಮ್ಮ ಕ್ಲಿನಿಕ್‌ಗಳು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 12.30ವರೆಗೆ ಹಾಗೂ ಮಧ್ಯಾಹ್ನ 2 ಗಂಟೆಯಿಂದ ಸಂಜೆ 4.30ರವರೆಗೆ ಕಾರ್ಯ ನಿರ್ವಹಿಸುತ್ತಿತ್ತು. ಇದೀಗ ನಮ್ಮ ಕ್ಲಿನಿಕ್‌ಗಳನ್ನ ಸಂಜೆ ಕ್ಲಿನಿಕ್ ಮಾದರಿಯಲ್ಲಿ ಸಮಯ ಬದಲಾಯಿಸಲು ನಿರ್ಧರಿಸಲಾಗಿದೆ. ಮಧ್ಯಾಹ್ನ 12 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ಕಾರ್ಯ ನಿರ್ವಹಿಸುವಂತೆ ತಯಾರಿ ನಡೆಸಲಾಗಿದೆ.

ಕೂಲಿ ಕಾರ್ಮಿಕರು ಕೆಲಸಕ್ಕೆ ಹೋಗುವ ಸಮಯ ಹಾಗೂ ನಮ್ಮ ಕ್ಲಿನಿಕ್‌ಗಳು ಆರಂಭವಾಗುವ ಸಮಯ ಎರಡು ಕೂಡ ಒಂದೇ ಆಗಿತ್ತು. ಇದರಿಂದ ಬಡವರು ಈ ಸೌಲಭ್ಯದಿಂದ ವಂಚಿತರಾಗುತ್ತಿದ್ದರು. ಹೀಗಾಗಿ ರಾತ್ರಿಯವರೆಗೂ ನಮ್ಮ ಕ್ಲಿನಿಕ್‌ಗಳು ಕಾರ್ಯ ನಿರ್ವಹಿಸುವಂತೆ ಸಮಯ ಬದಲಾವಣೆ ಮಾಡಲು ಆರೋಗ್ಯ ಸಚಿವರು ಅಧಿಕಾರಿಗಳಿಗೆ ಸೂಚಿಸಿದ್ದರು.

> ಮೈಸೂರು ಜಿಲ್ಲೆಯ 11 ನಮ್ಮ ಕ್ಲಿನಿಕ್‌ಗಳಿಗೆ ನಿತ್ಯವೂ 70 ರಿಂದ 80 ಮಂದಿ ಭೇಟಿ ನೀಡಿ ಅನುಕೂಲವನ್ನು ಪಡೆದುಕೊಳ್ಳುತ್ತಿದ್ದಾರೆ. ಅವಧಿಯನ್ನು ವಿಸ್ತರಿಸಿದರೆ, ಮತ್ತಷ್ಟು ಮಂದಿ ಅನುಕೂಲ ಪಡೆದುಕೊಳ್ಳಲು ಅವಕಾಶವಾಗಲಿದೆ. ಸರ್ಕಾರದ ಸುತ್ತೋಲೆ ಬಂದ ತಕ್ಷಣ ಮೈಸೂರಿನಲ್ಲಿಯೂ ರಾತ್ರಿ 8 ಗಂಟೆವರೆಗೂ ನಮ್ಮ ಕ್ಲಿನಿಕ್‌ಗಳು ಕಾರ್ಯನಿರ್ವಹಿಸಲಿವೆ.
> - ಡಾ.ಪಿ.ಸಿ.ಕುಮಾರಸ್ವಾಮಿ,
> ಜಿಲ್ಲಾ ಆರೋಗ್ಯಾಧಿಕಾರಿ

ರಾತ್ರಿವರೆಗೂ ಕಾರ್ಯ ನಿರ್ವಹಿಸಬೇಕಾದರೆ ಎರಡು ಶಿಫ್ಟ್ ಮಾಡಬೇಕಾಗಬಹುದು. ಆಗ ಹೆಚ್ಚಿನ ವೈದ್ಯರು ಬೇಕಾಗುತ್ತಾರೆ. ಈಗಾಗಲೇ ವೈದ್ಯರ ಕೊರತೆಯಿದೆ ಎಂಬ ವಾದಗಳು ಕೂಡಾ ಕೇಳಿ ಬಂದಿದ್ದವು. ಅಂತಿಮವಾಗಿ ಎರಡು ಶಿಫ್ಟ್ ಮಾಡುವ ಬದಲು ಒಂದೇ ಶಿಫ್ಟ್‌ನಲ್ಲಿ ಸಮಯ ಬದಲಾವಣೆ ಮಾಡಲು ಆರೋಗ್ಯ ಸಚಿವರು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಈಗಾಗಲೇ ತಿಳಿಸಿದ್ದಾರೆ.

ಸಂಜೆ ವೇಳೆ ನಮ್ಮ ಕ್ಲಿನಿಕ್‌ಗಳಲ್ಲಿ ಒಪಿಡಿ ತೆರೆಯುವುದರಿಂದ ಸಾಕಷ್ಟು ಅನುಕೂಲ ಕೂಡ ಆಗಲಿದೆ. ಹೀಗೆ ಆಗುವ ಬದಲಾವಣೆಯಿಂದ ಜನರಿಗೆ ಅನುಕೂಲ ಆಗುತ್ತದೆಯೇ, ಎಂಬುದನ್ನು ನೋಡಿಕೊಂಡು ಬಳಿಕ ಹಂತ ಹಂತವಾಗಿ ನಮ್ಮ ಕ್ಲಿನಿಕ್‌ಗಳಲ್ಲಿ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ಯೋಜಿಸಲಾಗಿದೆ.

ಸುಮಾರು ಮೂರು ಲಕ್ಷದ 96 ಸಾವಿರ ಮಹಿಳೆಯರು ಹಾಗೂ 4 ಲಕ್ಷದ 21 ಸಾವಿರ ಪುರುಷರು ನಮ್ಮ ಕ್ಲಿನಿಕ್‌ಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಪ್ರತಿ ದಿನ ಸರಾಸರಿ 35 ರಿಂದ 40 ಜನರು ಚಿಕಿತ್ಸೆ ಪಡೆಯಲು ನಮ್ಮ ಕ್ಲಿನಿಕ್‌ಗಳಿಗೆ ಭೇಟಿ ನೀಡುತ್ತಿದ್ದಾರೆ. ಇನ್ನೂ 2 ಲಕ್ಷದ 88 ಸಾವಿರ ಜನರು ರೋಗ ಪರೀಕ್ಷೆಗಳನ್ನು ಮಾಡಿಸಿಕೊಂಡಿದ್ದಾರೆ. ನಮ್ಮ ಕ್ಲಿನಿಕ್‌ಗಳಲ್ಲಿ ಚಿಕಿತ್ಸೆ ಪಡೆಯುವವರ ಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ತರ ಬದಲಾವಣೆಗಳನ್ನು ತರಲಾಗುತ್ತಿದೆ.

ಮೈಸೂರು ಮಿತ್ರ



# ತ್ರಿಮತಸ್ಥ ಬ್ರಾಹ್ಮಣರು ಒಗ್ಗೂಡಬೇಕು ಪೇಜಾವರ ಶ್ರೀ ವಿಶ್ವಪ್ರಸನ್ನ ತೀರ್ಥ ಕಿವಿಮಾತು



ಮೈಸೂರು, ಆ.10– ಬ್ರಾಹ್ಮಣ ಸಮುದಾಯ ಬಲಯುತ ಆಗಬೇಕಾದರೆ ತಮ್ಮ ಸಮುದಾಯದ ಬಗ್ಗೆ ಸ್ವಾಭಿಮಾನ, ಒಗ್ಗಟ್ಟು ಏರ್ಪಡುವಂತಹ ಹೆಚ್ಚೆಚ್ಚು ಕಾರ್ಯಕ್ರಮಗಳನ್ನು ರೂಪಿಸುವ ಅಗತ್ಯವಿದೆ ಎಂದು ಉಡುಪಿಯ ಪೇಜಾವರ ಮಠಾಧೀಶರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳು ಹೇಳಿದರು. ಮೈಸೂರಿನ ಸರಸ್ವತಿಪುರಂನಲ್ಲಿರುವ ಕೃಷ್ಣಧಾಮದಲ್ಲಿ ಉಡುಪಿಯ ಪೇಜಾವರ ಮಠಾಧೀಶರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರ ಆಶೀರ್ವಾದ ಪಡೆದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಪದಾಧಿಕಾರಿಗಳು ನಂತರ ಬ್ರಾಹ್ಮಣರ ಸಂಘಟನೆ ಮತ್ತು ಐಕ್ಯತೆ ಹಾಗೂ ಅಭಿವೃದ್ಧಿ ಕುರಿತು ಸಮಾಲೋಚನಾ ಮಾಡಿದರು.

ಬಳಿಕ ಮಾತನಾಡಿದ ಶ್ರೀಗಳು, ಬ್ರಾಹ್ಮಣ ಸಮುದಾಯದ ಅಭಿವೃದ್ಧಿಗೆ ಮುಂದಿನ 50 ವರ್ಷ ಗಮನದಲ್ಲಿಟ್ಟುಕೊಂಡು ಯೋಜನೆ ರೂಪಿಸಬೇಕಿದೆ. ಅದಕ್ಕೆ ಪೂರ್ವದಲ್ಲಿ ಬ್ರಾಹ್ಮಣ ಸಮುದಾಯದ ಸಂಸ್ಕೃತಿ, ಮೌಲ್ಯ ಉಳಿಸಲು, ಸ್ವಾಭಿಮಾನ ಹಾಗೂ ಒಗ್ಗಟ್ಟು ಹೆಚ್ಚಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದು ಹೇಳಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್ ಮಾತನಾಡಿ, ಸಮಾಜಕ್ಕೆ ಬ್ರಾಹ್ಮಣರ ಕೊಡುಗೆ ಅಪಾರ, ಬ್ರಾಹ್ಮಣ ಸಮಾಜ ಎಲ್ಲರ ಒಳಿತನ್ನು ಸರ್ವೇ ಜನ ಸುಖಿನೋ ಭವಂತು ಎಂದು ಹೇಳುವ ಸಮಾಜ. ಅಂತಹ ಸಮಾಜದಿಂದ ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡುತ್ತಾ ಬ್ರಾಹ್ಮಣ ಸಮಾಜ ಬಂದಿದೆ ಎಂದು ಹೇಳಿದರು ಇದೇ ಸಂದರ್ಭದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್, ಪುಷ್ಪ ಅಯ್ಯಂಗಾರ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಕೇಂದ್ರ ಕಾರ್ಯಕಾರಿ ಮಂಡಳಿಯ ಸದಸ್ಯರಾದ ಎಂ.ಎಸ್.ರವೀಂದ್ರ ಹಾಗೂ ಇತರ ಪದಾಧಿಕಾರಿಗಳು ಹಾಜರಿದ್ದರು.

# ಮೈಸೂರು ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಆ.12, 13ರಂದು ರಾಜ್ಯಮಟ್ಟದ 10ನೇ ವಕೀಲರ ಸಮ್ಮೇಳನ



ಮೈಸೂರು,ಆ.10(ಎಂಟಿವೈ)– ಮೈಸೂರಿನ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಆ.12 ಮತ್ತು 13ರಂದು ರಾಜ್ಯಮಟ್ಟದ 10ನೇ ವಕೀಲರ ಸಮ್ಮೇಳನ ಆಯೋಜಿಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ ಎಂದು ಕರ್ನಾಟಕ ರಾಜ್ಯ ವಕೀಲರ ಸಂಘದ ಅಧ್ಯಕ್ಷ ವಿಶಾಲ್ ರಘು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ವಕೀಲರ ಪರಿಷತ್, ಕರ್ನಾಟಕ ರಾಜ್ಯ ವಕೀಲರ ಸಂಘ ಹಾಗೂ ಮೈಸೂರು ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ರಾಜ್ಯಮಟ್ಟದ ವಕೀಲರ ಸಮ್ಮೇಳನ ಏರ್ಪಡಿಸಲಾಗಿದೆ. ಮೈಸೂರಲ್ಲಿ ನಡೆಯುತ್ತಿರುವ ಎರಡನೇ ಸಮ್ಮೇಳನ ಇದಾಗಿದೆ. ಸಾಂಸ್ಕೃತಿಕ ನಗರಿಯಲ್ಲಿ ನಡೆಯುವ ಸಮ್ಮೇಳನದಲ್ಲಿ ಪಾಲ್ಗೊಳ್ಳಲು 13 ಸಾವಿರ ವಕೀಲರು ಈಗಾಗಲೇ ನೋಂದಣಿ ಮಾಡಿಕೊಂಡಿದ್ದಾರೆ. ಆ.12ರಂದು ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಲೆ, ಭಾರತೀಯ ವಕೀಲರ ಪರಿಷತ್ ಅಧ್ಯಕ್ಷ ಮೋಹನ್ ಕುಮಾರ್ ಮಿಶ್ರಾ, ಸಚಿವರಾದ ಹೆಚ್.ಕೆ. ಪಾಟೀಲ್, ಡಾ.ಹೆಚ್.ಸಿ. ಮಹದೇವಪ್ಪ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಬಳಿಕ ಮಧ್ಯಾಹ್ನ 3ರಿಂದ ಸಂಜೆ 5.30 ರವರೆಗೆ ಎರಡು ಗೋಷ್ಠಿ ಜರುಗಲಿವೆ. ಸಂಜೆ 6.30ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ ಎಂದರು.

ಆ.13ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ಮೂರು ಗೋಷ್ಠಿ ನಡೆಯಲಿದೆ. ಮಧ್ಯಾಹ್ನ 3ಕ್ಕೆ ಸಮ್ಮೇಳನದ ಸಮಾರೋಪ ಸಮಾರಂಭ ನಡೆಯಲಿದ್ದು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸ್ಮರಣ ಸಂಚಿಕೆಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಬಿಡುಗಡೆ ಮಾಡಲಿದ್ದಾರೆ. ಹಿಮಾಚಲ ಪ್ರದೇಶದ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಲ್.ನಾರಾಯಣಸ್ವಾಮಿ ಅವರು 10ನೇ ಸಮ್ಮೇಳನದ ವೆಲ್ಫೇರ್ ಸ್ಟಾಂಪ್ಸ್ ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಉಪಲೋಕಾಯುಕ್ತ ನ್ಯಾ.ಕೆ.ಎನ್. ಫಣೀಂದ್ರ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ಶಾಸಕ ಎ.ಎಸ್.ಭೋಪಣ್ಣ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ. ಎರಡು ದಿನದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ವಕೀಲರ ಸಂಘದ ಅಧ್ಯಕ್ಷ ಹೆಚ್.ಎಲ್.ವಿಶಾಲ್ ರಾಘು ವಹಿಸಲಿದ್ದಾರೆ ಎಂದು ತಿಳಿಸಿದರು. ರಾಜ್ಯಮಟ್ಟದ 10ನೇ ವಕೀಲರ ಸಮ್ಮೇಳನದಲ್ಲಿ ಈ ಎರಡೂ ದಿನಗಳಲ್ಲಿ ರಾಷ್ಟ್ರ ನಿರ್ಮಾಣದಲ್ಲಿ ವಕೀಲರ ಪಾತ್ರ, ಕಾನೂನು ವೃತ್ತಿಯಲ್ಲಿ ಹೊಸ ಆಯಾಮ, ಯುವ ವಕೀಲರು ಎದುರಿಸುತ್ತಿರುವ ಸವಾಲು ಮತ್ತು ಸಮಸ್ಯೆ, ಸಾರ್ವಜನಿಕ ಆಡಳಿತದಲ್ಲಿ ವಕೀಲರ ಪಾತ್ರ ಮೊದಲಾದ ವಿಷಯಗಳ ಬಗ್ಗೆ ಹಿರಿಯ ನ್ಯಾಯಮೂರ್ತಿಗಳು, ಹಿರಿಯ ವಕೀಲರು ಮಾತನಾಡಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ರಾಜ್ಯ ಸಂಘದ ಪದಾಧಿಕಾರಿಗಳು ಹಾಗೂ ಹಿರಿಯ ವಕೀಲರಾದ ಕಾಮರೆಡ್ಡಿ, ಚಂದ್ರಮೌಳಿ, ಪುಟ್ಟಸಿದ್ದೇಗೌಡ, ಮಹದೇವಸ್ವಾಮಿ, ನಾಗೇಶ್, ಭಾಗ್ಯಮ್ಮ, ಗೀತಾ ಉಪಸ್ಥಿತರಿದ್ದರು.

# ಆ.13ರಂದು ಯುವ ಜನತೆಗಾಗಿ ವಿಶೇಷ ಕಾರ್ಯಕ್ರಮ

ಮೈಸೂರು,ಆ.10 (ಎಂಟಿವೈ)– ಅಂತಾರಾಷ್ಟ್ರೀಯ ಯುವ ದಿನದ ಅಂಗವಾಗಿ ಆ.13ರಂದು ಬೆಳಗ್ಗೆ 11ಕ್ಕೆ ಮೈಸೂರಿನ ಕಲಾಮಂದಿರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯದ ವತಿಯಿಂದ 'ಯುವ ಜನತೆಗಾಗಿ ಆರೋಗ್ಯ, ಯೋಗಕ್ಷೇಮ ಮತ್ತು ಕ್ರೀಡೆಗಳು' ವಿಷಯ ಆಧಾರಿತ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಈಶ್ವರೀಯ ವಿಶ್ವವಿದ್ಯಾನಿಲಯದ ಯುವ ವಿಭಾಗದ ಸಂಚಾಲಕಿ ಬಿಕೆ ಯತ್ನ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯುವ ದಿನದ ಹಿನ್ನೆಲೆಯಲ್ಲಿ ಮೈಸೂರಲ್ಲಿ ಆಯೋಜಿಸಿರುವ ಕಾರ್ಯಕ್ರಮದ ಅಂಗವಾಗಿ ಆ.10ರಂದು ಬೆಳಗ್ಗೆ 8ಕ್ಕೆ ಅರಮನೆ ಮುಂಭಾಗದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿಯಿಂದ ಕಲಾಮಂದಿರದವರೆಗೆ ಶಾಂತಿಗಾಗಿ ನಡಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ. ನಂತರ ಕಲಾಮಂದಿರದಲ್ಲಿ ಬೆಳಗ್ಗೆ 9.30ಕ್ಕೆ ಆರಂಭವಾಗುವ 'ಯುವ ಪೀಳಿಗೆಗೆ ಒಂದು ವಿಶೇಷ ಕಾರ್ಯಸೂಚಿ ಆರೋಗ್ಯ, ಯೋಗಕ್ಷೇಮ ಹಾಗೂ ಕ್ರೀಡೆಗಳು' ಕಾರ್ಯಕ್ರಮವನ್ನು ರಾಜವಂಶಸ್ಥ ಯದುವೀರಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಈಶ್ವರೀಯ ವಿಶ್ವವಿದ್ಯಾಲಯ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ ವಹಿಸಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಪ್ರೇರಕ ತರಬೇತುದಾರ ಡಾ.ಇ.ವಿ.ಸ್ವಾಮಿನಾಥನ್ ಅವರು ಯೋಗಕ್ಷೇಮ ಮತ್ತು ವಿಜ್ಞಾನ ಕುರಿತು ಮಾತನಾಡಲಿದ್ದಾರೆ. ಸಮೃದ್ಧ ಪರಿಸರಕ್ಕಾಗಿ ಹಸಿರು ಕೌಶಲ್ಯ ಹಾಗೂ ಭವಿಷ್ಯದ ಸಾಧ್ಯತೆ ಕುರಿತು ತಜ್ಞ ವೈದ್ಯ ಡಾ. ರಕ್ಷಿತ್ ಶೃಂಗೇರಿ ಮಾತನಾಡುವರು. ಇದೇ ವೇಳೆ ತಜ್ಞರಾದ ಡಾ. ಕವಿತಾ ಪ್ರಕಾಶ್ ಮತ್ತು ನಟಿ (ಬೇಬಿ) ರೇಖಾ ರೋಹಿತ್ ಅವರು ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಸಮಾರೋಪ ಸಮಾರಂಭ ನಡೆಯಲಿದ್ದು, ವಿಭಾಗೀಯ ರೈಲ್ವೆ ಪ್ರಬಂಧಕರಾದ ಡಾ. ಶಿಲ್ಪಿ ಅಗರ್‌ವಾಲ್ ಹಾಗೂ ಇನ್ನಿತರು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಈಶ್ವರೀಯ ವಿಶ್ವವಿದ್ಯಾಲಯದ ಮಂಜುಳಾ, ದೀಪಿಕಾ, ಪೃಥ್ವಿ, ನಾಗರಾಜ್ ಇದ್ದರು.

# ರಸ್ತೆಬದಿಯ ಹಸಿರು ಹುಲ್ಲು ಕೊಯ್ದು ಗೋಶಾಲೆಗೆ ನೀಡಿ: ಶ್ರೀವಿಶ್ವ ಪ್ರಸನ್ನತೀರ್ಥ ಸಲಹೆ



ಮೈಸೂರು, ಆ. 10– ಬಹುತೇಕ ನಾಡಿನೆಲ್ಲೆಡೆ ಒಳ್ಳೆಯ ಮಳೆಯಾಗಿ ಪ್ರಕೃತಿ ಹಸಿರಿನಿಂದ ಮೈದುಂಬಿಕೊಂಡಿದೆ. ಶಾಲೆ, ಕಚೇರಿಗಳ ಆವರಣ, ತೋಟಗಳು, ರಸ್ತೆ ಬದಿಯಲ್ಲೂ ಸಮೃದ್ಧ ಹಸಿರು ಹುಲ್ಲು ಬೆಳೆದಿದೆ. ಈ ಹುಲ್ಲನ್ನು ಊರಿನ ಸಂಘಟನೆಗಳು, ಯುವಕ ಮಂಡಳಿಗಳು, ಸ್ವಯಂಸೇವಾ ಸಂಸ್ಥೆ, ಭಜನಾ ಮಂಡಳಿಗಳ ಸದಸ್ಯರು ವಾರಕ್ಕೊಂದು ದಿನ ಕನಿಷ್ಠ ಒಂದು ಗಂಟೆ ಶ್ರಮದಾನದ ಮೂಲಕ ಕಟಾವ್ ಮಾಡಿ ಸಮೀಪದ ಗೋಶಾಲೆಗಳು, ಮಠ ದೇವಸ್ಥಾನಗಳಲ್ಲಿರುವ ಹಸುಗಳಿಗೆ ನೀಡುವಂತಾಗಲಿ ಎಂದು ನೀಲಾವರ ಗೋಶಾಲೆಯ ರೂವಾರಿಗಳಾದ ಉಡುಪಿಯ ಪೇಜಾವರ ಶ್ರೀವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಆಶಯ ವ್ಯಕ್ತಪಡಿಸಿದ್ದಾರೆ.

ಹುಲ್ಲನ್ನು ರವಾನಿಸಲು ಊರಿನ ಯಾರಾದರೂ ಸಹೃದಯ ದಾನಿಗಳ ನೆರವು ಪಡೆಯಬಹುದು. ಇದರಿಂದಾಗಿ ರಸ್ತೆಬದಿಯ ಅಥವಾ ತೋಟ ಇತ್ಯಾದಿಗಳ ಸ್ವಚ್ಛತೆಯೂ ಆಗುತ್ತದೆ. ಜೊತೆಗೆ ಗೋಶಾಲೆಗಳ ಗೋವುಗಳಿಗೆ ಸಮೃದ್ಧ ಹಸಿರು ಹುಲ್ಲು ಒದಗಿಸಿದ ಪುಣ್ಯವೂ ನಮ್ಮದಾಗುತ್ತದೆ ಎಂದ ಶ್ರೀಗಳು, ಈಗಾಗಲೇ ಕೆಲವು ಕಡೆಗಳಲ್ಲಿ ಗೋವಿಗಾಗಿ ಮೇವು ಅಭಿಯಾನ ನಡೆಯುತ್ತಿವೆ. ಗೋರಕ್ಷಣೆಯ ಕಾರ್ಯದಲ್ಲಿ ಈ ಮೂಲಕವೂ ಎಲ್ಲರೂ ತೊಡಗಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟಿದ್ದಾರೆ.

# ಹುಲಿಗಳನ್ನು ರಕ್ಷಿಸಲು ಕಾಡು ಉಳಿಸಿ



ಮೈಸೂರು, ಆ. 10– ಇಡೀ ದೇಶದಲ್ಲಿ ಹುಲಿಗಳು ವಾಸವಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದ್ದು, ಹುಲಿ ಸಂತತಿಯನ್ನು ಉಳಿಸಿ, ಪೋಷಿಸಬೇಕಿದೆ ಎಂದು ಶ್ರೀ ಚಾಮರಾಜೇಂದ್ರ ಮೃಗಾಲಯದ ಶಿಕ್ಷಣ ಅಧಿಕಾರಿ ಎಂ.ಎಸ್. ಸುಜೋಷ ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಟಿಟಿಎಲ್ ಕಾಲೇಜ್ ಆವರಣದಲ್ಲಿ, ಟಿಟಿಎಲ್ ಟ್ರಸ್ಟ್ ಮತ್ತು ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಟಿಟಿಎಲ್ ವಾಣಿಜ್ಯ ವ್ಯವಹಾರ ನಿರ್ವಹಣಾ ಕಾಲೇಜು ಮತ್ತು ಟಿಟಿಎಲ್ ಸ್ವತಂತ್ರ ಪದವಿ ಪೂರ್ವ ಕಾಲೇಜು ವತಿಯಿಂದ ಅಂತರರಾಷ್ಟ್ರೀಯ ಹುಲಿ ದಿನಾಚರಣೆ ಅಂಗವಾಗಿ ನಡೆದ ಹುಲಿ ಸಂರಕ್ಷಣಾ ಹಾಗೂ ಜಾಗೃತಿ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನಂತೆ ಪ್ರಾಣಿಗಳಲ್ಲಿ ಸಹ ಜೀವನಶೈಲಿಯ ಒಂದು ಕೌತುಕ ಸಾಮಾನ್ಯ. ಹುಲಿ, ಸಿಂಹ ಇನ್ನಿತರೆ ವನ್ಯಜೀವಿಗಳ ಜೀವನಶೈಲಿ ಹೇಗೆ ಎಂಬುದರ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು. ವಿದ್ಯಾರ್ಥಿಗಳಿಗೆ ಹುಲಿಗಳ ಬಗ್ಗೆ ಮಾಹಿತಿಯನ್ನು ನೀಡಬೇಕು. ಕಾಡಿನಲ್ಲಿ ಮತ್ತು ನಾಡಿನಲ್ಲಿ ಹುಲಿಗಳನ್ನು ಪತ್ತೆ ಹಚ್ಚಲು, ಅವುಗಳ ಹೆಜ್ಜೆ ಗುರುತು, ಲದ್ದಿ, ಕ್ಯಾಮರಾ, ಟ್ರಾಪಿಂಗ್ ಮೂಲಕ ಪತ್ತೆ ಹಚ್ಚಬಹುದು ಎಂದು ಮಕ್ಕಳಲ್ಲಿ ಜಾಗೃತಿ ಮೂಡಿಸಿದರು.

ಇದೇ ಸಂದರ್ಭದಲ್ಲಿ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ವಿ.ಪ್ರಶಾಂತ್, ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಸಾಮಾಜಿಕ ಹೋರಾಟಗಾರ ಅಜಯ್‌ಶಾಸ್ತ್ರಿ, ಸ್ವತಂತ್ರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಎಸ್.ಭ್ರಮರಾಂಬ, ಹಿರಿಯ ಪ್ರಾಧ್ಯಾಪಕರಾದ ಎನ್.ಎಂ.ರಾಮಚಂದ್ರಯ್ಯ, ಪದವಿ ಕಾಲೇಜು ಮುಖ್ಯಸ್ಥರಾದ ಜೆ.ಪ್ರೀತಿ, ಯುವ ರೆಡ್‌ಕ್ರಾಸ್ ಘಟಕದ ಹೆಚ್.ಆರ್. ಗಿರೀಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆಗಳಿಗೆ ಎಸ್‌ಸಿಪಿ, ಟಿಎಸ್‌ಪಿ ಹಣ ಬಳಸಬೇಡಿ

ಮೈಸೂರು,ಆ.10(ಎಂಟಿವೈ)– ರಾಜ್ಯ ಸರ್ಕಾರ ಘೋಷಿಸಿರುವ ಐದು ಗ್ಯಾರಂಟಿ ಯೋಜನೆಗಳಿಗಾಗಿ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಿಂದ ಹಣ ಬಳಸದಂತೆ ಕರ್ನಾಟಕ ರಾಜ್ಯ ದಲಿತ ವೇದಿಕೆ ಅಧ್ಯಕ್ಷ ಎಂ. ನರಸಿಂಹಮೂರ್ತಿ ಒತ್ತಾಯಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಅಭಿವೃದ್ಧಿಗಾಗಿ ಜಾರಿಗೆ ತಂದಿರುವ ಮಹತ್ತರ ಯೋಜನೆಯಾದ ಎಸ್‌ಸಿಪಿ, ಟಿಎಸ್‌ಪಿ ಶೋಷಿತ ಸಮುದಾಯಕ್ಕೆ ತುಳಿತಕ್ಕೊಳಗಾದ ವಿದ್ಯಾರ್ಥಿಗಳು, ನಿರುದ್ಯೋಗಿಗಳ ಉತ್ತಮ ಭವಿಷ್ಯಕ್ಕಾಗಿ ಬಹುಮುಖ್ಯ ಪಾತ್ರವಹಿಸಿತ್ತು. ಆದರೆ ಈಗಿನ ರಾಜ್ಯ ಸರ್ಕಾರ ಘೋಷಣೆ ಮಾಡಿರುವ 5 ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಿಂದ 11 ಸಾವಿರ ಕೋಟಿ ರೂ. ಬಳಸಲು ನಿರ್ಧರಿಸಿರುವುದು ಖಂಡನೀಯ ಎಂದರು.

ಈ ಹಿಂದೆ ಬಿಜೆಪಿ ಸರ್ಕಾರ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಿಂದ ಹಣವನ್ನು ಮೆಟ್ರೋ ಕಾಮಗಾರಿಗೆ ಬಳಸಲು ಮುಂದಾಗಿದ್ದಾಗ ಕಾಂಗ್ರೆಸ್ ಖಂಡಿಸಿತ್ತು. ಆದರೆ ಈಗ ಅದೇ ಕೆಲಸ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವುದು ಸರಿಯಲ್ಲ. ಹೀಗಾಗಿ ಈ ನಿರ್ಧಾರ ಹಿಂಪಡೆಯಬೇಕು. ಆ ಹಣವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಏಳಿಗೆಗಾಗಿ ಮಾತ್ರ ಬಳಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ದಲಿತ ವೇದಿಕೆಯ ಮುಖಂಡರಾದ ಕೃಷ್ಣನಾಯಕ, ಶಿವಕುಮಾರ್, ಮರಿಸ್ವಾಮಿನಾಯಕ, ರಮ್ಮನಹಳ್ಳಿ ನಾಗರಾಜು, ವಾಲ್ಮೀಕಿ ನಿಂಗರಾಜು ಇದ್ದರು.

# ಆ. 13ರಂದು ವಧು–ವರರ ಸಮಾವೇಶ

ಮೈಸೂರು, ಆ. 10– ಮೈಸೂರು ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ವತಿಯಿಂದ ಒಕ್ಕಲಿಗರ ಸಮಾವೇಶವನ್ನು ಆ. 13 ರಂದು ಬೆಳಗ್ಗೆ 9ಕ್ಕೆ ಜಯನಗರದ ಮರುಳೇಶ್ವರ ಸೇವಾ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಭಾಗವಹಿಸುವಂತೆ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ ಕೋರಿದ್ದಾರೆ.




ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ವಿಕ್ರಾಂತ್ ಟೈರ್ಸ್ ಎಂಪ್ಲಾಯೀಸ್ ಯೂನಿಯನ್‌ನ ಅಧ್ಯಕ್ಷರಾಗಿ ಚಂದನ್, ಪ್ರಧಾನ ಕಾರ್ಯದರ್ಶಿಯಾಗಿ ಬಿ. ಚನ್ನಕೇಶವ, ಉಪಾಧ್ಯಕ್ಷ 'ಎ'– ಎಂ. ಅಶೋಕ್, ಉಪಾಧ್ಯಕ್ಷ 'ಬಿ'– ದಾದಾಪೀರ್, ಜಂಟಿ ಕಾರ್ಯದರ್ಶಿ 'ಎ'–ಹೆಚ್.ಎಸ್. ಶಿವಕುಮಾರ್, ಜಂಟಿ ಕಾರ್ಯದರ್ಶಿ 'ಬಿ'–ಬಿ.ಆರ್. ಕಾಂತರಾಜು, ಖಜಾಂಚಿ–ಆರ್. ರವಿಕುಮಾರ್ ಆಯ್ಕೆಯಾದರು.

# ನಟನದಲ್ಲಿ ಮತ್ತೆ 'ಕೃಷ್ಣೇಗೌಡರ ಆನೆ'

ಮೈಸೂರು, ಆ. 10– ಮೈಸೂರಿನ ರಾಮಕೃಷ್ಣನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಮೈಸೂರಿನ ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಆ.13ರಂದು ಸಂಜೆ 6.30ಕ್ಕೆ ಪೂರ್ಣಚಂದ್ರ ತೇಜಸ್ವಿ ಅವರ ಕಥೆ ಆಧಾರಿತ 'ಕೃಷ್ಣೇಗೌಡರ ಆನೆ' ನಾಟಕ ಮಂಡ್ಯ ರಮೇಶ್ ಅವರ ನಿರ್ದೇಶನದಲ್ಲಿ ಪ್ರದರ್ಶನಗೊಳ್ಳಲಿದೆ.

ನಾಟಕದ ರಂಗರೂಪ ಶ್ರೀ ಶಶಿಕಾಂತ ಯಡಹಳ್ಳಿ ಹಾಗೂ ವಿನ್ಯಾಸ ನಟನ ರಂಗಶಾಲೆಯ ಪ್ರಾಂಶುಪಾಲರಾದ ಮೇಘ ಸಮೀರ ಅವರದ್ದು. ಮುಖ್ಯ ಅತಿಥಿಗಳಾಗಿ ಮಂಡ್ಯ ಜಿಲ್ಲಾಧಿಕಾರಿ ಡಾ. ಕುಮಾರ್, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಖ್ಯಾತ ವಾಗ್ಮಿ ಪ್ರೊ. ಎಂ.ಕೃಷ್ಣೇಗೌಡ, ಪ್ರಗತಿಪರ ರೈತ ನವೀನ ಸಂಗಾಪುರ ಭಾಗವಹಿಸಲಿದ್ದಾರೆ. ಮಾಹಿತಿಗಾಗಿ 7259537777, 9480468327, 9845595505 ಸಂಪರ್ಕಿಸಬಹುದು.

# ನೇಗಿಲಯೋಗಿ ಕುಟುಂಬಗಳ ಸಮ್ಮಿಲನ ಕಾರ್ಯಕ್ರಮ



ಮೈಸೂರು, ಆ. 10– ನೇಗಿಲಯೋಗಿ ಸಮಾಜಸೇವಾ ಟ್ರಸ್ಟಿನ ಅಂಗ ಸಂಸ್ಥೆಯಾದ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಗರದ ಕೆ.ಜಿ. ಕೊಪ್ಪಲಿನ ಮರಳೇಶ್ವರ ಸೇವಾಭವನದಲ್ಲಿ ನೇಗಿಲಯೋಗಿ ಕುಟುಂಬಗಳ ಸಮ್ಮಿಲನ ಕಾರ್ಯಕ್ರಮವು ಇತ್ತೀಚೆಗೆ ಯಶಸ್ವಿಯಾಗಿ ನಡೆಯಿತು.

ಮೊದಲಿಗೆ ಮಂಡ್ಯ ಮತ್ತು ಮೈಸೂರಿನ ನೇಗಿಲಯೋಗಿ ಕುಟುಂಬಗಳ ನಡುವೆ ಬಾಂಧವ್ಯ ಮತ್ತು ಸಾಮರಸ್ಯ ಬೆಸೆಯುವ ದಿಕ್ಕಿನಲ್ಲಿ ಕುಟುಂಬದ ಸದಸ್ಯರ ಪರಸ್ಪರ ಪರಿಚಯ ನಡೆಯಿತು. ಬಳಿಕ ಮಕ್ಕಳಿಗೆ, ಮಹಿಳೆಯರಿಗೆ, ಪುರುಷರಿಗೆ ಹಾಗೂ ದಂಪತಿಗೆ ಪ್ರತ್ಯೇಕವಾಗಿ ಸ್ಮರಣಾ ಶಕ್ತಿ ಸ್ಪರ್ಧೆ, ಸಂಗೀತ ಕುರ್ಚಿ ಸ್ಪರ್ಧೆ, ಮೂಕಾಭಿನಯ ಸ್ಪರ್ಧೆ, ವೃತ್ತ ಓಟದ ಗುಂಪು ರಚನೆ ಸ್ಪರ್ಧೆ, ಮೂಕಾಭಿನಯ ಸ್ಪರ್ಧೆ, ಗಾಯನದಂತಹ ಮನರಂಜನಾತ್ಮಕ ಮತ್ತು ಕ್ರೀಡಾ ಸ್ಪರ್ಧೆಗಳು ಜರುಗಿದವು. ಸಮಾಜದ ವಿವಿಧ ಕ್ಷೇತ್ರದ ಗಣ್ಯ ಸಾಧಕರಾದ ಕನ್ನಡಪರ ಹೋರಾಟಗಾರ ಎಂ. ಮೋಹನ್ ಕುಮಾರ್ ಗೌಡ, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ ಮಾಜಿ ಅಧ್ಯಕ್ಷ ಕೆ. ವಿವೇಕಾನಂದ, ಶಾಂತವೇರಿ ಗೋಪಾಲಗೌಡ ಆಸ್ಪತ್ರೆಯ ಡಾ.ಸುಶ್ರುತ್, ಐಪಿಎಸ್ ಅಧಿಕಾರಿ ಡಾ.ಎ.ಎನ್. ಪ್ರಕಾಶ್ ಗೌಡ, ದೇವರಾಜ ವಿಭಾಗದ ಎಸಿಪಿ ಶಾಂತಮಲ್ಲಪ್ಪ, ಕೆ.ಎಸ್.ಆರ್.ಸಿ. ನಿವೃತ್ತ ಘಟಕ ವ್ಯವಸ್ಥಾಪಕ ಲಕ್ಷ್ಮಣ್ ಗೌಡ, ವಲಯ 55ರ ಆರ್.ಟಿ.ಓ. ಅಧಿಕಾರಿ ಎಲ್. ದೀಪಕ್, ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಒ ರಾಜೇಶ್ ಗೌಡ, ಮಹಾನಗರ ಪಾಲಿಕೆ ಸದಸ್ಯ ಎಂ.ಶಿವಕುಮಾರ್, ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್ ಇತರರನ್ನು ಗೌರವಿಸಲಾಯಿತು.

ಸ್ಪರ್ಧಾ ವಿಜೇತರಿಗೆ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ನಿವೃತ್ತ ವಿಜ್ಞಾನಿ ಡಾ. ಮಹಾದೇವಯ್ಯ, ಕರ್ನಾಟಕ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಲಯನ್ ಸಂಸ್ಥೆಯ ರಾಜ್ಯಪಾಲ ಕೆ. ದೇವೇಗೌಡ ಬಹುಮಾನ ವಿತರಿಸಿದರು. ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ. ಮಂಜೇಗೌಡ, ನೇಗಿಲಯೋಗಿ ಸಮಾಜಸೇವಾ ಟ್ರಸ್ಟ್ ಅಧ್ಯಕ್ಷ ಡಿ. ರವಿಕುಮಾರ್, ಸಾಹಿತಿಗಳಾದ ಟಿ. ಸತೀಶ್ ಜವರೇಗೌಡ, ಡಾ.ನೀ.ಗೂ. ರಮೇಶ್, ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ಜೆ. ಶೋಭಾ, ಪ್ರಧಾನ ಕಾರ್ಯದರ್ಶಿ ಮಂಜುಳಾ ಭದ್ರೇಗೌಡ, ಖಜಾಂಚಿ ಸುವರ್ಣ ರಾಜ್ ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಜೆ.ಸಿ.ನಗರದಲ್ಲಿ ಮಹಿಳೆ ಚಿನ್ನದ ಸರ ಅಪಹರಣ

ಮೈಸೂರು, ಆ.10(ಆರ್‌ಕೆ)– ವಾಯುವಿಹಾರ ಮುಗಿಸಿ ವಾಪಸಾಗುತ್ತಿದ್ದ ಮಹಿಳೆಯ ಚಿನ್ನದ ಸರ ಎಗರಿಸಿ ಪರಾರಿಯಾಗಿರುವ ಘಟನೆ ಮೈಸೂರಿನ ಜೆ.ಸಿ. ನಗರದಲ್ಲಿ ಮಂಗಳವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಜೆ.ಸಿ.ನಗರ 7ನೇ ಮೇನ್ ನಿವಾಸಿ ಭಾರತಿ (58), 50 ಗ್ರಾಂ ಚಿನ್ನದ ಸರ ಪೈಕಿ 12 ಗ್ರಾಂ ತುಣುಕು ಕಳೆದುಕೊಂಡವರು. ಇಂದು ಬೆಳಗ್ಗೆ 7.15 ಗಂಟೆ ವೇಳೆ ವಾಯುವಿಹಾರಕ್ಕೆ ತೆರಳಿದ್ದರು. ಬಡಾವಣೆಯಲ್ಲಿ ವಾಕಿಂಗ್ ಮುಗಿಸಿ ಅಂಗಡಿಯಲ್ಲಿ ಹಾಲು ಖರೀದಿಸಿ ಮನೆಗೆ ಹಿಂದಿರುಗುತ್ತಿದ್ದಾಗ ಹಿಂದಿನಿಂದ ಬೈಕಿನಲ್ಲಿ ಬಂದ ಅಪರಿಚಿತ ಯುವಕರಿಬ್ಬರ ಪೈಕಿ ಓರ್ವ ಭಾರತಿ ಅವರ ಕೊರಳಲ್ಲಿದ್ದ 50 ಗ್ರಾಂ ಚಿನ್ನದ ಸರ ಕೀಳಲು ಯತ್ನಿಸಿದ್ದಾನೆ.

ತಕ್ಷಣ ಎಚ್ಚೆತ್ತ ಭಾರತಿ ಅವರು ಸರವನ್ನು ಗಟ್ಟಿಯಾಗಿ ಹಿಡಿದುಕೊಂಡು ಸೆಣಸಾಡಿದ ಕಾರಣ ಖದೀಮನ ಕೈಗೆ ಬರೀ 12 ಗ್ರಾಂ ಸರದ ತುಣುಕು ಸಿಕ್ಕಿದೆ. ಸರದ ತುಣುಕಿನೊಂದಿಗೆ ಬೈಕ್ ನಿಲ್ಲಿಸಿಕೊಂಡು ನಿಂತಿದ್ದ ಮತ್ತೊಬ್ಬನೊಂದಿಗೆ ಪರಾರಿಯಾಗಿದ್ದಾನೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಪೊಲೀಸರು ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡರು. ಘಟನೆ ನಡೆದ 8ನೇ ಕ್ರಾಸ್‌ನಲ್ಲಿ ಸಿಸಿ ಕ್ಯಾಮರಾಗಳಿಲ್ಲದ ಕಾರಣ, ಸುತ್ತಲಿನ ರಸ್ತೆಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾಗಳಲ್ಲಿ ಸೆರೆಯಾಗಿರುವ ಬೈಕ್ ಸವಾರರ ದೃಶ್ಯಾವಳಿ ಫುಟೇಜ್‌ಗಳನ್ನು ಸಂಗ್ರಹಿಸಿರುವ ನಜರ್‌ಬಾದ್ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದಾರೆ.



ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ. ಭೇರ್ಯ ರಾಮಕುಮಾರ್ ಅವರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸಾಹಿತ್ಯ, ಕನ್ನಡ ನಾಡು, ನುಡಿ ಸೇವೆ, ಪರಿಸರ ಸೇವೆಗಾಗಿ 2023ರ ಸತ್ಯವತಿ ವಿಜಯರಾಘವ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ವಿಶ್ರಾಂತ ನ್ಯಾಯಮೂರ್ತಿ ಬಿ. ವೀರಪ್ಪ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮಹೇಶ್ ಜೋಶಿ, ಬೆಂಗಳೂರು ವಿಶ್ವವಿದ್ಯಾನಿಲಯ ಕುಲಪತಿ ಡಾ. ನಿರಂಜನ ವಾನಳ್ಳಿ, ದಾನಿಗಳಾದ ಡಾ. ಪುಷ್ಪ ಅಯ್ಯಂಗಾರ್, ಎ. ವೈದೇಹಿ, ಎನ್.ಕೆ. ರಮೇಶ್, ಪ. ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.

# ಅರ್ಚಕರ ಸಮಸ್ಯೆಗೆ ಪರಿಹಾರಕ್ಕೆ ಆಗ್ರಹಿಸಿ ಹೋರಾಟದ ಸಿದ್ಧತೆ

## ಮೈಸೂರಿನಲ್ಲಿ ನಡೆದ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಶ್ರೀವತ್ಸ ಹೇಳಿಕೆ



ಮೈಸೂರು, ಆ. 10– ಮುಜರಾಯಿ ದೇವಾಲಯಗಳ ಅರ್ಚಕರು, ಆಗಮಿಕರು ಹಾಗೂ ನೌಕರರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು, ಪರಿಹಾರ ಕಲ್ಪಿಸುವಂತೆ ಆಗ್ರಹಿಸುವ ಉದ್ದೇಶದಿಂದ ದೊಡ್ಡಮಟ್ಟದ ಹೋರಾಟವನ್ನು ಬೆಂಗಳೂರಿನಲ್ಲಿ ನಡೆಸಲಾಗುವುದು ಎಂದು ರಾಜ್ಯ ಮುಜರಾಯಿ ದೇವಾಲಯಗಳ ಅರ್ಚಕರು, ಆಗಮಿಕರು ಹಾಗೂ ನೌಕರರ ಸಂಘದ ಅಧ್ಯಕ್ಷ ಶ್ರೀವತ್ಸ ತಿಳಿಸಿದರು.

ಜಿಲ್ಲಾ ಮುಜರಾಯಿ ದೇವಾಲಯಗಳ ಅರ್ಚಕರು, ಆಗಮಿಕರು ಹಾಗೂ ನೌಕರರ ಸಂಘದಿಂದ ನಗರದ ದಿಗಂಬರ ಜೈನ ಬಸದಿಯಲ್ಲಿ ಬುಧವಾರ ಆಯೋಜಿಸಿದ್ದ ಪದಾಧಿಕಾರಿಗಳ ಮಹಾಸಭೆ ಮತ್ತು ಕುಂದುಕೊರತೆ ಸಭೆಯಲ್ಲಿ ಅವರು ಮಾತನಾಡಿದರು. ದೇವರನ್ನು ಪೂಜಿಸುವ ಅವಕಾಶ ಸಿಗುವ ಅರ್ಚಕರಾಗುವುದು ಪೂರ್ವ ಜನ್ಮದ ಪುಣ್ಯ. ಆದರೆ, ಗ್ರಾಮೀಣ ಪ್ರದೇಶದ ಅರ್ಚಕರು ಬಹಳ ಆರ್ಥಿಕ ತೊಂದರೆ ಅನುಭವಿಸುತ್ತಿದ್ದಾರೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು, ಮದುವೆ ಮಾಡಲು ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ರಾಜ್ಯದ 35 ಸಾವಿರ ದೇವಸ್ಥಾನಗಳು ಉಳಿಯಬೇಕಾದರೆ ಅರ್ಚಕರೇ ಕಾರಣ. ಅವರು ನಿತ್ಯವೂ ಬಂದು ಪೂಜೆ ಸಲ್ಲಿಸುತ್ತಿರುವುದರಿಂದ ದೇವಸ್ಥಾನಗಳು ಉಳಿದಿವೆ. ಇಲ್ಲದಿದ್ದರೆ ಒತ್ತುವರಿ ಆಗುತ್ತಿದ್ದವು ಎಂದು ತಿಳಿಸಿದರು.

**ಗಮನ ಕೊಡುತ್ತಿಲ್ಲ:** ಭೂಸುಧಾರಣಾ ಕಾಯ್ದೆಯ ಪರಿಣಾಮ ಅರ್ಚಕರು ಜಮೀನುಗಳನ್ನು ಕಳೆದುಕೊಂಡರೂ ಇತ್ತ ಸರ್ಕಾರ ಇವರ ಕಡೆ ಗಮನ ಕೊಡುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಹಿಂದೂ ಧರ್ಮ, ಸಂಸ್ಕೃತಿ ಉಳಿದಿರುವುದಕ್ಕೆ ಅರ್ಚಕರೇ ಕಾರಣ. ಆದರೆ, ಅವರಿಗೆ ಯಾವುದೇ ವೇತನ ಅಥವಾ ಗೌರವ ಸಂಭಾವನೆ ಕೊಡುತ್ತಿಲ್ಲ. ಪೂಜಾ ಸಾಮಗ್ರಿಗೆ ಮಾತ್ರವೇ ಹಣ ನೀಡಲಾಗುತ್ತಿದೆ. ಹೀಗಾಗಿ ವೇತನ ಸೇರಿದಂತೆ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಟ ಮಾಡಬೇಕು. ಅರ್ಚಕರಲ್ಲಿ ಒಂದೇ ಜಾತಿ ಎಂಬ ಭಾವನೆ ಎಲ್ಲರಲ್ಲೂ ಬರಬೇಕು. ನಮ್ಮನ್ನು ಹೀಯ್ಯಾಳಿಸುವವರ ವಿರುದ್ಧ ಒಗ್ಗಟ್ಟಾಗಿ ಹೋರಾಡಬೇಕು ಎಂದು ತಿಳಿಸಿದರು.

ಸಂಘದ ಹೋರಾಟದ ಫಲವಾಗಿ ಅರ್ಚಕರಿಗೆ ವಿಮಾ ಸೌಲಭ್ಯ ದೊರೆತಿದೆ. ನಿಧನರಾದರೆ 2 ಲಕ್ಷ ರೂ. ಪರಿಹಾರ ನೀಡುವಂತೆ, ತಿಂಗಳಿಗೆ 10ಸಾವಿರ ಗೌರವ ಸಂಭಾವನೆ ನೀಡುವಂತೆ ಕೋರಲಾಗಿದೆ ಎಂದು ಹೇಳಿದರು.

ತಸ್ತಿಕ್ ಅಥವಾ ನೇಮಕಾತಿ ಸಂದರ್ಭದಲ್ಲಿ ಯಾರಿಗೂ ಹಣ ಕೊಡಬಾರದು ಎಂದು ಕೋರಿದ ಅವರು, ಅರ್ಚಕರನ್ನು 65 ವರ್ಷಕ್ಕೆ ನಿವೃತ್ತಿಗೊಳಿಸಬಾರದೆಂದು ಸುಪ್ರೀಂಕೋರ್ಟ್ ಆದೇಶವಿದೆ ಎಂದು ತಿಳಿಸಿದರು. ಜೈನ ಸಮಾಜದ ಮುಖಂಡ ಸುರೇಶ್ ಕುಮಾರ್ ಜೈನ್ ಮಾತನಾಡಿ, ಜೈನ ಸಮಾಜದ ಬಸದಿಗಳು ಹಾಗೂ ಅರ್ಚಕರ ಸ್ಥಿತಿ ಶೋಚನೀಯವಾಗಿದೆ. ಅರ್ಚಕರಿಗೆ ಪ್ರತಿ ತಿಂಗಳೂ ಹಣ ಬರುವಂತೆ ಮಾಡಬೇಕು. ಭಕ್ತರು ಹಣ ಠೇವಣಿ ಇಟ್ಟು ಅದು ನೇರವಾಗಿ ಅರ್ಚಕರಿಗೆ ಹೋಗುವಂತೆ ವ್ಯವಸ್ಥೆಯಾಗಬೇಕು ಎಂದು ಸಲಹೆ ನೀಡಿದರು.

ಮಹಾರಾಜ ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲ ಸತ್ಯನಾರಾಯಣ ಮಾತನಾಡಿ, ನಾವು ಪರಕೀಯ ಸಂಪ್ರದಾಯ ಪಾಲಿಸುವುದನ್ನು ನಿಲ್ಲಿಸಬೇಕು. ನಮ್ಮ ಧರ್ಮ–ಸಂಸ್ಕೃತಿ ಯನ್ನು ಪಾಲಿಸಬೇಕು. ತಂದೆಯ ನಂತರ ಅವರ ಮಕ್ಕಳೂ ಅರ್ಚಕರಾಗಬೇಕು. ಇದಕ್ಕಾಗಿ ಆಗಮ ಶಾಸ್ತ್ರ ಕಲಿಯಬೇಕು. ಭಗವಂತ ನಮ್ಮನ್ನು ಸೃಷ್ಟಿಸಿರುವುದೇ ಇದೇ ಕೆಲಸಕ್ಕೆ ಎಂಬ ಭಾವನೆ ಬರಬೇಕು. ಅಧಿಕಾರಿಗಳ ಮುಂದೆ ಕೈಕಟ್ಟಿ ನಿಲ್ಲುವಂತಹ ಕೆಲಸಕ್ಕೆ ಕಳುಹಿಸುವುದು ತಪ್ಪಬೇಕು ಎಂದರು.

ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಮಾತನಾಡಿ, ದೊಡ್ಡ ದೇವಸ್ಥಾನಗಳಿಗೆ ಕೋಟಿಗಟ್ಟಲೆ ಆದಾಯ ಬರುತ್ತಿದೆ. ಅದರಲ್ಲಿ ಸ್ವಲ್ಪ ಪ್ರಮಾಣವನ್ನು ಸಣ್ಣ ದೇವಸ್ಥಾನಗಳಿಗೆ ಕೊಡುವಂತೆ ಮಾಡಬೇಕು. ಹಾಲು, ತೆಂಗಿನಕಾಯಿ, ಹೂವು ಸೇರಿದಂತೆ ಎಲ್ಲಾ ಪೂಜಾ ಸಾಮಗ್ರಿಗಳ ಬೆಲೆ ಜಾಸ್ತಿಯಾಗಿರುವುದನ್ನು ಸರ್ಕಾರದ ಗಮನಕ್ಕೆ ತರಬೇಕು. ಚಾಮುಂಡೇಶ್ವರಿ ಬೆಟ್ಟದ ಪ್ರಾಧಿಕಾರ ರಚಿಸಿದರೆ ನಮಗೆ ಕಷ್ಟವಾಗುತ್ತದೆ. ದೊಡ್ಡ ದೇವಸ್ಥಾನಗಳಿಗೆ ಕೋಟಿಗಟ್ಟಲೆ ಆದಾಯ ಬರುತ್ತಿದೆ. ಅದರಲ್ಲಿ ಸ್ವಲ್ಪ ಪ್ರಮಾಣವನ್ನು ಸಣ್ಣ ದೇವಸ್ಥಾನಗಳಿಗೆ ಕೊಡುವಂತೆ ಮಾಡಬೇಕು.

ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಇಳೈ ಆಳ್ವಾರ್ ಸ್ವಾಮೀಜಿ, ಮೈಸೂರು ಜಿಲ್ಲಾ ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಶ್ರೇಣಿಕ, ಸನ್ಮತಿ, ಸರ್ವೇಶ, ಕಿರಾಳು ಮಹೇಶ್, ಬಸದಿಯ ಟ್ರಸ್ಟಿ ಮಹೇಶ್ ಪ್ರಸಾದ್ ಇನ್ನಿತರರು ಹಾಜರಿದ್ದರು.



ಹೊಸಮಾಳ ಗ್ರಾಮದಲ್ಲಿ ಹಾಲು ಶಿತಲೀಕರಣ ಘಟಕಕ್ಕೆ ಚಾಲನೆ ನೀಡಿದ ಸಚಿವ ಬಿ.ನಾಗೇಂದ್ರ.

# ಪರಿಶಿಷ್ಟ ವರ್ಗಗಳ ಇಲಾಖೆಯಿಂದ ಸಿಗುವ ಸಾಲ ಸೌಲಭ್ಯಗಳು ಹಾಲು ಉತ್ಪಾದಕರ ಸಂಘಕ್ಕೂ ಕೊಡಿಸುವೆ

## ಹೊಸಮಾಳದಲ್ಲಿ ಹಾಲು ಶಿತಲೀಕರಣ ಉದ್ಘಾಟಿಸಿದ ಸಚಿವ ನಾಗೇಂದ್ರ ಭರವಸೆ

- ಪ್ರತಿ ಮಹಿಳೆಯರಿಗೆ ಹಸುಗಳ ವಿತರಿಸಲು ಕ್ರಮ
- ಹೆಚ್.ಡಿ.ಕೋಟೆಯಲ್ಲಿ 178 ಹಾಲು ಉತ್ಪಾದಕರ ಸಂಘಗಳಿವೆ

ಹೆಚ್.ಡಿ.ಕೋಟೆ, ಆ.10– ಹೈನುಗಾರಿಕೆ ರೈತರ ಬೆನ್ನೆಲುಬಾಗಿದ್ದು, ಪರಿಶಿಷ್ಟ ವರ್ಗಗಳ ಇಲಾಖೆ ವತಿಯಿಂದ ಸಿಗುವ ಸಾಲ ಸೌಲಭ್ಯಗಳನ್ನು ಹಾಲು ಉತ್ಪಾದಕರ ಸಹಕಾರ ಸಂಘಕ್ಕೂ ನೀಡಲು ಕ್ರಮ ವಹಿಸುತ್ತೇನೆ ಎಂದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಯುವ ಜನ ಕ್ರೀಡಾ ಮತ್ತು ಸಬಲೀಕರಣ ಸಚಿವರಾದ ಬಿ.ನಾಗೇಂದ್ರ ಭರವಸೆ ನೀಡಿದ್ದಾರೆ.

ಮೈಮುಲ್ ವತಿಯಿಂದ ತಾಲೂಕಿನ ಹೊಸಮಾಳ ಗ್ರಾಮದಲ್ಲಿ ನಿರ್ಮಾಣಗೊಂಡಿರುವ ಹಾಲು ಶಿತಲೀಕರಣ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳೆಯರು ಆರ್ಥಿಕವಾಗಿ ಮುಂದೆ ಬರಲು ಹಾಲು ಉತ್ಪಾದಕರ ಸಂಘ ಮುಖ್ಯ ಪಾತ್ರ ವಹಿಸುತ್ತದೆ. ಹಾಗಾಗಿ ಮಹಿಳೆಯರ ಸಬಲೀಕರಣ ಅತಿ ಮುಖ್ಯ ಎಂದರು.

ಇಲಾಖೆಯಿಂದ ಬರುವ ಎಲ್ಲಾ ರೀತಿಯ ನೆರವನ್ನು ಹಾಲು ಉತ್ಪಾದಕರ ಸಂಘಕ್ಕೆ ನೀಡಲಾಗುತ್ತದೆ. ಪ್ರತಿಯೊಬ್ಬ ಮಹಿಳೆಯರಿಗೂ ಹಸುಗಳನ್ನು ನೀಡಲು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಭರವಸೆ ನೀಡಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ ಕಳೆದ ನನ್ನ ಐದು ವರ್ಷದ ಅಧಿಕಾರದ ಅವಧಿಯಲ್ಲಿ ಹಾಲು ಉತ್ಪಾದಕರ ಸಂಘಗಳ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟು ಕೆಲಸ ಮಾಡಿದ್ದೇನೆ. ನಾನು ಯಾವುದೇ ಜಾತಿ ರಾಜಕೀಯ ಮಾಡದೆ ಕ್ಷೇತ್ರದ ಅಭಿವೃದ್ಧಿಗೆ ಒತ್ತು ಕೊಟ್ಟು ಕೆಲಸ ಮಾಡಿದ್ದೇನೆ ಎಂದು ನುಡಿದರು.

ಹಾಲು ಪವಿತ್ರವಾದದ್ದು, ಹಾಲಿನಲ್ಲಿ ಜಾತಿ ರಾಜಕೀಯ ಬೆರಸಬಾರದು, ಹುಟ್ಟಿದ ಮಗುವಿನಿಂದ ಸಾಯುವ ವಯೋವೃದ್ಧರವರೆಗೂ ಹಾಲು ಅವಶ್ಯಕವಾದದ್ದು, ರೈತನ ಬೆನ್ನಲುಬು ಹೈನುಗಾರಿಕೆ. ತಾಲೂಕಿನಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಲೀಟರ್ ಹಾಲನ್ನು ಸಂಗ್ರಹಿಸಲಾಗುತ್ತದೆ ಎಂದು ಹೇಳಿದರು.

ಹಾಲು ಉತ್ಪಾದನೆ ಹೆಚ್ಚಾದಂತೆ ಯುವಕರಿಗೆ ಉದ್ಯೋಗ ಸಿಗುತ್ತದೆ. ಮುಂದಿನ ದಿನಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಇನ್ನೂ ಹೆಚ್ಚಿನ ಸಹಕಾರ ನೀಡಲಾಗುತ್ತದೆ ಎಂದು ತಿಳಿಸಿದರು.

> ಉತ್ತಮ ಗುಣಮಟ್ಟದ ಹಾಲನ್ನು ಕೊಡುವುದರ ಮೂಲಕ ನಿಮ್ಮ ಸಹಕಾರ ಸಂಘಗಳನ್ನು ಬೆಳೆಸುವಲ್ಲಿ ನೀವು ಮುಂದಾದರೆ ತಾಲೂಕಿನಲ್ಲಿ ಹಾಲು ಉತ್ಪಾದಕರಿಗೆ ಹೆಚ್ಚಿನ ಅನುದಾನ ಭರಿಸುವುದರ ಜೊತೆಗೆ ಸಂಘಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಸುಗಳನ್ನು ಕೊಡಿಸುವೆ.
> – ಸಚಿವ ನಾಗೇಂದ್ರ

ಮೈಮುಲ್ ನಿರ್ದೇಶಕ ಈರೇಗೌಡ ಮಾತನಾಡಿ, ನಾನು ನಿರ್ದೇಶಕ ಆಗುವುದಕ್ಕಿಂತ ಮುಂಚೆ ತಾಲೂಕಿನಲ್ಲಿ ಕೇವಲ 26 ಹಾಲು ಉತ್ಪಾದಕರ ಸಂಘಗಳಿದ್ದವು, ನಂತರದ ದಿನಗಳಲ್ಲಿ 178 ಸಂಘಗಳನ್ನು ಮಾಡಲಾಗಿದೆ. ಸಹಕಾರ ಸಂಘದಲ್ಲಿ ರಾಜಕೀಯ ಹಾಗೂ ಹಾಲಿನಲ್ಲಿ ನೀರು ಬೆರಸಬಾರದು ಎಂದು ತಿಳಿಸಿದರು.

ಹೊಸಮಾಳ ಗ್ರಾಮದಲ್ಲಿ 25ನೇ ಬಿಎಂಸಿ ಕೇಂದ್ರ ಸ್ಥಾಪನೆ ಮಾಡಲಾಗಿದೆ, ರೈತರಿಗೆ ಯಾವುದಾದರೂ ಸರ್ಕಾರ ನೇರ ವಾಗಿ ಸಹಾಯಧನ ನೀಡಿದೇ ಎಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ. ಪ್ರಸ್ತುತ ರೈತರ ಅಭಿವೃದ್ಧಿ ಪರ ಸರ್ಕಾರ ಇದೆ. ಅದೇ ರೀತಿ ಶಾಸಕರು ಕೂಡ ಹಾಲು ಉತ್ಪಾದಕರ ಸಹಕಾರ ಸಂಘಗಳ ಕಟ್ಟಡಕ್ಕೆ ಹೆಚ್ಚು ಅನುದಾನ ನೀಡಿ ಸಹಕಾರ ನೀಡಿದ್ದಾರೆ ಎಂದರು.

ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ಜಯರಾಮ, ಮೈಮುಲ್ ವ್ಯವಸ್ಥಾಪಕ ಡಾ. ದಿವಾಕರ್, ವಿಸ್ತರಣಾಧಿಕಾರಿ ಆರೀಫ್ ಇಕ್ಬಾಲ್, ಸುಬ್ರಹ್ಮಣ್ಯ, ಯಶೋಧ, ಚಲುವರಾಜು, ಡಾ.ಮುಕುಂದ, ಎಚ್.ಸಿ.ನರಸಿಂಹಮೂರ್ತಿ, ರಾಮಪ್ಪ ಬಾರ್ಕಿ, ಮಂಜು, ಬಿ.ಲಿಂಗೇಗೌಡ, ದೇವರಾಜು, ಬೈರೇಗೌಡ, ರವಿಕುಮಾರ್, ರವೀಂದ್ರ, ಕೃಷ್ಣ, ನಾಗರಾಜು, ಕುಮಾರ್, ಅಕ್ಕಮ್ಮ, ಕೆಂಪಮ್ಮ, ಪಾರ್ವತಿ ಇನ್ನು ಮುಂತಾದವರು ಹಾಜರಿದ್ದರು.

# ಹೆಬ್ಬಾಡಿಹುಂಡಿಯಲ್ಲಿ ಹೆಬ್ಬಾಳಮ್ಮ ದೇವಸ್ಥಾನ ಸ್ವಚ್ಛತಾ ಕಾರ್ಯಕ್ರಮ



ಹೆಬ್ಬಾಡಿಹುಂಡಿ, ಆ.10– ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ವತಿಯಿಂದ ಮೇಳಾಪುರ ವಲಯದ ಹೆಬ್ಬಾಡಿಹುಂಡಿ ಗ್ರಾಮದ ಹೊಂಬಾಳಮ್ಮ ದೇವಸ್ಥಾನ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಗ್ರಾಮ ಪಂಚಾಯಿತಿ ಸದಸ್ಯರಾದ ದೀಪಿಕಾ ಸ್ವಚ್ಛತೆ ಮಾಡುವ ಮೂಲಕ ಚಾಲನೆ ನೀಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಿಗುವ ಸೌಲಭ್ಯವನ್ನು ಬಳಸಿಕೊಳ್ಳುವಂತೆ ಮತ್ತು ಯಾವುದೇ ರೀತಿಯ ಲೋಪಗಳು ಬಾರದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಗ್ರಾಮಸ್ಥರಿಗೆ ತಿಳಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಸದಸ್ಯರಿಗೆಲ್ಲ ಪ್ರಸಾದ ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಒಕ್ಕೂಟದ ಅಧ್ಯಕ್ಷೆ ಅಶ್ವಿನಿ, ಮೇಲ್ವಿಚಾರಕರಾದ ಆಶಾರಾಣಿ, ಸೇವಾ ಪ್ರತಿನಿದಿಯಾದ ಮಂಜುಳಾ ಮತ್ತು ಚಂದ್ರಶೇಖರ್ ಹಾಗೂ ಊರಿನ ಮುಖಂಡರು ಸಂಘದ ಸದಸ್ಯರು ಭಾಗವಹಿಸಿದ್ದರು.

# ಹೆಮ್ಮಿಗೆ ಗ್ರಾಪಂನಲ್ಲಿ ಜೆಡಿಎಸ್, ಕಾಂಗ್ರೆಸ್ ಆಡಳಿತ

ತಿ.ನರಸೀಪುರ, ಆ.10– ಹೆಮ್ಮಿಗೆ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ವಸಂತಮ್ಮ ರಾಜಶೇಖರ್ ಅವಿರೋಧವಾಗಿ ಆಯ್ಕೆಯಾದರೆ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಹೆಮ್ಮಿಗೆ ಸೋಮಣ್ಣ ವಿಜೇತರಾದರು.



ತಾಲೂಕಿನ ಹೆಮ್ಮಿಗೆ ಗ್ರಾಮ ಪಂಚಾಯತಿಯಲ್ಲಿ ಒಟ್ಟು 21 ಸದ್ಯಸರಿದ್ದು, ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾಗಿತ್ತು, ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಪಂಗಡ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನ ಜೆಡಿಎಸ್ ಬೆಂಬಲಿತ ಸದಸ್ಯೆ ವಸಂತಮ್ಮ ಒಬ್ಬರೇ ನಾಮಪತ್ರ ಸಲ್ಲಿಸಿದ ಕಾರಣ ವಸಂತಮ್ಮ ರಾಜಶೇಖರ್ ಅಧ್ಯಕ್ಷೆಯಾಗಿ ಅವಿರೋಧ ಆಯ್ಕೆಯಾದರು. ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬೆಂಬಲಿತ ಸದಸ್ಯ ಹೆಮ್ಮಿಗೆ ಸೋಮಣ್ಣ ಹಾಗೂ ಜೆಡಿಎಸ್ ಬೆಂಬಲಿತ ಸದಸ್ಯ ಡಿ.ಮಹದೇವಯ್ಯ ನಾಮಪತ್ರ ಸಲ್ಲಿಸಿದರು. ಸೋಮಣ್ಣ 14 ಮತ ಪಡೆದು ಉಪಾಧ್ಯಕ್ಷರಾಗಿ ಜಯಗಳಿಸಿದರೆ, 7 ಮತ ಪಡೆದು ಡಿ.ಮಹದೇವಯ್ಯ ಸೋಲುಂಡರು. ಚುನಾವಣಾಧಿಕಾರಿಯಾಗಿ ನೀರಾವರಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಶಿವಮಾಧು ಕರ್ತವ್ಯ ನಿರ್ವಹಿಸಿದರು.

ಉಪಾಧ್ಯಕ್ಷ ಹೆಮ್ಮಿಗೆ ಸೋಮಣ್ಣ ಮಾತನಾಡಿ ಕ್ಷೇತ್ರದ ಶಾಸಕರು ಸಮಾಜ ಕಲ್ಯಾಣ ಸಚಿವರಾಗಿರುವುದರಿಂದ ಅವರ ಸಹಕಾರದಿಂದ ಹೆಚ್ಚಿನ ಅನುದಾನ ತಂದು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವುದಾಗಿ ಹೇಳಿದರು. ಚುನಾವಣೆಯಲ್ಲಿ ಸದ್ಯಸರುಗಳಾದ ಸಿಬಿ ಹುಂಡಿ ಚಿನ್ನಸ್ವಾಮಿ, ಪದ್ಮಾವತಿ, ಸೋಮಣ್ಣ ಲಕ್ಷ್ಮಿ, ಎಚ್.ಹೊನ್ನಯ್ಯ, ಕೇಶವ್‌ಮೂರ್ತಿ, ಕಾವ್ಯ, ಡಿ.ಮಹದೇವಯ್ಯ, ದೇವರಾಜು, ಚಿಕ್ಕ ಹೊನ್ನಯ್ಯ, ದೊಡ್ಡಯ್ಯ, ಲಲಿತಾ, ವಿಜಯಂಬ, ದೊಡ್ಡಮ್ಮ, ರಾಜಮ್ಮ, ಗುರುಮೂರ್ತಿ, ಸವಿತಾ, ಉಷಾರಾಣಿ, ರೇಖಾ, ಪಿಡಿಓ ಶ್ರೀನಿವಾಸ್‌ಮೂರ್ತಿ ಭಾಗವಹಿಸಿದ್ದರು. ಮುಖಂಡರಾದ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಹೆಮ್ಮಿಗೆ ಶೇಷಾದಿ, ಮಾಜಿ ಅಧ್ಯಕ್ಷ ಅಕ್ಕೂರು ಗುರುಮೂರ್ತಿ. ಮಾರನಪುರ ಮಾಂತು, ಚಿಕ್ಕ ವೆಂಕಟಯ್ಯ, ರಾಮಚಂದ್ರು, ಆಟೋ ಸೋಮಣ್ಣ, ಶಂಕರ, ರಾಜಣ್ಣ, ಕರಿಯಪ್ಪ, ಸಿಂಡಯ್ಯ, ಈರಯ್ಯ ಮತ್ತಿತರರು ಇದ್ದರು.

# ಸರಗೂರು ಬಳಿ ಬಸ್ ಡಿಕ್ಕಿ: ಬೈಕ್ ಸವಾರ ಸಾವು

ಸರಗೂರು, ಆ.10– ಕೆಎಸ್‌ಆರ್‌ಟಿಸಿ ಬಸ್ಸೊಂದು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಮತ್ತೋರ್ವ ತೀವ್ರವಾಗಿ ಗಾಯಗೊಂಡಿರುವ ಘಟನೆ ಬಿ.ಮಟಗೆರೆ ಸಮೀಪ ಸಂಭವಿಸಿದೆ.

ತಾಲೂಕಿನ ಕಲ್ಲಹಳ್ಳ ಗ್ರಾಮದ ಸತೀಶ್(27) ಎಂಬುವವರು ಮೃತಪಟ್ಟಿದ್ದು, ತೀವ್ರವಾಗಿ ಗಾಯಗೊಂಡಿರುವ ಸಣ್ಣಪ್ಪ ಅವರನ್ನು ಇಲ್ಲಿನ ವಿವೇಕಾನಂದ ಆಸ್ಪತ್ರೆಗೆ ಸೇರಿಸಲಾಗಿದೆ. ಸತೀಶ್ ಸರಗೂರಿನಿಂದ ನಡಹಾಡಿಗೆ ಬೈಕಿನಲ್ಲಿ ತೆರಳುತ್ತಿದ್ದ ಸಂದರ್ಭದಲ್ಲಿ ಸಣ್ಣಪ್ಪ ಬಿ.ಮಟಗೆರೆ ಗ್ರಾಮದವರೆಗೆ ಡ್ರಾಪ್ ಮಾಡುವಂತೆ ಕೇಳಿ ಬೈಕ್ ಹತ್ತಿದ್ದಾನೆ. ಅಲ್ಲಿಂದ ಬೈಕ್ ಸುಮಾರು ಒಂದು ಕಿಮೀ ದೂರ ತೆರಳಿದ ವೇಳೆ ಎದುರಿನಿಂದ ಬಂದ ಬಸ್ ಡಿಕ್ಕಿ ಹೊಡೆದಾಗ ಈ ದುರಂತ ಸಂಭವಿಸಿದೆ. ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಬೋಳೂರು ಹಾಡಿಯಲ್ಲಿ ಸಚಿವ ನಾಗೇಂದ್ರ ವಾಸ್ತವ್ಯ

## 100 ಮನೆಗಳನ್ನು ನಿರ್ಮಿಸಿಕೊಟ್ಟು, ಆಧಾರ್, ರೇಷನ್ ಕಾರ್ಡ್ ಮಾಡಿಸಿಕೊಡಲು ಕ್ರಮಕೈಗೊಳ್ಳುತ್ತೇವೆ



ಹೆಚ್.ಡಿ.ಕೋಟೆ, ಆ.10– ರಾಜ್ಯದ ಕಟ್ಟಕಡೆಯ ಮತ್ತು ತೀರಾ ಹಿಂದುಳಿದಿರುವ ಹಾಡಿಯಾದ ಬೋಳೂರು ಹಾಡಿಯಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಯುವ ಜನ ಕ್ರೀಡಾ ಮತ್ತು ಸಬಲೀಕರಣ ಸಚಿವ ನಾಗೇಂದ್ರ ವಾಸ್ತವ್ಯ ಹೂಡಿ ಆದಿವಾಸಿಗಳ ಜೀವನ ಸ್ಥಿತಿಯನ್ನು ಪರಿಶೀಲಿಸಿದರು.

ಹಾಡಿಯಲ್ಲಿ ವಾಸ್ತವ ಹೂಡಿ ಕುಂದು ಕೊರತೆಗಳನ್ನು ಆಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದ್ದಾರೆ. ಅದರಂತೆ ನಾನು ಹಾಡಿಯಲ್ಲಿ ವಾಸ್ತವ್ಯ ಹೂಡಿ ನಿಮ್ಮ ಸಮಸ್ಯೆಗಳನ್ನು ಆಲಿಸಿದ್ದು, ಅದನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು.


ಶಾಸಕ ಅನಿಲ್ ಚಿಕ್ಕಮಾದು ಅವರು ತಾಲೂಕಿನಲ್ಲಿ ಉತ್ತಮ ಅಭಿವೃದ್ಧಿ ಕೆಲಸ ಮಾಡಿ ಉತ್ತಮ ಯಶಸ್ಸು ಕಂಡಿದ್ದಾರೆ. ಹಾಡಿಯಲ್ಲಿರುವವರಿಗೆ ಆಧಾರ್ ಕಾರ್ಡ್, ರೇಷನ್ ಕಾರ್ಡ್, ಮಹಿಳೆಯರಿಗೆ ಶೌಚಾಲಯ ಇಲ್ಲ ತಿಳಿದುಬಂದಿದ್ದು, ಈ ಹಾಡಿಯಲ್ಲಿ 110 ಮನೆಗಳಿದ್ದು, ಎಲ್ಲ ಮನೆಗಳಿಗೂ ಶೌಚಾಲಯ ನಿರ್ಮಿಸಿ ಕೊಡುತ್ತೇವೆ ಎಂದರು. 119 ಹಾಡಿಗಳಿಗೆ, ವರ್ಷಪೂರ್ತಿ ಪೌಷ್ಟಿಕ ಆಹಾರ ನೀಡಲು ತೀರ್ಮಾನಿಸಲಾಗಿದೆ ಎಂದ ಅವರು, ಆದಿವಾಸಿಗಳು ದುಶ್ಚಟದಿಂದ ದೂರವಿರಿ ಎಂದು ತಿಳಿಸಿದರು.

ಶಾಸಕ ಅನಿಲ್ ಚಿಕ್ಕಮಾದು ಅವರು ಬೋಳೂರು ಹಾಡಿಗೆ ನೂರು ಮನೆಗಳನ್ನು ನಿರ್ಮಿಸಿ ಕೊಡಿ ಎಂದು ಮನವಿ ಮಾಡಿದ್ದಾರೆ. ಅದರಂತೆ ನಿಮ್ಮ ಹಾಡಿಗೆ ನೂರು ಮನೆಗಳನ್ನು ನಿರ್ಮಿಸಿ ಕೊಡಲಾಗುವುದು ಎಂದು ತಿಳಿಸಿದರು. ಹಕ್ಕು ಪತ್ರ ವಿಚಾರವಾಗಿ, ಅಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ ಕಾನೂನು ಪ್ರಕಾರವಾಗಿ ಹಕ್ಕು ಪತ್ರಗಳನ್ನು ವಿತರಿಸಲಾಗುವುದು ಎಂದು ಭರವಸೆ ನೀಡಿದರು.

ನಿಮ್ಮ ಹಾಡಿಯಲ್ಲಿ ನನ್ನ ಜೀವನದಲ್ಲಿ ಮರೆಯಲಾಗದಂತಹ ಒಂದು ಸುಂದರ ಕಾರ್ಯಕ್ರಮವನ್ನು ನಡೆಸಿಕೊಟ್ಟು ನನಗೆ ಸಂತೋಷಪಡಿಸಿದ್ದೀರಿ. ಇದನ್ನು ನಾನು ಎಂದಿಗೂ ಮರೆಯಲಾರೆ ಎಂದರು.

# ಅಕ್ಷರ ದಾಸೋಹದೊಂದಿಗೆ ಅನ್ನ ದಾಸೋಹ ನೀಡುತ್ತಿರುವ ದೇವನೂರು ಮಠ

## ಗುರುವಂದನೆ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಶ್ಲಾಘನೆ



ನಂಜನಗೂಡು, ಆ.10– ದೇವನೂರು ಮಠ ಜನಸಾಮಾನ್ಯರಿಗೆ ಧಾರ್ಮಿಕ ಜಾಗೃತಿ ಮೂಡಿಸುವ ಜೊತೆಗೆ ಅಕ್ಷರ ಮತ್ತು ಅನ್ನದಾಸೋಹಕ್ಕೆ ಪ್ರಸಿದ್ಧಿಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹೇಳಿದರು.

ದೇವನೂರು ಮಠದ ಮಹಾಂತ ಸ್ವಾಮೀಜಿಯವರ. 77ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ನಡೆದ ಗುರುವಂದನೆ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಹಾಂತ ಸ್ವಾಮೀಜಿ ಅವರನ್ನು ಸನ್ಮಾನಿಸಿ ಅವರ ಆಶೀರ್ವಾದ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ದೇವನೂರು ಮಠ ಶತಮಾನಗಳಿಂದ ಬಡವರಿಗೆ ಅಕ್ಷರ ದಾಸೋಹದ ಜೊತೆಗೆ ಅನ್ನದಾಸೋಹ ನೀಡಿದೆ. ಈ ಮಠದ ಮೂಲಕ ಶಿಕ್ಷಣ ಪಡೆದ ಹಲವಾರು ಮಹನೀಯರು ಸಮಾಜದಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ್ದಾರೆ. ಶ್ರೀಮಠದಲ್ಲಿ ಶತಮಾನಗಳಿಂದಲೂ ಸಹ ಹಚ್ಚಿದ ಒಲೆ ಆರಿಲ್ಲ, ಅನ್ನದಾಸೋ ಹಕ್ಕೆ ಪ್ರಸಿದ್ಧಿಯಾಗಿದೆ ಎಂದ ಅವರು. ಶ್ರೀ ಮಠವು ಈ ಭಾಗದ ಜನಸಾಮಾನ್ಯರಿಗೆ ಧಾರ್ಮಿಕ ಜಾಗೃತಿಯನ್ನು ಮೂಡಿಸಿ ಸರಿದಾರಿಯಲ್ಲಿ ಮುನ್ನಡೆಸುವ ಮಹತ್ತರ ಕಾರ್ಯವನ್ನು ನಡೆಸುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ತಾಲೂಕು ವೀರಶೈವ ಮಂಡಳಿ ಅಧ್ಯಕ್ಷ ದೇವನೂರು ಬುಲೆಟ್ ಮಹಾದೇವಪ್ಪ, ಶಿವನಾಗಪ್ಪ, ತರಂಗನಳ್ಳಿ ನಂಜುಂಡಸ್ವಾಮಿ, ಕೆಂಪಣ್ಣ, ಮಣಿ, ನಟರಾಜು, ರವಿ, ಪವನ, ಅರುಣ್, ಆನಂದ್, ಪ್ರಕಾಶ್, ನಂಜಪ್ಪ, ಅಭಿ, ಸೇರಿದಂತೆ ಮುಖಂಡರು ಹಾಜರಿದ್ದರು.

# ಹೆಚ್.ಡಿ.ಕೋಟೆ ಬಳಿ ಬೈಕ್‌ಗಳ ಡಿಕ್ಕಿ: ಇಬ್ಬರು ಸಾವು, ಮಹಿಳೆಗೆ ತೀವ್ರ ಗಾಯ

ಹೆಚ್.ಡಿ.ಕೋಟೆ, ಆ.10– ಎರಡು ಬೈಕ್‌ಗಳ ನಡುವೆ ಸಂಭವಿಸಿದ ಡಿಕ್ಕಿಯಿಂದ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿ ಮಹಿಳೆಯೊಬ್ಬರು ಗಾಯಗೊಂಡಿರುವ ಘಟನೆ ತಾಲೂಕಿನ ದೇವಲಾಪುರ ಗ್ರಾಮದ ಬಳಿ ಜರುಗಿದೆ.

ಸರಗೂರು ತಾಲೂಕು ಬಂಕವಾಡಿ ಗ್ರಾಮದ ಲಂಬಾಣಿ ತಂಡದ ಪ್ರಕಾಶ್ (50) ಮತ್ತು ನೆಮ್ಮನಹಳ್ಳಿ ಗ್ರಾಮದ ದೇವೇಶ್(50) ಮೃತರು. ಶ್ರುತಿ(40) ತಲೆಗೆ ತೀವ್ರವಾದ ಪೆಟ್ಟು ಬಿದ್ದಿದ್ದು, ಹೆಚ್.ಡಿ.ಕೋಟೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆಯ ನಂತರ ಹೆಚ್ಚಿನ ಚಿಕಿತ್ಸೆಗೆ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ.

ಪ್ರಕಾಶ್ ಅವರು ತಮ್ಮ ಪತ್ನಿ ಶ್ರುತಿಯೊಂದಿಗೆ ಯರಹಳ್ಳಿ ಹ್ಯಾಂಡ್ ಪೋಸ್ಟ್‌ನಿಂದ ಬಂಕವಾಡಿ ಗ್ರಾಮಕ್ಕೆ ಹೋಗುತ್ತಿದ್ದು, ದೇವೇಶ್ ಅವರು ಸರಗೂರು ಪಟ್ಟಣದಿಂದ ಹ್ಯಾಂಡ್ ಪೋಸ್ಟ್ ಕಡೆಗೆ ಬರುತ್ತಿದ್ದಾಗ ದೇವಲಾಪುರ ಗ್ರಾಮದ ಬಳಿ ಅಪಘಾತ ನಡೆದಿದೆ.

ಇಬ್ಬರ ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಇಡಲಾಗಿದೆ. ಸರಗೂರು ಪಟ್ಟಣ ಠಾಣೆಯಲ್ಲಿ ದೂರು ದಾಖಲಾಗಿದೆ. ಸಾರ್ವಜನಿಕ ಆಸ್ಪತ್ರೆ ಬಳಿ ಮೃತರ ಕುಟುಂಬದ ರೋಧನ ಮುಗಿಲು ಮುಟ್ಟಿತ್ತು.


# ದೆಗ್ಗನಹಳ್ಳಿ ಡೈರಿಗೆ ಅಧ್ಯಕ್ಷರ ಆಯ್ಕೆ



ಭೇರ್ಯ,ಆ.10– ಕೆ.ಆರ್.ನಗರ ತಾಲೂಕಿನ ದೆಗ್ಗನಹಳ್ಳಿ ಮಹಿಳಾ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ದೇವಮ್ಮ ಸಿದ್ದೇಗೌಡ ಅವಿರೋಧವಾಗಿ ಆಯ್ಕೆಯಾದರು. ಇದುವರೆಗೆ ಅಧ್ಯಕ್ಷೆಯಾಗಿದ್ದ ಯಶೋದಮ್ಮ ಚಿಕ್ಕನಂಜೇಗೌಡರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ದೇವಮ್ಮನವರು ಒಬ್ಬರೆ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿಗಳಾದ ಪಿಡಿಓ ಎಸ್. ರವಿ ಅವಿರೋಧವಾಗಿ ಆಯ್ಕೆ ಘೋಷಿಸಿದರು. ಚುನಾವಣೆಯಲ್ಲಿ ಉಪಾಧ್ಯಕ್ಷೆ ಸಾಕಮ್ಮ ಕುಮಾರ್, ಕಲ್ಪನಾ ಮಹದೇವ್, ಮಹದೇವಮ್ಮ ಕರೀಗೌಡ, ಯಶೋದಮ್ಮ ಚಿಕ್ಕನಂಜೇಗೌಡ, ಯಶೋದಮ್ಮ ಕರೀಗೌಡ, ಯಶೋದಮ್ಮ ಸಿದ್ದೇಗೌಡ, ಲಕ್ಷ್ಮಮ್ಮ ಬಸವೇಗೌಡ, ಶಿವಮ್ಮ ಮಹದೇವ್, ದೇವರಾಜಮ್ಮ ಶಿವಪ್ಪ, ಚನ್ನವೀರಮ್ಮ, ಚಿನ್ನಯ್ಯ ಭಾಗವಹಿಸಿದ್ದರು.

# ಉಕ್ಕಲಗೆರೆ ಗ್ರಾಮ ಪಂಚಾಯಿತಿಯಲ್ಲಿ ಕಾಂಗ್ರೆಸ್ ಆಡಳಿತ

ತಿ.ನರಸೀಪುರ.ಆ.10– ಉಕ್ಕಲಗೆರೆ ಗ್ರಾಮ ಪಂಚಾಯ್ತಿ ಆಡಳಿತ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳ ಪಾಲಾಗಿದ್ದು ನೂತನ ಅಧ್ಯಕ್ಷರಾಗಿ ಲತಾ ಮಂಜುನಾಥ್, ಉಪಾಧ್ಯಕ್ಷರಾಗಿ ಶಿವಮ್ಮ ಪುಟ್ಟ ಮಾದಯ್ಯ ಆಯ್ಕೆಯಾಗಿದ್ದಾರೆ.



ಉಕ್ಕಲಗೆರೆ ಗ್ರಾಪಂ ಎರಡನೇ ಅವಧಿಯ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನಕ್ಕೆ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಲತಾ ಮಂಜುನಾಥ್ ಹಾಗೂ ಸಿದ್ದರಾಜು ಉಮೇದುವಾರಿಕೆ ಸಲ್ಲಿಸಿದರೆ, ಉಪಾಧ್ಯಕ್ಷ ಸ್ಥಾನದ ಆಯ್ಕೆಗಾಗಿ ಪುಟ್ಟಮ್ಮ ಹಾಗೂ ಶಿವಮ್ಮ ಪುಟ್ಟ ಮಾದಯ್ಯ ನಾಮಪತ್ರ ಸಲ್ಲಿಸಿದರು. ಚುನಾವಣೆಯಲ್ಲಿ ಲತಾ 8 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರು. ಸಿದ್ದರಾಜು 6 ಮತ ಪಡೆದರು.

ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶಿವಮ್ಮ 8 ಮತಗಳನ್ನು ಪಡೆದು 6 ಮತಗಳನ್ನು ಪಡೆದ ಪುಟ್ಟಮ್ಮರನ್ನು 2 ಮತಗಳ ಅಂತರದಿಂದ ಪರಾಭವಗೊಳಿಸಿದರು. ಚುನಾವಣಾಧಿಕಾರಿ ಹಾಗೂ ಸಿಡಿಪಿಓ ಗೋವಿಂದೇಗೌಡ, ಸಹಾಯಕ ಚುನಾವಣಾಧಿಕಾರಿ ಭವ್ಯಶ್ರೀ ಚುನಾವಣೆ ಪ್ರಕ್ರಿಯೆ ನಡೆಸಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಯನ್ನು ಪ್ರಕಟಿಸಿದರು.

ಚುನಾವಣಾ ಸಭೆಯಲ್ಲಿ ಸದಸ್ಯರಾದ ಎಂ. ಕುಮಾರ, ಆರ್.ರವಿಶಂಕರ್, ಮಲ್ಲೇಶಪ್ಪ, ನಾಗಲಾಂಬಿಕ, ಶಿವಪ್ರಸಾದ್, ಮಹದೇವಮ್ಮ, ರಾಜಮ್ಮ, ಮಹದೇವ, ಆರ್.ಸಿದ್ದರಾಜು, ಮಂಜುಳ, ಎಂ.ನಿಂಗರಾಜು ಹಾಜರಿದ್ದು ಮತ ಚಲಾಯಿಸಿದರು.

ಚುನಾವಣೆ ನೇತೃತ್ವ ವಹಿಸಿದ್ದ ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ ಮಾತನಾಡಿ, ಕಾಂಗ್ರೆಸ್ ಪಕ್ಷದ 8 ಮಂದಿ ಒಗ್ಗಟ್ಟಾಗಿ ಕೆಲಸ ಮಾಡಿದ ಹಿನ್ನೆಲೆಯಲ್ಲಿ ಪಂಚಾಯತಿ ಅಧಿಕಾರ ಕಾಂಗ್ರೆಸ್ ಪಕ್ಷಕ್ಕೆ ಲಭಿಸಿದೆ.ನಾವು ಮಂಡಲ ಪಂಚಾಯತಿ ಇದ್ದಾಗಿನಿಂದಲೂ ಇಲ್ಲಿಯವರೆಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿಕೊಂಡು ಬಂದಿದ್ದೇವೆ.ಹಾಗಾಗಿ ಮುಂದೆಯೂ ಸದಸ್ಯರೆಲ್ಲರೂ ಒಗ್ಗಟ್ಟಾಗಿ ಪಂಚಾಯ್ತಿ ಕೆಲಸ ಮಾಡಿಕೊಂಡು ಹೋಗುತ್ತಾರೆಂಬ ವಿಶ್ವಾಸ ತಮಗಿದೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಕಗ್ಗಲಿಪುರ ರಾಜಣ್ಣ. ಸೋಮನಾಥಪುರ ಪಿಎಸಿಸಿ ಅಧ್ಯಕ್ಷ ಷಡಕ್ಷರಿ, ಗ್ರಾ.ಪಂ.ಮಾಜಿ ಸದಸ್ಯ ರಾಜು,ಅಡುಗೆ ನಾಗರಾಜು, ಮಲ್ಲಿಕಾ, ಮಾಜಿ ಅಧ್ಯಕ್ಷ ನಾಗಣ್ಣ,ಮಾಜಿ ಉಪಾಧ್ಯಕ್ಷ ಸಿ.ನಂಜುಂಡಯ್ಯ, ರಂಗಸ್ವಾಮಿ, ನಾಗೇಂದ್ರ, ಶ್ರೀಕಂಠ ಸ್ವಾಮಿ,ಅಂಗಡಿ ಶಿವಕುಮಾರ್, ಪ್ರಕಾಶ್, ಪ್ರಭುಸ್ವಾಮಿ, ದೇವರಾಜು, ಸಂಪತ್ ಕುಮಾರ್, ಪಂಚಾಯ್ತಿ ಪಿಡಿಓ ಕೃಷ್ಣಪ್ಪ ಮತ್ತಿತರರಿದ್ದರು.

> ಗ್ರಾಪಂ ಚುನಾವಣೆ ನಡೆಯುದಿದ್ದರೆ ನಾವೆಲ್ಲರೂ ಒಂದೇ ಎಂದು ಹೇಳಬಹುದಿತ್ತು. ಅಥವಾ ಅವಿರೋಧವಾಗಿ ಆಯ್ಕೆಯಾಗಿದ್ದರೆ ಸಾಮೂಹಿಕ ಸಹಮತ ಎನ್ನಬಹುದಿತ್ತು. ಆದರೆ ಚುನಾವಣೆ ನಡೆದು ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷದ ನಡುವೆ ಹಣಾಹಣಿಯಲ್ಲಿ ಕಾಂಗ್ರೆಸ್ ಜಯಗಳಿಸಿದೆ. ಹಾಗಾಗಿ ಇದು ಕಾಂಗ್ರೆಸ್ ಪಕ್ಷದ ಜಯ.
> –ಕೆ.ವಜ್ರೇಗೌಡ, ಪೀಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ.

## ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ. |
| ಸ್ಕ್ರೀನ್ 2 | ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ. |
| ಸ್ಕ್ರೀನ್ 3 | ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ. |
| ಸ್ಕ್ರೀನ್ 4 | ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ. |

## ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ |
| ಸ್ಕ್ರೀನ್ 2 | ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ. |
| ಸ್ಕ್ರೀನ್ 3 | ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ. |
| ಸ್ಕ್ರೀನ್ 4 | ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ. |

## ಮೈಸೂರು ವಿಷನ್ ಸಿನಿಮಾ

ದೂ : 0821–2973519

| | |
|---|---|
| ಸ್ಕ್ರೀನ್ 1 | ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ |
| ಸ್ಕ್ರೀನ್ 2 | ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ. |
| ಸ್ಕ್ರೀನ್ 3 | ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ. |
| ಸ್ಕ್ರೀನ್ 4 | ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ. |

## ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಬೇಬಿ (ತೆ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಬೇಬಿ (ತೆ) | 4 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಡೇ ಅಂಡ್ ಸಮ್‌ಒನ್ (ತೆ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಗದರ್ –2 (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಶೀಲಾ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಬೋಳಾಶಂಕರ (ತೆ) | 4 ಪ್ರದರ್ಶನಗಳು |
| **ಸಂಗಂ** | |
| ಗದರ್ –2 (ಹಿಂ) | 4 ಪ್ರದರ್ಶನಗಳು |
| **ಲಿಡೋ** | |
| ಕಂಟಿನ್ಯೂ | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಬೋಳಾಶಂಕರ (ತೆ) | 4 ಪ್ರದರ್ಶನಗಳು |
| **ಪ್ರಭಾ** | |
| ನಮೋ ಭೂತಾತ್ಮ–2 (ಕ) | 4 ಪ್ರದರ್ಶನಗಳು |

# ರಾಜ್ಯ ವ್ಯಾಪಿ ಇ–ಚಲನ್‌ನಲ್ಲಿ ಸಂಚಾರ ದಂಡ ವಿಧಿಸುವ ಸೇವೆ

## ಮ್ಯಾನ್ಯುಯಲ್ ಸೇವೆ ರದ್ದು; ಎಡಿಜಿಪಿ ಅಲೋಕ್‌ಕುಮಾರ್



ಬೆಂಗಳೂರು,ಆ.10–ದೇಶದಲ್ಲಿಯೇ ಸಂಚಾರ ನಿಯಮ ಉಲ್ಲಂಘಿಸುವ ವಾಹನ ಸವಾರರಿಗೆ ಇ–ಚಲನ್‌ನಲ್ಲಿ ದಂಡ ವಿಧಿಸುವಲ್ಲಿ ಕರ್ನಾಟಕವೇ ಮೊದಲ ಸ್ಥಾನದಲ್ಲಿದೆ. ಇಡೀ ದೇಶದಲ್ಲಿ ಇ–ಚಲನ್‌ನಲ್ಲಿ ದಂಡ ವಿಧಿಸುವ ಪ್ರಕರಣಗಳ ಪೈಕಿ ಶೇ.50 ಕೇಸುಗಳು ನಮ್ಮ ರಾಜ್ಯದಲ್ಲಿಯೇ ದಾಖಲಾಗಿವೆ.

ಈ ಕುರಿತು ಟ್ವಿಟರ್‌ನಲ್ಲಿ ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್, ಮಾಹಿತಿ ಹಂಚಿಕೊಂಡಿದ್ದಾರೆ. ಸಂಚಾರ ನಿಯಮ ಉಲ್ಲಂಘನೆಗೆ ಇ–ಚಲನ್‌ನಲ್ಲಿ ವಿಧಿಸುತ್ತಿರುವ ಒಟ್ಟಾರೆ ಪ್ರಕರಣಗಳಲ್ಲಿ ರಾಜ್ಯದಲ್ಲಿ ಅರ್ಧಕ್ಕಿಂತ ಹೆಚ್ಚು ಕೇಸ್‌ಗಳು ಸೇರಿವೆ. ಆದರೂ, ಕೆಲ ಜಿಲ್ಲೆಗಳಲ್ಲಿ ಸಂಚಾರ ನಿಯಮ ಉಲ್ಲಂಘಿಸುವರಿಗೆ ಕೈಬರಹದಲ್ಲಿ (ಮ್ಯಾನ್ಯುಯಲ್) ರಸೀದಿ ಕೊಟ್ಟು ದಂಡ ವಸೂಲಿ ಮಾಡಲಾಗುತ್ತಿದೆ. ಈ ವ್ಯವಸ್ಥೆಯನ್ನು ಸ್ಥಗಿತಗೊಳಿಸಿ ಇ–ಚಲನ್ ಸೇವೆಯನ್ನು ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ ಎಂದು ಎಡಿಜಿಪಿ ಅಲೋಕ್‌ಕುಮಾರ್ ತಿಳಿಸಿದ್ದಾರೆ. ಆ.1 ರಿಂದ 9ರ ಒಳಗಿನ ಅಂಕಿಅಂಶಗಳನ್ನು ಗಮನಿಸಿದಾಗ ದೇಶದಲ್ಲಿ 42,071 ಸಂಚಾರ ಉಲ್ಲಂಘನೆ ಪ್ರಕರಣಗಳು ದಾಖಲಾಗಿದ್ದು, 2.10 ಕೋಟಿ ರೂ. ದಂಡ ವಿಧಿಸಲಾಗಿದೆ. ಇದರಲ್ಲಿ 325 ಕೇಸ್‌ಗಳಲ್ಲಿ 1.62 ಲಕ್ಷ ರೂ. ದಂಡ ವಸೂಲಿ ಮಾಡಲಾಗಿದೆ. ಕರ್ನಾಟಕದಲ್ಲಿ 24,582 ಕೇಸ್ ದಾಖಲಾಗಿದ್ದು, 1.22 ಕೋಟಿ ರೂ. ದಂಡ ವಿಧಿಸಲಾಗಿದೆ. ಈ ಪೈಕಿ 111 ಪ್ರಕರಣಗಳಲ್ಲಿ 55,500 ದಂಡ ವಸೂಲಿ ಆಗಿದ್ದು, ದೇಶದಲ್ಲಿ ಮೊದಲ ರಾಜ್ಯವಾಗಿದೆ ಎಂದು ಎಡಿಜಿಪಿ ಮಾಹಿತಿ ನೀಡಿದ್ದಾರೆ.

# ಮೈಸೂರಿನ ವೈದ್ಯರಿಗೆ ಯಂಗ್ ಸರ್ಜನ್ ಅವಾರ್ಡ್–2023




ಮೈಸೂರು, ಆ.10–ಮೈಸೂರು ಅಪೋಲೋ ಬಿಜಿಎಸ್ ಆಸ್ಪತ್ರೆಯ ಕನ್ಸಲ್ಟೆಂಟ್ ಕ್ಯಾನ್ಸರ್ ಸರ್ಜನ್ ಡಾ.ರಮ್ಯಾ ಯೆತಡ್ಕ ಅವರು ತಮ್ಮ ಮೂಲ ಸಂಶೋಧನಾ ಪ್ರಬಂಧ 'ಪ್ರೊವೈಡಿಂಗ್ ಸ್ಟಾಂಡರ್ಡ್ ಆಫ್ ಕೇರ್ ಇನ್ ಸರ್ಜಿಕಲ್ ಮ್ಯಾನೇಜ್‌ಮೆಂಟ್ ಆಫ್ ಬ್ರೆಸ್ಟ್ ಕ್ಯಾನ್ಸರ್–ಅಡಾಪ್ಟಬಲ್ ಟೆಕ್ನಿಕ್ಸ್ ಫಾರ್ ಲೋ ರಿಸೋರ್ಸ್ ಸೆಟ್ ಅಪ್'–ಇದಕ್ಕೆ 'ಎಬಿಎಸ್‌ಐ–ಹೈದರಾಬಾದ್ ಯಂಗ್ ಸರ್ಜನ್ ಅವಾರ್ಡ್–2023' ಅನ್ನು ಇತ್ತೀಚೆಗೆ ಸ್ವೀಕರಿಸಿದರು. ಅಹಮದಾಬಾದ್‌ನಲ್ಲಿ ನಡೆದ ಭಾರತದ ಬ್ರೆಸ್ಟ್ ಸರ್ಜನ್ಸ್ ಅಸೋಸಿಯೇಷನ್ (ಎಬಿಎಸ್‌ಐ) ವಾರ್ಷಿಕ ರಾಷ್ಟ್ರೀಯ ಸಮ್ಮೇಳನ ಅಬಸಿಕಾನ್ 2023–ಇಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಬ್ರೆಸ್ಟ್ ಸರ್ಜರಿ ತಜ್ಞರನ್ನು ಒಳಗೊಂಡು ದೇಶಾದ್ಯಂತ 600ಕ್ಕೂ ಅಧಿಕ ಸರ್ಜನ್‌ಗಳು ಈ ಸಮ್ಮೇಳನದಲ್ಲಿ ಹಾಜರಿದ್ದರು. ಡಾ.ರಮ್ಯಾ ಅವರು ಬ್ರೆಸ್ಟ್ ಕ್ಯಾನ್ಸರ್ ಕ್ಷೇತ್ರದಲ್ಲಿನ ಸಂಶೋಧನಾ ಕಾರ್ಯಕ್ಕೆ ಅಬಿಸಿಕಾನ್ 2018ರಲ್ಲಿ ಎಬಿಎಸ್‌ಐ ಇಂಡೋ–ಯುಕೆ ಟ್ರಾವೆಲ್ ಫೆಲೋಶಿಪ್ ಪಡೆದಿದ್ದರು.

# ಮಿಷನ್ ಇಂದ್ರಧನುಷ್‌ಗೆ ಚಾಲನೆ



ಮೈಸೂರು, ಆ.10(ಎಂಕೆ)–ನಗರದ ಮಹದೇಶ್ವರ ಬಡಾವಣೆಯಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಮಿಷನ್ ಇಂದ್ರಧನುಷ್ 5.0 ಕಾರ್ಯಕ್ರಮಕ್ಕೆ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ನವಭಾರತ ಕಟ್ಟುವ ಇಂದಿನ ಪುಟಾಣಿಗಳ ಉಜ್ವಲ ಭವಿಷ್ಯದ ದೃಷ್ಟಿಯಿಂದ ಮಿಷನ್ ಇಂದ್ರಧನುಷ್ ಕಾರ್ಯಕ್ರಮ ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಹಾಗೆಯೇ ಬಾಣಂತಿಯರು, ಗರ್ಭಿಣಿ ಸ್ತ್ರೀಯರು ಅಗತ್ಯವಿರುವ ಲಸಿಕೆಗಳನ್ನು ಹಾಕಿಸಿಕೊಳ್ಳಬೇಕು. ಮಕ್ಕಳಿಗೆ ಸಮಯಕ್ಕೆ ಸರಿಯಾಗಿ ಲಸಿಕೆ ಹಾಕಿಸದಿರುವುದರಿಂದ ಅವರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಎಚ್ಚರಿಸಿದರು.

ಮಿಷನ್ ಇಂದ್ರಧನುಷ್ ಕಾರ್ಯಕ್ರಮದಡಿ ಮಕ್ಕಳಿಗೆ ದೊರೆಯುವ 12 ಬಗೆಯ ಲಸಿಕೆಗಳು ಹಾಗೂ ಗರ್ಭಿಣಿ ಸ್ತ್ರೀಯರಿಗೆ ದೊರೆಯುವ 2 ಬಗೆಯ ಲಸಿಕೆ ಗಳನ್ನು ಶನಿವಾರದವರೆಗೆ ಉಚಿತ ವಾಗಿ ನೀಡಲಿದ್ದು, ಇದರ ಸದುಪಯೋಗ ಪಡೆಯುವಂತೆ ಕೋರಿದರು. ಡಾ.ರಮ್ಯ, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಉತ್ತರಾಖಂಡದಲ್ಲಿ ಭಾರಿ ಮಳೆ; 9 ಸಾವು



ಡೆಹ್ರಾಡೂನ್, ಆ.10– ಉತ್ತರಾಖಂಡದಾದ್ಯಂತ ಭಾರೀ ಮಳೆಯಾಗುತ್ತಿದ್ದು, ಕಳೆದ 24 ಗಂಟೆಗಳಲ್ಲಿ ಮಳೆ ಸಂಬಂಧಿತ ಪ್ರತ್ಯೇಕ ಘಟನೆಗಳಲ್ಲಿ 9 ಮಂದಿ ಸಾವನ್ನಪ್ಪಿದ್ದಾರೆ. ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಬುಧವಾರ ಪರಿಸ್ಥಿತಿಯನ್ನು ಪರಿಶೀಲಿಸಿದ್ದು, ಎಚ್ಚರಿಕೆ ವಹಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ. ಮಳೆ ಸಂಬಂಧಿತ ಘಟನೆಯಲ್ಲಿ ಒಬ್ಬ ವ್ಯಕ್ತಿ ಕಾಣೆಯಾಗಿದ್ದು, ಸುಮಾರು ಅರ್ಧ ಡಜನ್ ಜನರು ಗಾಯಗೊಂಡಿದ್ದಾರೆ.

ಕೇದಾರನಾಥ ಯಾತ್ರೆಯ ಮೂಲ ಶಿಬಿರವಾದ ಗೌರಿಕುಂಡ್‌ನಲ್ಲಿ ಬುಧವಾರ ಬೆಳಗ್ಗೆ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದ ಭೂಕುಸಿತವಾಗಿದ್ದು, ಇಬ್ಬರು ಸಹೋದರರು ಸಾವನ್ನಪ್ಪಿದ್ದಾರೆ ಮತ್ತು ಒಬ್ಬರು ಗಾಯಗೊಂಡರು. ಐದು ದಿನಗಳಲ್ಲಿ ಗೌರಿಕುಂಡ್‌ನಲ್ಲಿ ಸಂಭವಿಸಿದ 2ನೇ ಭೂಕುಸಿತ ಇದಾಗಿದೆ.

ಗೌರಿಕುಂಡ್ ಗ್ರಾಮದ ಹೆಲಿಪ್ಯಾಡ್ ಬಳಿಯ ಕುಟೀರವು ಬೆಟ್ಟದ ಮೇಲಿನಿಂದ ಕುಸಿದು ಬಿದ್ದಿದ್ದು, ಒಂದೇ ಕುಟುಂಬದ ನಾಲ್ವರು ಹೂತು ಹೋಗಿದ್ದಾರೆ ಎಂದು ರುದ್ರಪ್ರಯಾಗ ಜಿಲ್ಲಾ ವಿಪತ್ತು ನಿರ್ವಹಣಾ ಅಧಿಕಾರಿ ನಂದನ್ ಸಿಂಗ್ ರಾಜ್ವರ್ ತಿಳಿಸಿದ್ದಾರೆ. ಜಾನಕಿ ಎಂಬ ಮಹಿಳೆಯನ್ನು ಅವಶೇಷಗಳಿಂದ ರಕ್ಷಿಸಿದ್ದು, ಅವರಿಗೆ ಯಾವುದೇ ಗಾಯಗಳಾಗಿಲ್ಲ. ಆದರೆ ಮೂವರು ಮಕ್ಕಳ ಪೈಕಿ ಇಬ್ಬರು ಅವಶೇಷಗಳಡಿ ಸಿಲುಕಿ ಮೃತಪಟ್ಟಿದ್ದು, 8 ವರ್ಷದ ಬಾಲಕಿ ಗಾಯಗೊಂಡಿದ್ದಾರೆ



## ನ್ಯಾಯಾಲಯದಿಂದ ಬಹಿರಂಗ ಹರಾಜು ಬಗ್ಗೆ ತಿಳುವಳಿಕೆ

ದಿನಾಂಕ 21/08/2023 ರಂದು ಸೋಮವಾರದಂದು ಮೈಸೂರು ನಗರದ 4ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ಜಾರಿ ಸಂಖ್ಯೆ 157/2018 ರಲ್ಲಿ ನೇಮಕವಾಗಿರುವ ನ್ಯಾಯಾಲಯದ ಆಯುಕ್ತರು ದಾವಾ ಷೆಡ್ಯೂಲ್ ಸ್ವತ್ತು ಎ ಅನ್ನು ಅಂದರೆ ಮೈಸೂರು ನಗರದ ಕೆ. ಆರ್ ಮೊಹಲ್ಲಾ, ಮೇದರಕೇರಿ, 1ನೇ ಮುಖ್ಯರಸ್ತೆ, ಮನೆ ನಂ. 2534–ಕೆ–5 ರ ಇದಕ್ಕೆ ಚೌರ್ತಪು ಪೂರ್ವಕ್ಕೆ ವಿದ್ಯಾರಣ್ಯಪುರಂ ಮುಖ್ಯರಸ್ತೆ, ಪಶ್ಚಿಮಕ್ಕೆ ಮಾನಂದವಾಡಿ ಮುಖ್ಯರಸ್ತೆ, ಉತ್ತರಕ್ಕೆ ಬಾದಾಮಿ ನಂಜಪ್ಪ ವೃತ್ತ, ಮತ್ತು ದಕ್ಷಿಣಕ್ಕೆ ಮೇದರಕೇರಿ ರಸ್ತೆ, ಮನೆಯನ್ನು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಬಹಿರಂಗ ಹರಾಜು ಹಾಕಲಾಗುತ್ತದೆ. ತಾವುಗಳು ಆ ದಿನ ಆ ಸಮಯದಲ್ಲಿ ಬಹಿರಂಗ ಹರಾಜಿನಲ್ಲಿ ಭಾಗವಹಿಸಬೇಕೆಂದು ಈ ಮೂಲಕ ತಿಳಿಯಪಡಿಸಿರುತ್ತೆ. ಹಾಗೂ ಹರಾಜಿನಲ್ಲಿ ಅತೀ ಹೆಚ್ಚು ಮೊಬಲಗನ್ನು ಕೂಗಿದವರು ಅದರ ಶೇಕಡ 25% ಭಾಗವನ್ನು ಮಧ್ಯಾಹ್ನ 3 ಗಂಟೆಗೆ ಡಿ.ಡಿ. ತೆಗೆದು–ಕೊಂಡು ಬಂದು, ಘನ ನ್ಯಾಯಾಲಯದಲ್ಲಿ ನೀಡುವುದು ಹಾಗೂ ಮುಂದಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.

ನ್ಯಾಯಾಲಯದ ಅಪ್ಪಣೆ ಮೇರೆಗೆ , ಸಹಿ/– ಎಸ್.ವಿ.ಸಂಗಮೇಶ್ವರನ್
ಬಿ.ಎಸ್ಸಿ. ಬಿ.ಇ.ಎಂ.ಐ.ಇ. ಬಿ.ಎಲ್. ನ್ಯಾಯಾಲಯದ ಆಯುಕ್ತರು.
ದಿನಾಂಕ: 04/08/2023, ಮೊ: 9986013118

## ಕೃಷಿ ಇಲಾಖೆ
### ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಪಿರಿಯಾಪಟ್ಟಣ

ದೂರವಾಣಿ ಸಂಖ್ಯೆ : 08223–274205 Email:adappatna@rediffmail.com

ಸಂಖ್ಯೆ:ಸಕೃನಿ/ಪಿ.ಪ/ಲೆಕ್ಕ–2/ವಾ.ಬಾ./ಟೆಂ.ಪ್ರ/2023–24 ದಿನಾಂಕ: 09–08–2023

### ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ ಸಹಾಯಕ ಕೃಷಿ ನಿರ್ದೇಶಕರು, ಪಿರಿಯಾಪಟ್ಟಣ ರವರ ಕಛೇರಿಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರವಾಸ ಕೈಗೊಳ್ಳಲು ಹೊರಗುತ್ತಿಗೆ ಆಧಾರದ ಮೇಲೆ ಒಂದು ವಾಹನದ (ಕಾರು) ಅವಶ್ಯಕತೆ ಇದ್ದು, ಅಧಿಕೃತ (ನೋಂದಾಯಿತ) ಟ್ರಾವೆಲ್ ಏಜೆನ್ಸಿಗಳಿಂದ ವಾಹನ ಸರಬರಾಜು ಮಾಡಬಯಸುವ ಟೆಂಡರ್‌ದಾರರು (ಟ್ರಾವೆಲ್ ಏಜೆನ್ಸಿಗಳು) ಮೊಹರು ಮಾಡಿ ಲಕೋಟೆಯಲ್ಲಿ ದರಪಟ್ಟಿಯನ್ನು ನಿಬಂಧನೆಗಳಿಗೆ ಒಳಪಟ್ಟು ಆಹ್ವಾನಿಸಲಾಗಿದೆ.

| | | |
|---|---|---|
| 1 | ಟೆಂಡರ್ ಅರ್ಜಿ ಬೆಲೆ | ರೂ.100/– |
| 2 | ಟೆಂಡರ್ ಅರ್ಜಿ ವಿತರಿಸುವ ದಿನಾಂಕ | 14–08–2023 ರಿಂದ 28–08–2023 ರವರೆಗೆ ಸಂಜೆ 3.00 ಗಂಟೆಯೊಳಗೆ |
| 3 | ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ | 28–08–2023 ಸಂಜೆ 3.00 ಗಂಟೆಯೊಳಗೆ |
| 4 | ಟೆಂಡರ್ ತೆರೆಯುವ ದಿನಾಂಕ | 28–08–2023 ಸಂಜೆ 4.00 ಗಂಟೆಗೆ |
| 5 | ಟೆಂಡರ್ ತೆರೆಯುವ ಸ್ಥಳ | ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಪಿರಿಯಾಪಟ್ಟಣ |
| 6 | ಇ.ಎಂ.ಡಿ.ಮೊಬಲಗು (ಡಿ.ಡಿ.) (ಒಂದು ವಾಹನಕ್ಕೆ) | ರೂ.8500/– |
| 7 | ಡಿ.ಡಿ. ತೆಗೆಯಬೇಕಾದ ವಿಳಾಸ | ಸಹಾಯಕ ಕೃಷಿ ನಿರ್ದೇಶಕರು ಕೃಷಿ ಇಲಾಖೆ, ಪಿರಿಯಾಪಟ್ಟಣ |

ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಪಿರಿಯಾಪಟ್ಟಣ ಇವರ ಹೆಸರಿನಲ್ಲಿ ರೂ. 100/– ನೀಡಿ ಟೆಂಡರ್ ಅರ್ಜಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಪಿರಿಯಾಪಟ್ಟಣ ಇವರಿಂದ ಪಡೆಯಬಹುದು. ಟೆಂಡರಿನ ಷರತ್ತುಗಳ ಇನ್ನಿತರೆ ವಿವರಗಳನ್ನು ಈ ಕಛೇರಿ ವತಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಪಿರಿಯಾಪಟ್ಟಣ